# ಅಪರಂಜಿ

ತಿಳಿನಗೆಯ ಕಾರಂಜಿ

ಸೆಪ್ಟೆಂಬರ್ - 2014



# ಅಪರಂಜಿ



ತಿಳಿನಗೆಯ ಕಾರಂಜಿ

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ



ಸಂಪುಟ 31
ಸಂಚಿಕೆ - 12
ಸೆಪ್ಟೆಂಬರ್ - 2014

## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಮಾತಿನಿಂದಲೇ........ | **ವೈ.ಎನ್. ಗುಂಡೂರಾವ್** | 6 |
| ಹಸ್ಬೆಂಡ್-ಬೇಕೇ? | **ನುಗ್ಗೆಹಳ್ಳಿ ಪಂಕಜ** | 10 |
| ಮಾತು ಮುತ್ತು | **ಜಿಬಿಕೋಟೆ ಅನಂತ್** | 12 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 14 |
| ಹಾಸ್ಯೌಷಧಿ | **ಸಂಪಟೂರು ವಿಶ್ವನಾಥ್** | 15 |
| ಕತ್ತೆ ಚಾಕರಿ | **ಕುಮುದಾ ಪುರುಷೋತ್ತಮ್** | 17 |
| ಆಯ್ದ ಚಾಣಕ್ಯ..... | **ಬೇಲೂರು ರಾಮಮೂರ್ತಿ** | 20 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 23 |
| ಇಲಿ ಹಿಡಿಯಕ್ಹೋಗಿ.... | **ಎಚ್.ಆರ್. ಹನುಮಂತ ರಾವ್** | 26 |
| ದೇವ್ರೇ.....ಗತಿ! | **ಲತಾ ಉದಯ ಹೆಗಡೆ** | 32 |
| ತುಂತುರು | **ದಂನಾ** | 38 |
| ಶುದ್ಧ ಅಸುದ್ದಿ | **ಎಚ್ಚೆನ್ಎ** | 39 |


**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

*ಮುದ್ರಣ :* ರವಿ ಗ್ರಾಫಿಕ್ಸ್ - *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ರಾಹುಲ್ ಕಾರಣಕ್ಕೆ ಪ್ರಧಾನಿ ಪಟ್ಟ ಬಿಟ್ಟ ಸೋನಿಯಾ
– ನಟವರ್ ಸಿಂಗ್

***• ರಾಹುಲ್ ಅವರ ದೂರಾಲೋಚನೆ ಮೆಚ್ಚಬೇಕು !!***

★★★

ಕನಕಾಂಬರ ಹೂವು ಕೆ.ಜಿ.ಗೆ ಎರಡು ಸಾವಿರ – ಸುದ್ದಿ

***• ಮಹಾಲಕ್ಷ್ಮಿ ನಸುನಕ್ಕಳಂತೆ !!***

★★★

'ಯುವಕರಿಗೆ ಮೌಲ್ಯಗಳ ಅರಿವು ಮೂಡಿಸಬೇಕು' – ಹೇಳಿಕೆ

***• ಸರಿ, ಮೇಷ್ಟ್ರುಗಳು ಯಾರು ಸ್ವಾಮಿ ?!***

★★★

ನಟವರ್ ಇನ್ನೊಂದು ಪುಸ್ತಕ ಬರೆಯುತ್ತಾರಂತೆ – ಸುದ್ದಿ

***• ಅವರ ಮನೆಯಲ್ಲಿ ಎರಡು ಅಟ್ಟಗಳಿರಬೇಕು !!***

★★★

ಐದು ರಾಜ್ಯಗಳ ರಾಜ್ಯಪಾಲ ಹುದ್ದೆಗೆ ಐವರ ಹೆಸರು ಅಂತಿಮ – ಪತ್ರಿಕೆ

***• ಆರು ಹಿತವರು ನಿನಗೆ ಎನ್ನುವಂತಿಲ್ಲ !!***

★★★

ಅಮೆರಿಕ ಅಸಮಾಧಾನಕ್ಕೆ ಮೋದಿ ತಿರುಗೇಟು – ಪತ್ರಿಕೆ

***• ವಿದೇಶಾಂಗ ಕಾರ್ಯದರ್ಶಿ ಕಾಲು kerry ಯುತ ಬಂದರಂತೆ !!***

★★★

ನಾಡಿನ ಬದುಕಿನ ಭಾಷೆ ಕನ್ನಡ – ಹೇಳಿಕೆ

***• ಅಪರಂಜಿ ತಲೆದೂಗಿದಳಂತೆ !!***

★★★

ನಕಲಿ ವೈದ್ಯರನ್ನು ಪತ್ತೆ ಮಾಡಲು ಸಹಾಯ ಮಾಡಿ
– ಆರೋಗ್ಯ ಸಚಿವರು

***• ಅವರು ಅಸಲೀ ವೈದ್ಯರನ್ನೇ ಮರುಳು ಮಾಡುತ್ತಾರಲ್ಲ !?***

★★★

# ನಮ್ಮ ನಿಮ್ಮಲ್ಲಿ

ನನ್ನ ಮಗಳು ಅಳಿಯ ಇಂಗ್ಲೆಂಡಿನಿಂದ ಸಿಂಗಪುರಕ್ಕೆ ವಲಸೆಹೋದಾಗಿನಿಂದ ನನ್ನ ವಾರ್ಷಿಕ ವಿದೇಶ ಯಾತ್ರೆಯ ಡೆಸ್ಟಿನೇಷನ್ ಸಿಂಗಪುರಕ್ಕೆ ಬದಲಾಗಿದೆ. ಮೊನ್ನೆ ಮೊಮ್ಮಗುವಿಗೆ ಶಾಲೆಯ ರಜಾದಿನಗಳಿದ್ದುದರಿಂದ ಒಂದೆರಡು ವಾರ ಬಂದು ಹೋಗಲು ಮಗಳು ಆಹ್ವಾನಿಸಿದ್ದಳು. ಅಲ್ಲಿದ್ದಾಗ ನಡೆದ ಒಂದು ಸಂಗತಿ ಅಲ್ಲಿನ ಜನರ ಸಂಸ್ಕೃತಿಯನ್ನು ಬಹು ಸ್ಪಷ್ಟವಾಗಿ ತೋರಿಸಿತು. ಅದನ್ನು ನಿಮ್ಮೊಂದಿಗೆ ಹಂಚಿಕೊಳ್ಳೋಣ ಅನ್ನಿಸಿದ್ದರಿಂದ ಈ ಬರಹ. ಸಿಂಗಪುರ ಎಲ್ಲರಿಗೂ ತಿಳಿದಿರುವ ಹಾಗೆ ಬಹು ಶಿಸ್ತಿನ ನಗರ. ಎಲ್ಲೆಲ್ಲಿ ನೋಡಿದರೂ ಮಹಾಸ್ವಚ್ಛತೆ. ಗಿಡಗಳನ್ನು ಒಪ್ಪವಾಗಿ ಕತ್ತರಿಸಿ ಮನೆಯ ತೋಟದಂತೇ ಇಟ್ಟಿರುವ ಸಾರ್ವಜನಿಕ ಹೂದೋಟಗಳು, ಸಮಯಕ್ಕೆ ಸರಿಯಾಗಿ ಬರುವ ಬಸ್ಸು, ಮೆಟ್ರೋ (ಅಲ್ಲಿ ಇದನ್ನು ಎಂಆರ್‌ಟಿ ಅನ್ನುತ್ತಾರೆ) ಒಂದು ಬಿಡಿಕಾಸನ್ನೂ ಹೆಚ್ಚಿಗೆ ಸ್ವೀಕರಿಸದ ಟ್ಯಾಕ್ಸಿ ಡ್ರೈವರುಗಳು ಇವೆಲ್ಲಾ ಅಲ್ಲಿನ ಜನರ ಶಿಸ್ತು, ನಾಗರೀಕ ಪ್ರಜ್ಞೆ ಇವುಗಳಿಗೆ ಬಹು ಚೆನ್ನಾಗಿ ಕನ್ನಡಿ ಹಿಡಿಯುತ್ತವೆ. ಪ್ರತಿಸಾರ್ತಿ ಇದನ್ನೆಲ್ಲಾ ನೋಡಿದಾಗ ನಾವು ಯಾವಾಗ ಇವರಂತೆ ಆಗುವುದು ಎಂದು ನಾನು ಹಲುಬಿರುವುದೂ ನಿಜ.

ಆ ಬೆಳಗ್ಗೆ ಹತ್ತು ಗಂಟೆಗೆ ನಾನು ಸ್ಟೇಡಿಯಂ ಎಂಆರ್‌ಟಿ ಸ್ಟೇಷನ್ನಿನಲ್ಲಿ ರೈಲಿಗಾಗಿ ಕಾಯುತ್ತಿದ್ದೆ. ಲಿಟಲ್ ಇಂಡಿಯಾ ಬಡಾವಣೆಗೆ ಹೋಗಿ ಅಲ್ಲಿರುವ ಇಡ್ಲಿ ಶಾಪಿನಲ್ಲಿ ಮಸಾಲೆ ದೋಸೆ ತಿನ್ನುವುದು ಅಂದು ನನ್ನ ಘನ ಉದ್ದೇಶ. ಸ್ಟೇಡಿಯಂನಿಂದ ಲಿಟಲ್ ಇಂಡಿಯಾ ಸ್ಟೇಷನ್ನಿಗೆ ಹೋಗಬೇಕಾದರೆ ಸರ್ಕಲ್ ಲೈನಿನಲ್ಲಿ ಧೋಬಿ ಘಾಟ್‌ಗೆ ಹೋಗಿ ಅಲ್ಲಿಂದ ಈಸ್ಟ್ ವೆಸ್ಟ್ ಲೈನ್ ಹಿಡಿದು ಲಿಟಲ್ ಇಂಡಿಯಾ ತಲುಪಬೇಕಾಗುತ್ತದೆ. ಅಂದಹಾಗೆ ಈ ಲಿಟಲ್ ಇಂಡಿಯಾ ಬಡಾವಣೆಯಲ್ಲಿ ಬಹುಪಾಲು ಜನ ತಮಿಳರು. ಸಿಂಗಪುರದಲ್ಲಿ ಅನೇಕ ಶತಮಾನಗಳ ಹಿಂದೆಯೇ ಇವರ ಪೂರ್ವಜರು ಇಲ್ಲಿ ಬಂದು ನೆಲೆಸಿದ್ದವರು. ತಮಿಳು, ಮಲೇ ಮತ್ತು ಚೈನೀಸ್ ಈ ಮೂರೂ ಭಾಷೆಗಳು ರಾಷ್ಟ್ರಭಾಷೆಗಳೆಂದು ಇಲ್ಲಿ ಮಾನ್ಯತೆ ಪಡೆದಿವೆ. ಹಾಗಾಗಿ ಮಿಕ್ಕ ಎಲ್ಲಾ ಸ್ಟೇಷನ್ನುಗಳಲ್ಲಿ ಇಂಗ್ಲಿಷಿನಲ್ಲಿ ಅನೌನ್ಸ್‌ಮೆಂಟುಗಳನ್ನು ಮಾಡಿದರೆ ಲಿಟಲ್ ಇಂಡಿಯಾ ಸ್ಟೇಷನ್ನಿನಲ್ಲಿ ತಮಿಳಿನಲ್ಲಿಯೂ ಅನೌನ್ಸ್ ಮಾಡುತ್ತಿರುತ್ತಾರೆ. ಕೊನೆಯಲ್ಲಿ ''ವಣಕ್ಕಂ'' ಎನ್ನುವುದನ್ನು ಕೇಳುವುದೇ ಒಂದು ಮೋಜು.

ಸಿಂಗಪುರದಲ್ಲಿನ ಬಹುಪಾಲು ಜನರು ಚೀನೀಯರು. ಒಂದು ಗಣನೀಯ ಅಲ್ಪ ಸಂಖ್ಯೆಯಲ್ಲಿ ತಮಿಳರು. ಮಿಕ್ಕವರೆಲ್ಲಾ ಬೇರೆ ಬೇರೆ ದೇಶಗಳಿಂದ ಇಲ್ಲಿಗೆ ಕೆಲಸಕ್ಕಾಗಿ ವಲಸೆ ಬಂದವರು. ಇವರುಗಳಲ್ಲಿ ಇಂಡಿಯನ್ನರು, ಬ್ರಿಟಿಷರು, ಅಮೆರಿಕನ್ನರು ಕೆನೇಡಿಯನ್ನರು ಇವರನ್ನೆಲ್ಲಾ ಕಾಣಬಹುದು. ಇಂಗ್ಲಿಷ್ ಇಲ್ಲಿ ಬಹುವಾಗಿ ಪ್ರಚಲಿತ ಭಾಷೆ ಆಗಿರುವುದರಿಂದ

ಇಲ್ಲಿನ ಚೀನೀಯರೂ ಚೆನ್ನಾಗಿ ಇಂಗ್ಲಿಷ್ ಮಾತನಾಡುತ್ತಾರೆ. ಹಾಗಾಗಿ ಇಂಗ್ಲೆಂಡ್ ಮತ್ತು ಇಂಡಿಯಾಗಳಿಂದ ಅನೇಕ ನಾಟಕದ ಗುಂಪುಗಳು ಇಲ್ಲಿಗೆ ಬಂದು ಪ್ರದರ್ಶನ ನೀಡುತ್ತವೆ. ಕಳೆದ ಬಾರಿ ಇಲ್ಲಿಗೆ ಬಂದಿದ್ದಾಗ ಶಬಾನಾ ಆಜ್ಮಿ ಇಲ್ಲಿಗೆ ಬಂದು, ಕಾರ್ನಾಡರ ''ಬಿಕರೇ ಬಿಂಬ್'' ನಾಟಕವನ್ನು ಬಿಂಬಿಸಿದ್ದಳು. ಹೇಮಮಾಲಿನಿಯ ನರ್ತನದ ತಂಡವಂತೂ ಇಲ್ಲೇ ಬಿಡಾರ ಹೂಡಿದೆಯೇನೋ ಅನ್ನುವಷ್ಟು ಮಟ್ಟಿಗೆ ಇಲ್ಲಿ ಪ್ರದರ್ಶನ ನೀಡುತ್ತಿರುತ್ತದೆ. ಇಂಗ್ಲೆಂಡಿನಿಂದಲೂ ಸಹಾ ಅನೇಕ ಖ್ಯಾತ ನಾಟಕದ ಕಂಪನಿಗಳು ಇಲ್ಲಿಗೆ ಬಂದು ತಮ್ಮ ಸಂಸ್ಕೃತಿ ಪ್ರಚಾರ ಕಾರ್ಯವನ್ನು ನಿಷ್ಠೆಯಿಂದ ನಡೆಸಿಕೊಂಡು ಬರುತ್ತಿವೆ. ಹೋದವಾರ ಇಲ್ಲಿಗೆ ಸೌಂಡ್ ಆಫ್ ಮ್ಯೂಸಿಕ್ ಚಿತ್ರದ ಹಾಡುಗಳನ್ನೇ ಆಧರಿಸಿ ಹೆಣೆದ ಒಂದು ನೃತ್ಯನಾಟಕವನ್ನು ಪ್ರದರ್ಶಿಸಲು ಇಂಗ್ಲೆಂಡಿನಿಂದ ತಂಡವೊಂದು ಬಂದಿತ್ತು. ಇಲ್ಲಿನ ಖ್ಯಾತ ಹೊಟೇಲ್ ಮರೀನಾ ಬೇ ಸ್ಯಾಂಡ್ಸ್‌ನ ಆಶ್ರಯದಲ್ಲಿ ಈ ನಾಟಕ ಪ್ರದರ್ಶನ ಏರ್ಪಟ್ಟಿತ್ತು. ಟಿಕೆಟ್ ಬಹು ದುಬಾರಿಯಾಗಿದ್ದರಿಂದ, ಅದಕ್ಕೂ ಮುಖ್ಯವಾಗಿ ನನ್ನ ಆಸಕ್ತಿಯ ಆ್ಯಂಟೆನಾ ಬಹು ವರ್ಷಗಳ ಹಿಂದೆಯೇ ಬೇರೇ ದಿಕ್ಕನ್ನು ಆರಿಸಿಕೊಂಡಿರುವುದರಿಂದ ನನಗೆ ಈ ನಾಟಕವನ್ನು ನೋಡುವ ಹಂಚಿಕೆಯೇನೂ ಇರಲಿಲ್ಲ.

ಹೆದರಬೇಡಿ, ನಾನಿನ್ನೂ ಸ್ಟೇಡಿಯಂ ಸ್ಟೇಷನ್ನಿನ ಪ್ಲಾಟ್‌ಫಾರ್ಮ್‌ನಲ್ಲೇ ನಿಂತಿದ್ದೇನೆ. ಘಟನೆ ಹೇಳುವುದನ್ನು ಮರೆತಿಲ್ಲ. ಇಷ್ಟೆಲ್ಲಾ ಪೀಠಿಕೆ ಮುಂದೆ ನಡೆದ ಘಟನೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಅಗತ್ಯವಾಗಬಹುದು ಅನ್ನಿಸಿದ್ದರಿಂದ, ಹಾಗೂ ಟ್ರೇನ್ ಬರಲು ಇನ್ನೂ ಏಳು ನಿಮಿಷಗಳಿದ್ದದ್ದರಿಂದ ಸಿಂಗಪುರದ ಹಿನ್ನೆಲೆಯ ಒಂದು ವಿಹಂಗಮ ನೋಟ ಕೊಟ್ಟಿದ್ದಾಯಿತು. ಟ್ರೇನ್ ಬಂತು. ನಾನು ಹತ್ತಿ ಹಿರಿಯ ಪ್ರಜೆಗಳಿಗೋಸ್ಕರ ಕಾದಿರಿಸಿದ ಆಸನದಲ್ಲಿ ಕುಳಿತೆ. ಪೀಕ್ ಅವರ್ ಮುಗಿದಿದ್ದರಿಂದ ಗಾಡಿಯಲ್ಲಿ ಅಷ್ಟೇನೂ ಜನಸಂದಣಿ ಇರಲಿಲ್ಲ. ನಮ್ಮ ಮೆಟ್ರೋ ಟ್ರೇನುಗಳಲ್ಲಿರುವಂತೆಯೇ ಇದಿರು ಬದಿರು ಬೆಂಚುಗಳಲ್ಲಿ ಚೀನೀಯರು ಕುಳಿತಿದ್ದರು. ಸೂರಿನಿದ ನೇತಾಡುತ್ತಿದ್ದ ನೇತುಪಟ್ಟಿಯನ್ನು ಒಂದು ಕೈಯ್ಯಲ್ಲಿ ಹಿಡಿದು, ಇನ್ನೊಂದು ಕೈಯ್ಯಲ್ಲಿ ಸ್ಮಾರ್ಟ್ ಫೋನ್ ಚಾಲನೆ ಮಾಡುವುದರಲ್ಲಿ ಹಲವು ಚೀನೀ ಯುವತಿಯರು ಮಗ್ನರಾಗಿದ್ದರು. ಟ್ರೇನ್ ಹೊರಟಿತು. ಮುಂದಿನ ನಿಲ್ದಾಣ ನಿಕೋಲ್ ಹೈವೇ. ಇಲ್ಲಿ ಒಂದು ಬಿಳಿಯರ ಗುಂಪು ಟ್ರೇನನ್ನು ಹತ್ತಿತು. ಮೂವರು ತರುಣರು ಇಬ್ಬರು ತರುಣಿಯರಿದ್ದ ಈ ಗುಂಪು ಬಹು ಉತ್ಸಾಹದಿಂದ ತಮ್ಮತಮ್ಮೊಳಗೇ ಮಾತನಾಡುತ್ತಿದ್ದರು. ಅವರ ಮಾತು ಕಿವಿಗೆ ಬಿದ್ದ ತಕ್ಷಣ ಇವರು ಬ್ರಿಟಿಷರೆಂದು ಸ್ಪಷ್ಟವಾಯಿತು. ಕುಳಿತುಕೊಳ್ಳಲು ಸೀಟ್ ಖಾಲಿ ಇರದಿದ್ದರಿಂದ ಅವರು ಸ್ವಲ್ಪ ಮುಂದೆ ಹೋಗಿ ನೇತುಪಟ್ಟಿಗಳನ್ನು ಹಿಡಿದು ನಿಂತರು.

ಒಮ್ಮೆಲೇ ಒಂದು ಗುಂಪು ಗಾಯನ ಕೇಳಿಬಂದು ನಾನು ಗಾಯನ ಬರುತ್ತಿದ್ದ ದಿಕ್ಕಿನಲ್ಲಿ ನೋಡಿದೆ. ಆ ಇಂಗ್ಲಿಷ್ ತರುಣ ತರುಣಿಯರ ಗುಂಪು ಒಟ್ಟಿಗೆ ನಿಂತು ''ದ ಹಿಲ್ಸ್ ಆರಲಯ್ವ್ ವಿದ್ ದ ಸೈಂಡ್ ಆಫ್ ಮ್ಯೂಸಿಕ್'' ಎಂದು ಸೌಂಡ್ ಆಫ್ ಮ್ಯೂಸಿಕ್ ಚಿತ್ರದ ಜನಪ್ರಿಯ ಹಾಡೊಂದನ್ನು ಸುಶ್ರಾವ್ಯವಾಗಿ ಹಾಡಲು ಪ್ರಾರಂಭಿಸಿದರು. ನಾನಿದ್ದ ವಿಚಿತ್ರ ಪರಿಸ್ಥಿತಿಯನ್ನು ನೆನೆದು ನನಗೇ ನಗು ಬಂತು. ಇದ್ದದ್ದು ಸಿಂಗಪುರದ ಮೆಟ್ರೋ ಟ್ರೇನಿನಲ್ಲಿ, ಹಾಡುತ್ತಿರುವುದು ಬಿಳಿಯ ಬ್ರಿಟಿಷ್ ಗಾಯಕರು, ಕೇಳುಗರೆಲ್ಲಾ ಹಳದಿ ಚೀನೀಯರು.

ನಾನೊಬ್ಬನೇ ದ್ರಾವಿಡ ಮೂಲದ ಕರಿಯ ಭಾರತೀಯ. ಹಾಡು ಮುಗಿಯಿತು. ನಾನು ನನಗರಿವಿಲ್ಲದೆಯೇ ಚಪ್ಪಾಳೆ ತಟ್ಟಿದೆ. ತಕ್ಷಣ ನಾನು ಏನೋ ತಪ್ಪು ಮಾಡಿದ ಭಾವನೆ ಮೂಡಿತು. ಏಕೆಂದರೆ ಇಡೀ ಗಾಡಿಯಲ್ಲಿ ನಾನೊಬ್ಬನೇ ಚಪ್ಪಾಳೆ ತಟ್ಟಿದ್ದು. ಮಿಕ್ಕವರೆಲ್ಲಾ ಗಾಯಕರ ಕಡೆ ಕಣ್ಣನ್ನೂ ಹಾಯಿಸಲಿಲ್ಲ. ಮುಖಗಳಲ್ಲಿ ಯಾವ ವಿಧವಾದ ಭಾವನೆಯನ್ನೂ ತೋರಿಸಲಿಲ್ಲ. ನನಗೋ ಏನಾದರೂ ತಪ್ಪನ್ನು ಮಾಡಿದೆನೋ ಏನೋ. ಜೈಲಿಗೆ ಕಳಿಸದಿದ್ದರೆ ಸರಿ ಅಂತೆಲ್ಲಾ ಅಂದುಕೊಂಡೆ. ಆ ಇಂಗ್ಲೀಷ್ ತರುಣರು ಸ್ವಲ್ಪ ಮುಂದೆ ಬಂದು ನನ್ನ ಬಳಿ ನಿಂತು, ''ದಿಸ್ ಈಸ್ ಫಾರ್ ಯು'' ಅಂತ ಹೇಳಿ ''ಡೋರೇಮಿ'' ಹಾಡಿದರು. ಅಷ್ಟು ಹೊತ್ತಿಗೆ ಧೋಬಿಘಾಟ್ ಸ್ಟೇಷನ್ ಬಂತು. ನಾನು ಅವರಿಗೆ ವಂದನೆಗಳನ್ನು ತಿಳಿಸಿ ಗಾಡಿಯಿಂದ ಇಳಿದು ಬೇರೆ ಗಾಡಿ ಹತ್ತಲು ಹೊರಟೆ.

ಇಡ್ಲಿ ಷಾಪಿನಲ್ಲಿ ದೋಸೆ ತಿನ್ನುತ್ತಿದ್ದಾಗಲೆಲ್ಲಾ ಆಗತಾನೆ ನಡೆದ ಘಟನೆಯೇ ಮನವನ್ನು ತುಂಬಿತ್ತು. ''ಯಾಕೆ ಈ ಚೀನೀಯರು ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ'' ಎಂಬ ಪ್ರಶ್ನೆ ಬಹುವಾಗಿ ಕಾಡಿತು. ಅವರುಗಳು ಸೌಂಡ್ ಆಫ್ ಮ್ಯೂಸಿಕ್ ಹಾಡುಗಳನ್ನು ಮುಂಚೆ ಕೇಳಿಲ್ಲದಿದ್ದರೂ, ಹಾಡು ಸುಶ್ರಾವ್ಯ ಅಂತ ಅವರುಗಳಿಗೆ ಅನ್ನಿಸದಿದ್ದರೂ, ಸೌಜನ್ಯಕ್ಕಾದರೂ ಒಂದೆರಡು ಚಪ್ಪಾಳೆ ತಟ್ಟಿದ್ದರೆ ಏನಾಗುತ್ತಿತ್ತು ಅನ್ನಿಸಿತು. ಇದೇ ಘಟನೆ ನಮ್ಮ ಬೆಂಗಳೂರಿನ ಮೆಟ್ರೋದಲ್ಲಿ ನಡೆದಿದ್ದರೆ, ಚಪ್ಪಾಳೆ ಇರಲಿ, ಅವರುಗಳ ಆಟೋಗ್ರಾಫುಗಳನ್ನೂ ನಮ್ಮ ಜನ ಕೇಳಿ, ಸಂಭ್ರಮ ಪಡುತ್ತಿದ್ದಂತೂ ಖಂಡಿತ. ನಾನು ಮೊದಲು ಚಿಂತಿಸುತ್ತಿದ್ದ ''ನಾವು ಯಾವಾಗ ಇವರಂತಾಗುವುದು'' ಎಂಬ ಚಿಂತೆ ಮಾಯವಾಗಿ ''ಸಧ್ಯ, ನಾವು ಇವರಂತಲ್ಲವಲ್ಲಾ'' ಎಂದು ಸಮಾಧಾನದ ನಿಟ್ಟುಸಿರು ಬಿಡುವಂತಾಯಿತು.

**ಶಿವಕುಮಾರ್**

---

## ಒಂದು ಮಧುರ ನೆನಪು

ಅನಂತಮೂರ್ತಿಯವರಿಗೂ ಹಾಸ್ಯಕ್ಕೂ ಅದೇನು ನಂಟು ಅಂತ ಕೆಲವರು ಕೇಳಿದರು ನಾವು ನಮ್ಮ ಹಾಸ್ಯೋತ್ಸವದ ಉದ್ಘಾಟನೆಗೆ ಅವರನ್ನು ಕರೆದಾಗ. ಆದರೆ ಅವರ ಮಾತು ಕೇಳಿದ ಮೇಲೆ ಎಲ್ಲರಿಗೂ ಅನಿಸಿದ್ದು ನಮ್ಮ ಅನೇಕ ಹಾಸ್ಯ ಭಾಷಣಕಾರರ (ಅಂತ ಸ್ವಯಂ ಘೋಷಿಸಿಕೊಂಡವರಿಗಿಂತ) ಮಾತಿಗಿಂತ ಅನಂತಮೂರ್ತಿಯವರ ಮಾತು ಮಧುರ, ಸ್ವಾರಸ್ಯ. ಅವರು ನಮ್ಮೊಂದಿಗಿದ್ದ ಆ ದಿನಗಳು, ಆ ಕ್ಷಣ ಇಂದಿಗೂ ಮಕರಂದದ ಸ್ವಾದದಂತೆ ಮರುಕಳಸುತ್ತಿದೆ. ಒಂದು ಸಮಾರಂಭದಲ್ಲಿ ನಾನು ಅವರ ಪಕ್ಕ ಕೂತಿದ್ದೆ. ಅಲ್ಲಿಗೆ ಬಂದ ಇನ್ನೊಬ್ಬರನ್ನು ಅನಂತಮೂರ್ತಿಗಳು ಪದೇ ಪದೇ ಕೂತ್ಕೊಳಿ ಕೂತ್ಕೊಳಿ ಅಂತ ಹೇಳ್ತನೇ ಇದ್ದರು. ಆಗ ನಾನು ಇರ್ಲಿ ಬಿಡಿ ಸರ್. ಅವರು ಸ್ಟಾಂಡಿಂಗ್ ಕಮಿಟಿ ಮೆಂಬರ್ ಇರಬೇಕು ಅಂದಾಗ ಅನಂತಮೂರ್ತಿಗಳು ನಕ್ಕು ಚೆನ್ನಾಗಿ ಹೇಳಿದ್ರಿ ಅಂದದ್ದು ಇಂದಿಗೂ ನನ್ನ ನೆನಪಿನಲ್ಲಿದೆ. ಅಪರಂಜಿಯ ಬಳಗದ ಪರವಾಗಿ ಅನಂತಮೂರ್ತಿಯವರಿಗೆ ಶ್ರದ್ಧಾಂಜಲಿ.

– *ಬೇಲೂರು*

# ಮಾತಿನಿಂದಲೇ ಮೊಬೈಲ್ ಚಾರ್ಜ್

- ವೈ.ಎನ್. ಗುಂಡೂರಾವ್

ಮನುಷ್ಯನು ತನ್ನ ಭಾವನೆಗಳಿಗೆ ಮಾತಿನ ರೂಪ ಕೊಟ್ಟಾಗಿನಿಂದಲೂ ಪ್ರಪಂಚದಲ್ಲಿ ಮಾತಿಗೆ ಎಂತಹ ಮಹತ್ವ ಬಂದಿದೆ. ಮಾತೇ ಇಲ್ಲದಿದ್ದರೆ...? ಊಹಿಸಲಸಾಧ್ಯ. ಆದರೆ ಹೀಗೆ ಆಡುವ ಮಾತು ಮೃದುವಾಗಿರಬೇಕು, ಪ್ರಿಯವಾಗುವಂತಿರಬೇಕು. ಕಠಿಣವಾಗಿ, ಬಿರುಸಾಗಿ, ಆಡುವುದರಿಂದ ವಿರೋಧಿಗಳು ಹುಟ್ಟಿಕೊಳ್ಳುತ್ತಾರಷ್ಟೆ. ಆದ್ದರಿಂದ ಹಿತಮಿತವಾಗಿ ಸಮಯ ಸಂದರ್ಭಕ್ಕೆ ತಕ್ಕಂತೆ ಮಾಡನಾಡಿದಾಗಲೇ ಮಾತಿಗೆ ಬೆಲೆ ಬರುವುದು.

ಬಸವಣ್ಣನವರು ತಮ್ಮ ವಚನದಲ್ಲಿ ನುಡಿಯನ್ನು ಮುತ್ತಿನ ಹಾರಕ್ಕೆ ಹೋಲಿಸಿದ್ದಾರೆ. 'ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು' ಎಂದಿದ್ದಾರೆ. ಮಾತು ಶುದ್ಧ ದ್ರವ, ಇಬ್ಬನಿ, ತುಂತುರು, ವರ್ಷಧಾರೆ. ಆದರೆ ನುಡಿದರೆ ಮುತ್ತಿನ ಹಾರದಂತಿರಬೇಕೇ ವಿನಃ ಎಂಜಲು ಹಾರದಂತೆಯೂ ಇರಬೇಕು. ಕೆಲವರು ಮಾತು ಪ್ರಾರಂಭಿಸಿದರೆ ಸಾಕು ಎಂಜಲಿನ ವರ್ಷಧಾರೆಯಲ್ಲಿ ಮಿಂದೇಳಿಸುತ್ತಾರೆ.

**ಒಂದು ಜೋರಾದ ಕೂಗಿಗೆ ಮೊಬೈಲ್ ಛಾರ್ಜ್ ಆಗುವಂತಿದ್ದರೆ?**

ಒಮ್ಮೆ ನಾಡಿಗೇರ ಕೃಷ್ಣರಾಯರು ಅಪರೂಪಕ್ಕೆ ಸಂಗೀತ ಕಚೇರಿಗೆ ಹೋದರಂತೆ. ಇವರು ಹೋಗುವುದರೊಳಗೆ ಕಿಕ್ಕಿರಿದ ಸಭಾಗೃಹ. ಸಂಚಾಲಕರೊಬ್ಬರು ಬನ್ನಿ, ಬನ್ನಿ ಎಂದು ವೇದಿಕೆಯ ಬಳಿಗೇ ಕರೆದೊಯ್ದರಂತೆ. ಆಹಾ ಎಂತಹ ಆತಿಥ್ಯ, ನನ್ನನ್ನು ಇವರೆಲ್ಲಾ ಗಣ್ಯವ್ಯಕ್ತಿಯೆಂದು ಭಾವಿಸಿದ್ದಾರಲ್ಲ ಎಂದು ಬೀಗುತ್ತಾ ಮುಂದೆ ಹೋಗಿ ಕುಳಿತರಂತೆ. ಸಂಗೀತಗಾರರ ಎದುರಿಗೇ ಕೆಲ ಅಡಿಗಳ ಅಂತರದಲ್ಲೇ ಕೂಡುವ ಭಾಗ್ಯ! ಯಾರಿಗುಂಟು ಯಾರಿಗಿಲ್ಲ ಈ ಸೌಭಾಗ್ಯ? ಎಂದು ಕೂತರು. ಸಂಗೀತಗಾರರು ಹಾಡುಗಾರಿಕೆಯನ್ನು ಪ್ರಾರಂಭಿಸಿದ ಕೆಲ ನಿಮಿಷಗಳು ಕಳೆದಿರಬಹುದು. ತುಪುತುಪು ತುಂತುರು ಹನಿ. ಅವರು ಹಾಡಿದ್ದಕ್ಕಿಂತ ತುಂತುರು ಹನಿ ಹಾರಿಸಿದ್ದೇ ಜಾಸ್ತಿ. ಎಂಥ ಅದೃಷ್ಟವೆಂದುಕೊಂಡದ್ದು ಈಗ ಅರ್ಥವಾಗಿತ್ತು. ಇನ್ನು ಮುಂದೆ ಸಂಗೀತ ಸಭೆಗೆ ಬಂದರೆ ಎಂದಿಗೂ ಸಂಗೀತಗಾರರ ಮುಂದೆ ಕೂಡುವುದಿಲ್ಲ ಎಂದು ಶಪಥ ಮಾಡಿದರಂತೆ.

ಇನ್ನು ಕೆಲವರಿರುತ್ತಾರೆ. ಮಾತಿನ ಮೇಲೆ ಹಿಡಿತವೇ ಇರುವುದಿಲ್ಲ, ಏನು ಮಾತನಾಡಬೇಕು, ಎಷ್ಟು ಮಾತನಾಡಬೇಕು ಎಂಬ ಸಮಯ ಸಂದರ್ಭವನ್ನೇ ಅರಿಯದೆ ಮಾತನಾಡಲು ಪ್ರಾರಂಭಿಸಿಬಿಡುತ್ತಾರೆ. ಕೇಳುಗನಿಗೆ ಕಿವಿ ಚಿಟ್ಟು ಹಿಡಿಸುವುದರ ಜೊತೆಗೆ ಇತರರ ಬಗ್ಗೆ ಜರೆದು ಮಾತನಾಡತೊಡಗಿದಾಗ, ಆ ವ್ಯಕ್ತಿಯ ಬಗ್ಗೆ ಗೌರವ ಭಾವನೆ ಇಟ್ಟುಕೊಂಡಿದ್ದವರ ಮನಸ್ಸಿನ ಮೇಲೆ ಎಂತಹ ಪರಿಣಾಮ ಬೀರುತ್ತದೆಂದು ಅರ್ಥಮಾಡಿಕೊಳ್ಳದೆ ಲಘುವಾಗಿ ಮಾತನಾಡಿ ಮೂರನೆಯವರ ಬೆಲೆ ಕಳೆಯುತ್ತಾರೆ.

ಇವರ ಲಘುವಾದ ಮಾತಿನ ಹವ್ಯಾಸ ತಿಳಿದಿದ್ದವರಾದರೆ ಸರಿ, ಇಲ್ಲದಿದ್ದರೆ ಮೂರನೆಯವರ ಬಗ್ಗೆ ಕೇಳುಗನಿಗೆ ಇಲ್ಲದ ಸಂಶಯಕ್ಕೆಡೆ ಕೊಡುತ್ತದೆ. ಅದಕ್ಕೆ ಹೇಳುವುದು, ವ್ಯಕ್ತಿಯ ಬಗ್ಗೆ ಅರಿಯಬೇಕೆಂದರೆ ಅವನ ಚರಿತ್ರೆಯನ್ನೆಲ್ಲಾ ಓದಬೇಕಿಲ್ಲ, ಆತನ ನಡೆ-ನುಡಿ ಎರಡರಿಂದಲೇ ನಿರ್ಧರಿಸಿಬಿಡಬಹುದು. ಅಂತರಂಗ ಪರಿಶುದ್ಧವಾಗಿದ್ದು, ನಿಷ್ಕಲ್ಮಶ ಭಾವನೆಗಳನ್ನು ಹೊಂದಿದ್ದರೆ ಖಂಡಿತ ಅಂತಹವರ ಮಾತಿಗೆ ಬೆಲೆ ಇದ್ದೇ ಇರುತ್ತದೆ. ಆತ ಏನು ಹೇಳುತ್ತಾನೆಂದು, ಆತನ ಮಾತಿಗಾಗಿ ಕಾಯುತ್ತಾರೆ.

ವಾಕ್‌ಶುದ್ಧಿಯಿಲ್ಲದವನಿಗೆ ಕೋಪವೂ ಬಂದುಬಿಟ್ಟರೆ ಅಷ್ಟೇ. ಕೋಪಗೊಂಡಾಗ ಆಡುವ ಮಾತಿನ ಅನಾಹುತವೇನೆಂಬುದು ಆತನಿಗೆ ತಿಳಿಯದು. ಅದಕ್ಕೆ ಹೇಳುವುದು 'ಮಾತೇ ಮುತ್ತು, ಮಾತೇ ಮೃತ್ಯು'. ಒಮ್ಮೆ ಆಡಿದ ಮಾತನ್ನು ಖಂಡಿತ ಹಿಂದಕ್ಕೆ ಪಡೆಯಲಾಗದು. ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಮುಗಿಯಿತು.

ಒಬ್ಬನು ಉಪಯೋಗಿಸುವ ಶಬ್ದಗಳಿಂದ ಆತನ ವ್ಯಕ್ತಿತ್ವ, ಸಂಸ್ಕೃತಿಯನ್ನು ಅರಿಯಬಹುದು. ಆಡುವ ಮಾತು ಒಬ್ಬನ ಘನತೆ ಗೌರವಗಳನ್ನು ಹೆಚ್ಚಿಸಿದಂತೆ, ಇನ್ನೊಬ್ಬರ ಬಗ್ಗೆ ನುಡಿದಾಗ ಅವರ ಘನತೆಯನ್ನು ಕಳೆಯಲೂಬಹುದು.

*ಮಾತಿನಿಂ ನಗೆ ನುಡಿಯು । ಮಾತಿನಿಂ ಹಗೆ ಕೊಲೆಯು*
*ಮಾತಿನಿಂ ಸರ್ವ ಸಂಪದವು ಲೋಕಕ್ಕೆ*
*ಮಾತೇ ಮಾಣಿಕ್ಯವು ಸರ್ವಜ್ಞ ॥*

ಎಂದು ಸರ್ವಜ್ಞ ನುಡಿದಿರುವುದು ಇದಕ್ಕೆ.

ಆದರೆ ಇನ್ನೂ ಕೆಲವರಿರುತ್ತಾರೆ. ಮಾತೇ ಆಡುವುದಿಲ್ಲ, ಮನಸ್ಸಿನಲ್ಲೇ ಎಲ್ಲವನ್ನೂ ಲೆಕ್ಕಹಾಕತೊಡಗುತ್ತಾರೆ. ಆದರೆ ಅವರ ಮಾತಿಗೆ ಬರ ಬಂದುಬಿಡುತ್ತದೆ. ಅಂತಹವರನ್ನು ಕಂಡಾಗ 'ಆಹಹಾ! ಮಾತಾಡೋಕೆ ಸಾಯ್ತಾನೆ ನೋಡು!' ಎನ್ನುತ್ತಾರೆ. ಇದು ಮಾತನಾಡದಿರುವವರ ಬಗ್ಗೆ ಉಪಯೋಗಿಸುವ ಸಾಮಾನ್ಯ ವಾಚಕವಷ್ಟೆ. ಮಾತನಾಡುವುದಕ್ಕೇ ಸಾಯಹೊರಡುವವನ ಬಾಯಲ್ಲಿ ಮಾತಾದರೂ ಹೇಗೆ ಬಂದೀತು?

ಇನ್ನೂ ಕೆಲವರು ಮಾತೇ ಆಡದಿದ್ದಾಗ 'ಮಾತಾಡಕ್ಕೇನಾಗಿತ್ತು ರೋಗ, ಮಾತಾಡಿದ್ರೆ ಮುತ್ತು ಸುರಿದು ಹೋಗ್ತಿತ್ತಾ ನಿನ್ನ ಬಾಯಿಂದ!' ಎಂದು ಬೈಯುತ್ತಾರೆ. ಅಂದರೆ ಸಂದರ್ಭ ಬಂದಾಗ ನಾವು ಮಾತನಾಡಿದಾಗ, ಬಿಗುವಿನಿಂದ ಕೂಡಿದ್ದ ವಾತಾವರಣ ತಿಳಿಯಾಗಬಹುದಿತ್ತು, ಅಪಾರ್ಥಕ್ಕೆಡೆಯಾಗುತ್ತಿರಲಿಲ್ಲ ಎಂಬ ಅರ್ಥದಿಂದ ಈ ರೀತಿ ಹೇಳುತ್ತಾರೆ. ಇದು ಸರಿಯೇ, ಸಂದರ್ಭ ಬಂದಾಗ ಯಾರಿಗೂ ಸಂಶಯಕ್ಕೆಡೆಕೊಡದೆ ಅನ್ನಿಸಿದ್ದನ್ನು ಸ್ಪಷ್ಟವಾಗಿ ಹೇಳುವುದೊಳಿತು.

ಆದರೆ ಕೆಲವರು ಸಂದರ್ಭ ಬಂದರೂ ಮಾತೇ ಆಡದೆ ಪರಿಸ್ಥಿತಿಯನ್ನು ಮತ್ತಷ್ಟು ಜಟಿಲಗೊಳಿಸಿಕೊಳ್ಳುತ್ತಾರೆ. ಮಾತನಾಡುವ ಸಂದರ್ಭ ಬಂದಾಗ ಮಾತಿನ ದಾರಿದ್ರ್ಯತೆ ಇರಬಾರದು.

*ಪ್ರಿಯವಾಕ್ಯ ಪ್ರದಾನೇನ*
*ಸರ್ವೇ ತುಷ್ಯಂತಿ ಜಂತವಃ ।*
*ತಸ್ಮಾತ್ತದೇವ ವಕ್ತವ್ಯಂ*
*ವಚನೇ ಕಾ ದರಿದ್ರತಾ?*

ಪ್ರಿಯವಾಕ್ಯದಿಂದ, ಮೃದುವಾಕ್ಯದಿಂದ ಎಲ್ಲರನ್ನೂ ಸಂತೋಷಗೊಳಿಸುವಂತಹ ಒಂದು ಸುಯೋಗ ಒದಗಿಬಂದಾಗ ಮಾತಿಗೇಕೆ ದಾರಿದ್ರ್ಯತೆ ಬರಬೇಕು ಎನ್ನುವುದೇ ಚಾಣಕ್ಯ ನೀತಿಸಾರ.

ಯಾವಾಗಲೂ ಮಾತು ಸೊಗಸಾಗಿರಬೇಕು, ಮೃದುವಾಗಿರಬೇಕು, ಪ್ರಿಯವಾಗಿರಬೇಕು. ಮಾತಿನಿಂದ ನೊಂದ ಹೃದಯಗಳಿಗೆ ಸಾಂತ್ವನ ನೀಡುವಂತಿರಬೇಕು. ದುಃಖಿತ ಮನಸ್ಸಿಗೆ ನೆಮ್ಮದಿ ಕೊಡಬಲ್ಲದು. ಒಳ್ಳೆಯ ಮಾತುಗಳನ್ನು ಕೇಳಿದಾಗ ಯಾರ ಹೃದಯ ತಾನೇ ಅರಳುವುದಿಲ್ಲ? ಮೃದುವಾದ ಮಾತುಗಳಿಂದ ಯಾವ ಹೃದಯ ಸಂತಸದಿಂದ ಬೀಗುವುದಿಲ್ಲ?

ಒಂದೂರಲ್ಲಿ ಬಡ ದಂಪತಿಗಳು ಹಸುವೊಂದನ್ನು ಸಾಕಿಕೊಂಡಿದ್ದರು. ಆ ಗೃಹಿಣಿ ಪ್ರತಿದಿನ ಗೋವಿಗೆ ಸ್ನಾನಮಾಡಿಸಿ, ಪೂಜಿಸಿ, 'ನಿನ್ನಿಂದಲೇ ನಮ್ಮ ಜೀವನ ನಡೆಯುತ್ತಿರುವುದು, ನೀನೇ ನಮ್ಮ ಪಾಲಿನ ದೇವರು' ಎಂದು ಹೇಳಿ ಹೊರಗಡೆ ಮೇಯಲು ಬಿಡುತ್ತಿದ್ದಳು. ಸಂಜೆ ಹಿಂದಿರುಗಿ ಬಂದಾಗ ಗೋವಿನ ಪಾದ ಪೂಜಿಸಿ, 'ನಿನ್ನಿಂದಲೇ ನಮ್ಮ ಜೀವನ ನಡೆಯುತ್ತಿರುವುದು, ನೀನೇ ನಮ್ಮ ಪಾಲಿನ ದೇವರು' ಎಂದು ಹೇಳಿ ಹಾಲು ಕರೆದುಕೊಂಡು, ಮಾರಿ ಜೀವನ ಸಾಗಿಸುವಳು.

ಹೀಗೆ ಪ್ರತಿದಿನವೂ ನಡೆಯುತ್ತಿತ್ತು. ಕೆಲವು ಸಾರೆ ಹಸು ಹುಲ್ಲು ಮೇಯಲು ಹೋದಾಗ ಯಾರದ್ದೋ ಹೊಲಕ್ಕೋ, ಗದ್ದೆಗೋ ನುಗ್ಗಿದಾಗ ಏಟು ತಿಂದು ಅರೆಹೊಟ್ಟೆಯಾಗಿ ಬಂದರೂ ಗೃಹಿಣಿಯ ಮಾತಿನಿಂದ ಅದರ ನೋವೆಲ್ಲಾ ಮಾಯವಾಗಿಬಿಡುತ್ತಿತ್ತು. ಹೀಗೆ ಹತ್ತಿರದ ಹೊಲಗದ್ದೆಗಳಲ್ಲಿ ಮೇವು ದೊರೆಯದಿದ್ದಾಗ ಆ ಗೋವು ಕಾಡಿನ ಅಂಚನ್ನು ಪ್ರವೇಶಿಸಿತು. ನೋಡಿದರೆ ಆ ಗೋವಿಗೆ ಆಶ್ಚರ್ಯ. ಅದೆಂತಹ ಹುಲ್ಲು ಮೈದಾನ. ಸಮೃದ್ಧಿಯಾಗಿ ಹುಲ್ಲು ಬೆಳೆದಿದ್ದು ಹೊಟ್ಟೆ ತುಂಬಾ ಮೇಯ್ದು ಬಂದಿತು. ಯಥಾಪ್ರಕಾರ ಗೋವನ್ನು ಪೂಜಿಸಿದ ಆಕೆ, 'ನಿನ್ನಿಂದಲೇ ನಮ್ಮ ಜೀವನ, ನೀನೇ ನಮ್ಮ ಪಾಲಿನ ದೇವರು' ಎಂದಾಗ, ಗೋವು ಸಮೃದ್ಧಿಯಾಗಿ ತಿಂದು ಬಂದಿದ್ದರಿಂದ ಹೆಚ್ಚಿಗೆ ಹಾಲು ನೀಡಿತು. ಗೋವಿಗೂ, ಗೃಹಿಣಿಯ ಮಾತಿನಿಂದ ದೂರದಿಂದ ಬಂದಿದ್ದರ ಶ್ರಮ ಪರಿಹಾರವಾಯಿತು.

ಮಾರನೆಯ ದಿನವೂ ಈ ಗೋವು ಅದೇ ಕಾಡಂಚಿಗೆ ಹೋದಾಗ ಅಲ್ಲಿ ಆಗಲೇ ಇನ್ನೊಂದು ಹಸು ಹುಲ್ಲು ಮೇಯುತ್ತಿತ್ತು. ಎರಡೂ ಪರಿಚಯ ಮಾಡಿಕೊಂಡು ಸ್ನೇಹಿತರಾದವು. ಕಾಡಿನಲ್ಲೇ ವಾಸವಾಗಿದ್ದ ಗೋವು ಒಂದು ದಿನ 'ನೀನೇಕೆ ವೃಥಾ ಅಷ್ಟು ದೂರ ಹೋಗಿ ಹಾಲು ನೀಡಿ ಶ್ರಮ ಪಡುತ್ತೀಯಾ, ಇಲ್ಲೇ ನನ್ನ ಜೊತೆ ಇದ್ದು ಬಿಡು'

ಎಂದಿತು. ಈಗ ಊರಿನ ಗೋವಿಗೆ ಸಂದಿಗ್ಧತೆ ಪ್ರಾರಂಭವಾಯಿತು. ಹೋಗುವುದೋ ಬಿಡುವುದೋ ಎಂದು ಯೋಚಿಸತೊಡಗಿತು. ಕಡೆಗೂ ನಿರ್ಧರಿಸಿ ಗೃಹಿಣಿಯ ಮನೆಗೆ ಹಿಂದಿರುಗಿ ಹಾಲು ನೀಡಿ ಮೇಯಲು ಹೊರಟಿತು. ಆಗ ಕಾಡಿನ ಗೋವು 'ನೀನೆಂತಹ ಬುದ್ಧಿಗೇಡಿ, ಅವರೇನು ಹುಲ್ಲು ನೀಡುವುದಿಲ್ಲ, ನೀರು ಕೊಡುವುದಿಲ್ಲ, ನೀನೇಕೆ ಹೋಗುತ್ತೀಯಾ?' ಎಂದಿತು. ಆಗ ಈ ಗೋವು ''ನೋಡು, ಆ ಗೃಹಿಣಿ 'ನಿನ್ನಿಂದಲೇ ನಮ್ಮ ಜೀವನ, ನೀನೇ ನಮ್ಮ ಪಾಲಿನ ದೇವರು' ಎಂದು ಹೇಳಿದಾಗ ಎಂತಹ ಆನಂದವಾಗುತ್ತದೆ ಗೊತ್ತಾ! ಕಾಡಿನಲ್ಲೇ ಇದ್ದುಬಿಟ್ಟರೆ ಅಂತಹ ಮಾತುಗಳಿಂದ ವಂಚಿತನಾಗಿ ಬಿಡಬೇಕಾಗುತ್ತದೆ. ಗೃಹಿಣಿಯ ಮಾತಿನಿಂದ ಎಂತಹ ಸಂತೋಷ ಸಿಗುತ್ತದೆ. ಅದನ್ನೇಕೆ ತಪ್ಪಿಸಿಕೊಳ್ಳಲಿ'' ಎಂದಿತಂತೆ. ಸಿದ್ಧೇಶ್ವರ ಸ್ವಾಮಿಗಳು ತಮ್ಮ ಪ್ರವಚನದ ಸಂದರ್ಭದಲ್ಲಿ ಹೇಳಿದ ಕತೆ ಇದು. ಆದರೆ ಒಳ್ಳೆಯ ಮಾತು ಮನುಷ್ಯನಿಗೆ ಎಂತಹ ಸುಖ, ಸಂತೋಷ ಕೊಡಬಹುದಲ್ಲವೇ?

ಆದರೆ ಸ್ಥಿಮಿತ ತಪ್ಪಿದ ಮನುಷ್ಯನು ಕೋಪಗೊಂಡ ಸಂದರ್ಭದಲ್ಲಿ ಮೃದುವಾದ ಮಾತುಗಳಿಗೆ ಅವಕಾಶವೇ ಇರುವುದಿಲ್ಲ. ಎದುರಿಗಿದ್ದವರ ಮೇಲೆ ಕಿರುಚಾಡತೊಡಗುತ್ತಾನೆ. ಪ್ರತಿಸ್ಪರ್ಧಿಯು 'ಕಿರುಚಬೇಡ, ನಿನಗಿಂತ ಜೋರಾಗಿ ಕಿರುಚಲು ನನಗೂ ಬರುತ್ತೆ' ಎಂಬಂತಹ ಡೈಲಾಗನ್ನು ನೀವು ಹಲವಾರು ಟಿವಿ ಧಾರಾವಾಹಿಗಳಲ್ಲಿ ಕೋಪಗೊಂಡಾಗ ಇಬ್ಬರ ನಡುವೆ ನಡೆಯುವ ಸಂಭಾಷಣೆಗಳಲ್ಲಿ ಕೇಳಿರಬಹುದು. ಆದರೆ ಇಂತಹ ಕಿರುಚಾಟಕ್ಕೂ ಬೆಲೆ ಬಂದಿದೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಕಿರುಚಾಟದಿಂದಲೂ ನೀವು ಲಾಭ ಪಡೆಯಬಹುದು ಎಂಬುದನ್ನು ನೀವು ನಂಬಲೇಬೇಕು.

ಇಂದು ಮಾತಿಗಿಂತ ಮೊಬೈಲ್ ಟೆಲಿಫೋನ್ ಯುಗ. ನಿಮ್ಮ ಕಿರುಚಾಟದ ಧ್ವನಿ ನೂರು ಡೆಸಿಬಲ್‌ಗಿಂತ ಜಾಸ್ತಿಯಿದ್ದರೆ ಅಂದರೆ ನಿಮ್ಮ ಮನೆಯಿಂದ ಮೂರನೆಯ ಮನೆಯಷ್ಟು ದೂರದವರೆಗೆ ನಿಮ್ಮ ಶಬ್ದ ತಲುಪುವಷ್ಟು ಜೋರಾಗಿದ್ದರೆ ಅದನ್ನು ಶಕ್ತಿಯಾಗಿ ಮಾರ್ಪಡಿಸಬಲ್ಲ ತಂತ್ರಜ್ಞಾನವನ್ನು ದಕ್ಷಿಣ ಕೊರಿಯದ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. ಈ ದಿಸೆಯಲ್ಲಿ ಸಾಕಷ್ಟು ಸಾಧಿಸಿದ್ದಾರೆ. ಶಕ್ತಿಯುತ ಶಬ್ದವನ್ನೇ ಶಕ್ತಿಯಾಗಿ ಮಾರ್ಪಡಿಸಿದಾಗ ನಿಮ್ಮ ಮೊಬೈಲ್ ಫೋನನ್ನು ಎಲೆಕ್ಟ್ರಿಕ್ ಕರೆಂಟ್‌ಗೆ ಹಾಕಿ ಚಾರ್ಜ್ ಮಾಡುವ ಅವಶ್ಯಕತೆಯೇ ಇರುವುದಿಲ್ಲ. ವಾಹನ ದಟ್ಟಣೆ ಇರುವ ಹೆದ್ದಾರಿಯಲ್ಲಿ ವಾಹನಗಳ ಶಬ್ದವೂ ಕೂಡ ಶಕ್ತಿಯ ಮೂಲವಾಗುತ್ತದೆ. ಜೊತೆಗೆ ಜೋರಾಗಿ ಮಾತಾಡುವವರ ಬಳಿ ಕಿವಿಗೆ ಹತ್ತಿ ತುರುಕಿಕೊಂಡು ಮೊಬೈಲ್ ಚಾರ್ಜರನ್ನು ತೆರೆದಿಟ್ಟರೆ ಸಾಕು, ಮೊಬೈಲ್ ಚಾರ್ಜ್ ಆದಂತೆ. ಇದಕ್ಕೆ ಅಲ್ಲವೇ ಹೇಳಿರುವುದು 'ಇಬ್ಬರ ಜಗಳ ಮೂರನೆಯವನಿಗೆ ಲಾಭ' ಎಂದು. ಏರು ಜಗಳವಾಡುವವರ ಹತ್ತಿರ ಸುಮ್ಮನೆ ನಿಂತು ನಿಮ್ಮ ಚಾರ್ಜರ್ ಆನ್ ಮಾಡಿದರಾಯಿತು.

ನೋಡಿದಿರಾ! ಮಾತೇ ಮೃತ್ಯು ಎಂದಿದ್ದುದು ಇದೀಗ ನಿಮ್ಮ ಮೊಬೈಲ್‌ಗೆ ಶಕ್ತಿಯೂ ಆಗಬಹುದು ಅಲ್ಲವೇ?

# ಹಸ್ಬೆಂಡ್-ಬೇಕೇ?

– ನುಗ್ಗೆಹಳ್ಳಿ ಪಂಕಜ

"**ದೊ**ಡ್ಡದೊಡ್ಡ ಅಕ್ಷರಗಳಲ್ಲಿ ಹಾಕಿದ್ದ ಆ ಫಲಕವನ್ನ ಕಂಡ ಪಾರ್ವತಿ ರೋಮಾಂಚಿತಳಾದಳು; ಆಗದೆ? ಮದ್ವೆ ಆಗದ ಎಲ್ಲಾ ಹೆಣ್ಣುಮಕ್ಳೂ ಆಗೋದೇ! ಆದ್ರೆ, ಈ ಹಸ್ಬೆಂಡ್ ಅನ್ನೋ ವ್ಯಕ್ತಿ ಭಗವಾನ್ ವಿಷ್ಣು ಹಾಗೇ ಬಲೇ ಮಾಯಾವಿ! ಕೈಗೆ ಸಿಗೋದೇ ಇಲ್ಲ! ಭಲೇ, ಯಾವ್ಯಾವುದೋ ಹಸ್ಬೆಂಡ್ ಬೇಡ, ಈ ಪಾರ್ವತಿಯಮ್ಮನಿಗೆ. ಅವಳ ಮನಸ್ಸಿಗೆ ಒಪ್ಬೇಕು – ಅಮ್ಮ ಒಪ್ಪಿದ ಗಂಡುಗಳು ಯಾರೂ ಸರಿ ಇರ್ಲಿಲ್ಲ.

**ಹೆಂಡತಿಯರ ಮಾತಿಗೆ ಬೆಂಡಾಗುವ ಹಸ್ಬೆಂಡುಗಳಿಗೆ ಫುಲ್ ಡಿಮ್ಯಾಂಡ್**

ಸಿಟ್ಟಿನಿಂದ ಅಮ್ಮಾ ಕೈ ಒದರಿಬಿಟ್ಟಿದ್ರು, "ನಿನ್ನ ಗಂಡನ್ನ ನೀನೇ ಆರಿಸ್ಕೊ" ಅಂತ.

ಅದಕ್ಕೇ ಆ ಫಲಕಾನ ನೋಡಿ ಬಲೇ ಖುಷಿಯಾಯ್ತು, ಪಾರ್ವತಿಗೆ.

ಪ್ರವೇಶದ್ವಾರದಲ್ಲಿ ಈ ಸೂಚನೆಗಳು –

1) ಇಲ್ಲಿ ಆರು ಮಹಡಿಗಳಿವೆ – ಒಂದೊಂದು ಮಹಡಿಯಲ್ಲೂ ವಿವಿಧ ರೀತಿಯ ಗಂಡಂದಿರು!

2) ಸರಿಯಾಗಿ ಆಲೋಚಿಸಿ – ದಿನವೆಲ್ಲಾ ಅಲ್ಲಿ ಇದ್ದು ಸರಿಯಾದ ನಿರ್ಣಯವನ್ನ ತೆಗೆದುಕೊಳ್ಳಬಹುದು. ಅವಸರವೇನಿಲ್ಲ.

3) ಆದ್ರೆ ಒಂದು ರೂಲ್ಸ್ – ನೆನಪಿನಲ್ಲಿಡಿ. ಒಂದ್ಸಲ ಒಂದು ಮಹಡೀನ ಬಿಟ್ಟ್ರೇಲೆ ಆಯ್ತು, ಮತ್ತೆ ಅಲ್ಲಿಗೆ ಬರೋ ಹಾಗಿಲ್ಲ.

4) ಕೊನೆಯದಾಗಿ, ಜೀವಮಾನದಲ್ಲಿ ಒಂದ್ಸಲ ಮಾತ್ರ ಈ ನಮ್ಮ ಅಂಗಡಿಗೆ ಬರಬಹುದು ಮತ್ತೆ ಬರುವಂತಿಲ್ಲ.

ತನ್ನ ಐಡಿಯಲ್ ಗಂಡ ಸಿಕ್ಕೇಬಿಟ್ಟ ಎಂಬೋ ಹುರುಪಿನಿಂದ ಸರಸರನೆ ಮೊದಲನೆಯ ಅಂಗಡಿಗೆ ಹೋದಳು ಕನ್ಯಾಮಣಿ. ಅಲ್ಲಿ ಹೀಗೆ ಬರೆದಿತ್ತು –

"ಇಲ್ಲಿರೋ ವರಗಳಿಗೆಲ್ಲಾ ಒಳ್ಳೆಯ ಕೆಲಸಗಳಿವೆ, ಮತ್ತು ದೈವಭಕ್ತಿಯುಳ್ಳವರು."

"ಅಷ್ಟಾದ್ರೆ ಸಾಲ್ದು, ಇನ್ನೂ ಮುಂದಕ್ಕೆ ಹೋದ್ರೆ, ಇನ್ನೂ ಒಳ್ಳೆಯ ವರ ಸಿಗಬಹುದು" ಎನ್ನಿಸ್ತು, ಪಾರ್ವತಿಗೆ.

ಸರಿ, ಎರಡನೆ ಮಹಡಿಗೆ ಹೋದಳು.

ಅಲ್ಲಿ ಬರೆದಿತ್ತು – "ಇಲ್ಲಿರೋ ವರಗಳಿಗೆಲ್ಲಾ ಒಳ್ಳೆಯ ಕೆಲಸಗಳಿವೆ, ದೈವಭಕ್ತರು ಮತ್ತು ಮಕ್ಕಳೆಂದರೆ ತುಂಬಾ ಪ್ರೀತಿ."

ಅವರಲ್ಲೇ ಯಾರನ್ನಾದ್ರೂ ಆರಿಸೋಣ ಅಂತನ್ನಿಸಿದ್ರೂ, ಚಪಲ – ''ಇನ್ನೂ ಮೇಲೆ ಹೋದ್ರೆ, ಇದಕ್ಕಿಂತ ಇನ್ನೂ ಸೊಗಸಾದ ವರ ಸಿಗ್ಬಹುದು'' ಎಂದು.

ಸರಿ, ಮೂರನೆಯ ಮಹಡಿಗೆ ಹೋದಳು. ಅಲ್ಲಿ ಹೀಗೆ ಬರೆದಿತ್ತು – ''ಇಲ್ಲಿರೋ ವರಗಳಿಗೆಲ್ಲಾ ಒಳ್ಳೆಯ ಕೆಲಸಗಳಿವೆ, ದೈವಭಕ್ತಿ ಬಹಳ, ಮಕ್ಕಳೆಂದರೆ ತುಂಬಾ ಪ್ರೀತಿ ಮತ್ತು ನೋಡಲು ಸುಂದರಾಂಗರು.''

''ಇದಕ್ಕಿಂತ ಬೇಕೇ? ಇಲ್ಲಿಯೇ ಯಾರನ್ನಾದ್ರೂ ಆರಿಸೋಣ'' ಅಂತನ್ನಿಸಿದ್ರೂ, ದುರಾಶೆ ಬಿಡ್ಬೇಕಲ್ಲ?

ನಾಲ್ಕನೆಯ ಮಹಡಿಗೆ ಕಾಲಿಟ್ಟಳು. ಅಲ್ಲಿ ಬರೆದಿತ್ತು – ''ಇಲ್ಲಿರೋ ವರಗಳಿಗೆಲ್ಲಾ ಒಳ್ಳೆಯ ಕೆಲಸಗಳಿವೆ, ದೈವಭಕ್ತಿ ಅಪಾರ, ಮಕ್ಕಳೆಂದ್ರೆ ಬಲು ಪ್ರೀತಿ, ನೋಡಲು ಸುಂದರರು ಮತ್ತು ಮನೆಕೆಲಸಗಳಲ್ಲಿ ಸಹಾಯ ಮಾಡುವರು'' ಎಂದು.

ಮನೆಕೆಲಸ ಮಾಡೋ ಗಂಡ ಯಾರಿಗೆ ಬೇಡ? ಪಾರ್ವತಿ ಒಪ್ಪಿಕೊಳ್ಳುವವಳಿದ್ದಳು, ಆದರೆ ಹಾಳು ದುರಾಸೆ ಮತ್ತು ಕುತೂಹಲ? ಸರಿ, ಐದನೆಯ ಮಹಡಿಗೆ ಹೋದಳು. ''ಅಲ್ಲಿ ಇನ್ನೂ ಬರ್ಜರಿ ಹಸ್ಬೆಂಡ್ ಸಿಗಬಹುದು'' ಅಂತ..

''ಇಲ್ಲಿರೋ ವರಗಳಿಗೆ ಒಳ್ಳೆಯ ಕೆಲಸ ಇದೆ, ಒಳ್ಳೆಯವರು, ಮಕ್ಕಳೆಂದರೆ ಬಲು ಪ್ರೀತಿ, ನೋಡಲೂ ಸುಂದರರು, ಮನೆಕೆಲಸದಲ್ಲಿ ಸಹಾಯ ಮಾಡೋವ್ರು ಮತ್ತು ಅದ್ಭುತ ಪ್ರೇಮಿಗಳು.''

''ಇಲ್ಲೇ ಆರಿಸೋಣ, ಎಲ್ಲಾ ವಿಷಯಗಳಲ್ಲೂ ಸರಿಯಾಗಿದೆ'' ಅಂತ ಅಂದುಕೊಂಡ್ರೂ, ''ಇಲ್ಲಾ ಇಲ್ಲೇ ಇಷ್ಟು ಸೊಗಸಾಗಿರೋವಾಗ, ಇನ್ನು ಕೊನೆಯ ಮಹಡಿ ಮೇಲೆ ಅದೆಂಥಾ ಅದ್ಭುತ ಗಂಡ ಸಿಗ್ತಾನೋ? ಯಾಕೆ ಬಿಡ್ಬೇಕು? ಇಷ್ಟು ದೂರ ಬಂದವಳು, ಅಲ್ಲಿಗೂ ಹೋಗಿ ಆ ಗಂಡನನ್ನ ಪಡೆಯೋಣ'' ಎಂದವಳೇ, ಒಂದೇ ಆಸೆಯಿಂದ ಸರಸರನೆ ಹತ್ತಿದಳು ಆರನೆಯ ಮಹಡಿಗೆ. ಅಲ್ಲಿ ಹಾಕಿತ್ತು –

''ಆಯ್ತೇ ಮ್ಯಾಡಮ್, ಐದು ಮಹಡಿಗಳನ್ನೂ ನೋಡಿ? ಯಾರೂ ಒಪ್ಪಿಗೆ ಆಗ್ಲಿಲ್ವೇ? ಅನ್ಯಾಯ, ಬಲು ಅನ್ಯಾಯ – ಇದ್ರಲ್ಲೇ ಗೊತ್ತಾಗತ್ತೆ, ''ಈ ಹೆಂಗಸು ಜಾತೀನ ಮೆಚ್ಚಿಸೋದು ಎಷ್ಟು ಕಷ್ಟ, ಎಂಥಾ ಅಸಮಾನ್ಯ ವರನ ಕೈಲೂ ಸಾಧ್ಯ ಇಲ್ಲ!'' ಅನ್ನೋದು. ಇಷ್ಟು ದೂರ ಬಂದು ಭೇಟಿ ಕೊಟ್ಟಿದ್ದಕ್ಕೆ ಅಪಾರ ವಂದನೆಗಳು.

ಕೆಳಗಿಳಿದು ಹೋಗೋದಿಕ್ಕೆ ಪಕ್ಕದಲ್ಲೇ ಮೆಟ್ಟಲುಗಳಿವೆ – ಹುಷಾರು, ಇಳಿಯೋವಾಗ..........

---

**ಇದ್ದಂತೆ ಚೂಪಾದ ನೈಫು ಅದಕ್ಕೇ ವೈಫು**

**ಗಂಡ ಇದ್ದಂತೆ ಬೆಂಡು ಅದಕ್ಕೇ ಅವನು ಹಸ್ಬೆಂಡು**

# ಮಾತು ಮುತ್ತು

**- ಜಿಬಿಕೋಟೆ ಅನಂತ್**

**ಮು**ತ್ತು ಒಡೆದರೆ ಹೋಯ್ತು.. ಮಾತು ಆಡಿದರೆ ಮುಗೀತು... ಹೀಗೇ ಕೆಲವೊಮ್ಮೆ ಮಾತು ಆಡುವಾತನಿಗೆ ಅವನ ಮಾತಿನ ಹಿಂದಿನ ಅರ್ಥವೇ ಬೇರೆ ಇರುತ್ತೆ. ಆದರೆ ಕೇಳಿದೋರಿಗೆ ಆ ಮಾತುಗಳು ಏನು ಮನದಟ್ಟು ಮಾಡಿಸಬೇಕೋ ಅದು ಬಿಟ್ಟು ಅಪಾರ್ಥ ಕೊಟ್ಟಿರುತ್ತೆ.

ಸಾಹೇಬರೊಬ್ಬರು ದೊಡ್ಡ ಹುದ್ದೆಯಲ್ಲಿ 3 1/2 ದಶಕ ಮೆರೆದು ನಿವೃತ್ತಿ ಹೊಂದಿದ್ದರು. ದಿನಾ ಬಸ್ಸಿನಲ್ಲಿ ಕುಂತು, ನಿಂತು, ನೇತಾಡ್ತಾ ಕಚೇರಿಗೆ ಹೋಗಿ ಅಲ್ಲೋ Report, Meeting, Tour, ಅಕೌಂಟ್ಸ್, ಆಡಿಟ್, ಡಬ್ಬಿ ಊಟ ಹೀಗೆ ಒಂದಾ ಎರಡಾ.. ಎಲ್ಲಾ ಕಾಟ ತಪ್ಪಿತು ಅಂತ ನಿಟ್ಟುಸಿರುಬಿಟ್ಟರು. ಮರುದಿನ ಬೆಳಿಗ್ಗೆ ಬೇಗ ಏಳೋ ಚಿಂತೆ ಇಲ್ಲ ಅಂತ ಮನಸ್ಸಲ್ಲಿದ್ದರೂ ಅಭ್ಯಾಸಬಲ ಎಚ್ಚರ ಆಯ್ತು. ವರಾಂಡಕ್ಕೆ ಬಂದರು. ದಿನಾ ಬೆಳಿಗ್ಗೆ ಎದ್ದು ಬಂದ ತಕ್ಷಣ ಬಾಲ ಆಡಿಸ್ತಾ ಬರೋ ನಾಯಿ ಕಾಣಲಿಲ್ಲ. ವಿಚಾರಣೆ ಮಾಡಿದರು ಮನೆ ಯಜಮಾನ್ತೀನಾ.. 'ನಿಮಗೆ ಹೇಗಿದ್ರೂ ರಿಟೈರ್ ಆಯ್ತಲ್ಲ.. ಮನೇಲೇ ಇರ್ತೀರಿ, ಎಲ್ಲೂ ಹೋಗಲ್ಲ.. ಮನೇಲಿದ್ರೆ ವರಾಂಡದಲ್ಲೇ ನಿಮ್ಮ ಠಿಕಾಣಿ, ಇಲ್ಲ ಮುಂದೆ ಕಾಂಪೌಂಡಲ್ಲಿ ಅಡ್ಡಾಡುತೀರಾ! ನಾಯಿ ಟಾಮಿನೂ ಇದೇ ಕೆಲಸ ಮಾಡ್ತಾ ಇತ್ತು. ಒಂದೇ ಕೆಲಸಕ್ಕೆ ಇಬ್ಬರು ಯಾಕೆ ಅಂತ ಅದನ್ನ ತೋಟಕ್ಕೆ ಕಳಿಸಿದೆ' ಅನ್ನೋದೆ ಆಕೆ.

**ಸರಿಯಾಗಿ ಆಡಿದರೆ ಮಾತು ಮುತ್ತು ಇಲ್ಲದೇ ಇದ್ದರೆ ಸ್ನೇಹಕ್ಕೆ ಕುತ್ತು**

ಊರಿನ ಪ್ರಮುಖರೊಬ್ಬರ ಮನೆ ಯಜಮಾನ್ರು ತೀರಿಕೊಂಡಿದ್ದರು. ಸರಿ ಪ್ರತಿ ಮನೆಯವರು ಬಂದು ಸಾಂತ್ವನ ಹೇಳಿಹೋಗುತ್ತಿದ್ದರು. ನಂಗೆ ಪರಿಚಿತರೊಬ್ಬರ ಮನೆ ಯಜಮಾನರು ಊರಲಿಲ್ಲದ ಕಾರಣ ಅವರ ಮನೆ ಹುಡುಗನಿಗೆ ಈ ಜವಾಬ್ದಾರಿ ವಹಿಸಲಾಗಿತ್ತು. ಆತ ಕಾಲೇಜಿಗೆ ಹೋಗೋ ದಾರೀಲಿ ಒಂದು ವಿಸಿಟ್ ಕೊಟ್ಟು ತೀರಿಕೊಂಡವರ ಮಗನ್ನ ಮಾತಾಡಿಸಿ ಅಂದ್ರೆ ಸಾಂತ್ವನ ಹೇಳಿ ಕಾಲೇಜಿಗೆ ಹೊರಟ. ಇದಾದ 15 ದಿನದ ನಂತರ ನನ್ನ ಪರಿಚಿತರು ಊರಿಗೆ ಬಂದ ಮೇಲೆ ಅವರನ್ನ ಭೇಟಿಯಾದ ತಂದೇನ ಕಳ್ಕೊಂಡ ವ್ಯಕ್ತಿ ಬೇಸರದಿಂದ 'ನಮ್ಮ ತಂದೆ ತೀರ್ಕೊಂಡಾಗ ನಿಮ್ಮ ಮಗ ಬಂದಿದ್ದ.. ಹೋಗ್ತಾ ನನ್ನ ಹತ್ತಿರ ಬಂದು ನಾಲ್ಕುಮಾತಾಡಿದ.. ಏನೇನೋ ಎಡವಟ್ಟು ಮಾತಾಡಿದ, ಸುತ್ತ ಇದ್ದೋರೆಲ್ಲಾ ಬೇಜಾರು ಮಾಡ್ಕೊಂಡ್ರು' ಅಂತ ದೂರು ನೀಡಿದರು. 'ಓ ಹೌದಾ! ಅವನಿನ್ನೂ ಚಿಕ್ಕವನು. ಈ ಥರ ಸಂದರ್ಭದಲ್ಲಿ ಅವನು ಮಾತಾಡಿದ್ದು ಇದೇ ಮೊದಲನೆ ಸಲ. ಅವನಿಗೆ ಹೇಗೆ ಮಾತಾಡಬೇಕು ಅಂತ ಗೊತ್ತಿಲ್ಲ, ಮುಂದಿನ ಸರ್ತಿ ಬಂದಾಗ ಅವನಿಗೆ ಹೇಗೆ

ಮಾತಾಡಬೇಕು ಅಂತ ಚೆನ್ನಾಗಿ ಪ್ರಾಕ್ಟೀಸ್ ಮಾಡಿ ಕಳಿಸ್ತೀನಿ ಅಂತ ಮಾತು ಕೊಡ್ತೀನಿ' ಅಂತನ್ನೋದೆ.

ನನ್ನ ಮಿತ್ರರೊಬ್ಬರ ಪಕ್ಕದ ಮನೆಗೆ ಹೊಸ ಅಳಿಯ ಬಂದಿದ್ದ. ಉಪಚಾರ ಚೆನ್ನಾಗೇ ನಡೀತಿತ್ತು. ಕಾಂಪೌಂಡ್‌ನಲ್ಲಿ ಪೇಪರ್ ಓದ್ತಾ ಕುಳಿತ್ತಿದ್ದ ಮನೆಯ ಯಜಮಾನ್ರನ್ನ – ನನ್ನ ಸ್ನೇಹಿತ – 'ಏನು ಅಂಕಲ್ ಟಿಫಿನ್ ಆಯ್ತಾ?' ಅಂದಾಗ 'ಹೂಂನಪ್ಪ, ಅಳಿಯ ಬಂದಿದಾನಲ್ಲ, 2–3 ವೆರೈಟಿ ದೋಸೆ, ಇಡ್ಲಿ' ಅಂದರು. 'ನೀವು ಏನು ತಿಂದಿರಿ' ಅಂದಾಗ, 'ಇಡ್ಲಿ ತಿಂದೆ' ಅಂದರು. 'ಮತ್ತೆ ಅಳಿಯ' ಅಂದಾಗ ಅವರು 'ಅವನು ಹಿತ್ತಲಲ್ಲಿ ಗಿಡಕ್ಕೆ ಗೊಬ್ಬರ ಹಾಕ್ತಾ ಇದ್ದಾನೆ, ಅವನು ಅದನ್ನ ತಿಂತಾನೋ, ಇದನ್ನ ತಿಂತಾನೋ ನಂಗೇನು ಗೊತ್ತು' ಅಂದರು.

ಹೀಗೆ ಆಡಿದ ಮಾತಿನ ನಿಜವಾದ ಅರ್ಥ ಒಂದಿದ್ರೆ, ಅಪಾರ್ಥ ಅಥವಾ ಒಳಗಿನ ಅರ್ಥ ಬೇರೆ ಇರುತ್ತೆ.


---

## ಮಾತಿಗೆ ಹೇಳ್ತೀನಿ

ಕೆಲವರು ಮಾತಾಡುವಾಗ ಅಲ್ಲಾ ಮಾತಿಗೆ ಹೇಳ್ತೀನಿ ಅಂತ ಮಾತಿನ ಮೊದಲಾಗೋ ಕೊನೆಗೂ ಸೇರಿಸ್ತನೇ ಇರ್ತಾರೆ. ಜಗಲೀ ಮೇಲೆ ಕೂತಿದ್ದ ರಾಜಣ್ಣನವರೊಂದಿಗೆ ಶೀನಪ್ಪ ಮಾತಾಡ್ತಾ, ನೋಡಿ ನಮ್ಮ ಮನೆ ಹಸು ಕರು ಹಾಕೋ ದಿನ ಹತ್ತಿರ ಬಂದಿದೆ. ಅದಕ್ಕೇ ನಿಮ್ಮನೆಯವರು ಊರಲ್ಲೇ ಇರ್ಲಿ, ಯಾಕೇಂದ್ರೆ ಮಾತಿಗೆ ಹೇಳ್ತೀನಿ, ಒಬ್ಬರಿಗಿಂತ ಇಬ್ಬರು ವಾಸಿ ಅಲ್ವೇ ಅಂದರು. ಅದಕ್ಕೆ ರಾಜಣ್ಣ ಏನು ಹೇಳ್ತೀದೀರ, ನಿಮ್ಮ ಮನೆ ಹಸು ಕರು ಹಾಕೋದಿಕ್ಕೂ ನಮ್ಮನೆಯವಳು ಊರಿನಲ್ಲೇ ಇರೋದಕ್ಕೂ, ಒಬ್ಬರಿಗಿಂತ ಇಬ್ಬರು ಲೇಸು ಅನ್ನೋದಕ್ಕೂ ಏನು ಸಂಬಂಧ ಅಂತ ಕೇಳದ್ದಕ್ಕೆ, ಅವರು ಮತ್ತೆ, ಅಲ್ಲಾ ಮಾತಿಗೆ ಹೇಳ್ತಿದೀನಿ, ನಮ್ಮನೆಯವಳು ಇರ್ತಾಳೆ, ಜೊತೆಗೆ ನಿಮ್ಮನೆಯವರೂ ಇದ್ರೆ ಹೆರಿಗೆ ಸುಸೂತ್ರವಾಗಿ ಆಗುತ್ತೆ. ಹೇಗಿದ್ರೂ ನಮ್ಮನೆಯವಳೂ ನಿಮ್ಮನೆಯವರೂ ನಾಲ್ಕು ಐದು ಹೆತ್ತು, ಬಾಣಂತನ ಮಾಡಿಸಿಕೊಂಡು ಅಭ್ಯಾಸ ಇದೆಯಲ್ಲಾ ಅಂದು ನಕ್ಕು ಮತ್ತೆ ಅಲ್ಲಾ ಮಾತಿಗೆ ಹೇಳ್ತೀನಿ, ಹಸುವಿನ ಹೆರಿಗೆಯಾಗಲೀ, ಹೆಣ್ಣಿನ ಹೆರಿಗೆಯಾಗಲೀ ಹೆಂಗಸರೇ ವಾಸಿ ಅಲ್ವೇ, ಅಲ್ಲಾ ಮಾತಿಗೆ ಹೇಳ್ತೀನಿ ಅಂದು ನಕ್ಕರು. ಅದಕ್ಕೆ ರಾಜಣ್ಣ ನಾನೂ ಮಾತಿಗೆ ಹೇಳ್ತೀದೀನಿ ನಮ್ಮನೆಯವಳು ತವರು ಮನೆಗೆ ಹೋಗ್ತಾಳೆ ಇನ್ನೊಂದು ತಿಂಗಳು ಬರೋಲ್ಲ, ಅಲ್ಲಾ ಮಾತಿಗೆ ಹೇಳ್ತೀನಿ ನಿಮ್ಮನೆ ಹಸು ಬಾಣಂತನ ನೀವೇ ಮಾಡಿ ಅಂದಾಗ ಶೀನಪ್ಪನ ಮುಖ ಹುಣಿಸೇಹಣ್ಣಿನ ಹಾಗಾಗಿತ್ತು.

# ಕೊರವಂಜಿ ಪದಬಂಧ – 10

– ವಿದ್ಯಾ ವಿ. ಹಾಲಭಾವಿ




**ಎಡದಿಂದ ಬಲಕ್ಕೆ**

1. ರಮಣನಿರುವ ಜಾಗವಲ್ಲ, ಯುದ್ಧ ಭೂಮಿಯಿದು (4)
2. ಹೀಗೆ ಆರಂಭವಾಯಿತೇ ಬೇಸಾಯ? (3)
4. ಮಂದ ಬುದ್ಧಿಯವನು ತೋರಿದ ನಸುನಗು (4)
7. ಯೋಚನೆಯೇ ಬೇಡ, ಮುಕ್ತಿ ಇಲ್ಲದೆ (4)
8. ಗಮನವಿಟ್ಟು ನೋಡಿ ಗಂಭೀರವಾದುದು ಕಾಣುತ್ತಿದೆ (3)
10. ತಾಯಿಯ ಮನೆಯ ಕಿಟಕಿ (4)
11. ಏನೂ ವರಿ ಮಾಡಿಕೊಳ್ಳಬೇಡಿ, ದೇವತೆಗಳ ವೈದ್ಯ ತರಾತುರಿಯಲ್ಲಿ ಬರುತ್ತಾನೆ (4)
13. ಮೂಲೆ ಮನೆಯ ಮಾದರಿ ಇದೇ (3)
14. ಉಪ್ಪು ಕಾರ ಹಚ್ಚಿ ಹೇಳಿದರೂ ಇತರರಿಗೆ ಸಹಾಯ ಮಾಡುವವನು (4)

**ಮೇಲಿಂದ ಕೆಳಕ್ಕೆ**

1. ಇದೇನು ಇಲ್ಲಿ ಗುಡಿಯು ಉಲ್ಟಾ ಆಗಿಬಿಟ್ಟಿದೆ? (3)
3. ಬಣ್ಣ ಹಚ್ಚಿಕೊಂಡು ಮಾಡಿದ ವರ್ಣನೆ (3)
5. ದಂಶಕ ಬದುಕಿದ್ದು, ಹತ್ತು ವರ್ಷಗಳ ಕಾಲ (3)
6. ಮನವಿಲ್ಲದಿದ್ದರೂ ಗತಿಸಿದ ಪತಿಯೊಡನೆ ಚಿತೆಯೇರುವಿಕೆ (5)
7. ಬೆಂಗಳೂರಿನ ಈ ಭಾರೀ ಸೌಧದಲ್ಲಿ ಆಗುವ ಕೆಲಸಗಳು ಬಲು ನಿಧಾನವಂತೆ! (5)
9. ಪಡಿತರ ಸಿಗುವುದೆಂದು ತಂದಿದ್ದೀರಾ ಇಷ್ಟು ಅಗಲವಾದ ತಟ್ಟೆಯನ್ನು (3)
10. ವಾಯುಮಾನದ ಬಗ್ಗೆ ಚಿಂತಿಸುತ್ತಿರುವ ಕುಳ್ಳ (3)
12. ಪೇರಿ ಕೀಳದೆ ಹೀಗೆ ದುರಸ್ತಿ ಮಾಡಿ! (3)

*(ಉತ್ತರಕ್ಕೆ 31ನೇ ಪುಟ ನೋಡಿ)*

# ಹಾಸ್ಯೌಷಧಿ

**- ಸಂಪಟೂರು ವಿಶ್ವನಾಥ್**

*"Laughter is the best medicine"* ಎನ್ನುವುದು, ಕೇವಲ *cliche*ಯ ಮಾತಲ್ಲ, ಅದು ಆಧುನಿಕ ವೈದ್ಯಕೀಯದ ಅವಿಭಾಜ್ಯ ಅಂಗ ಎನ್ನುವ ಸತ್ಯಾಂಶವನ್ನು ತಮ್ಮ ಪ್ರಾಕ್ಟೀಸ್ ಮೂಲಕ ಪ್ರಸ್ತುತಪಡಿಸಿದ ಹದಿನಾರಾಣೆ ಕನ್ನಡಿಗ ವೈದ್ಯರ ಮಾತುಗಳು ಇವು. ಇವು ಕಿವಿಗೆ ಹಾಸ್ಯ, ಮನಕ್ಕೆ ಮುದ, ರೋಗಕ್ಕೆ ಮದ್ದು ಆಗಿದ್ದನ್ನು ನಾನು ನೂರಾರು ಬಾರಿ ಕಂಡಿದ್ದೆ.

'ನನಗೇನೋ ಆಗಿಬಿಟ್ಟಿದೆ, ನನಗಾಗಿರೋದು ಬೇರೆ ಯಾರಿಗೂ ಆಗಿಲ್ಲ' ಅಂದುಕೊಂಡು ಜೋಲುಮೋರೆ ಹಾಕಿಕೊಂಡು ಬಂದ ಅರಳುಮರಳು ವಯಸ್ಸಿನ ರೋಗಿಗೆ ವೈದ್ಯರು ಹೇಳಿದರು – ''ನೀವು ನಾಳೇನೂ ಬದುಕಿರ್ತೀರಿ. ಉಳಿದದ್ದು ನಾಳೆ ಬಂದು ಹೇಳಿ. ನನ್ನನ್ನ ನೋಡೋಕ್ಕೆ ಇನ್ನೂ ನಿಮ್ಮಂಥವ್ರು ಬಹಳ ಜನ ಕಾದಿದ್ದಾರೆ. ಈ ಪುಡಿಗಳನ್ನು ಮೂರು ಸಾರಿ ತೊಗೊಳ್ಳಿ''.

**ಯಾವುದೇ ಕಾಯಿಲೆ ಬಾರದಂತೆ ತಡೆಯುವ ಪ್ರಿಕಾಷನರಿ ಡೋಸೇಜ್ ಈ ಹಾಸ್ಯೌಷಧಿ**

ಡಾಕ್ಟ್ರು ಮಾತು ಮುಗಿಯುವುದಕ್ಕೆ ಮೊದಲೇ ಅರವತ್ತರ ಪೇಷೆಂಟು ತಮ್ಮ ಮನೆ ತಾಪತ್ರಯಗಳನ್ನು ಹೇಳಲು ಮುಂದಾದರು. ಸಹನೆ ಕಳೆದುಕೊಂಡ ಡಾಕ್ಟ್ರು ಹೇಳಿದರು, ''ಇಲ್ಲಿಂದ ನೂರಡಿ ಮುಂದೆ ಹೋಗಿ. ಪಟ್ಟಿ ಪಟ್ಟಿ ಗೋಡೆಗಳ ಒಳಗೊಬ್ಬ ಕೂತಿದ್ದಾನೆ. (ವೈದ್ಯರು ಹೇಳಿದ್ದು ಬಳೇಪೇಟೆ ಲಕ್ಷ್ಮೀನರಸಿಂಹಸ್ವಾಮಿಯನ್ನು) ಇದನ್ನೆಲ್ಲಾ ಅವನಿಗೆ ಹೇಳಿ. ಏನಾದರೂ ಉಪಯೋಗ ಆಗಬಹುದು'' ಪೇಷೆಂಟು ಎದ್ದು ಹೋದರು.

ಮುಖದ ತುಂಬಾ ಆತಂಕದ ಚಿಹ್ನೆಗಳನ್ನು ಪ್ರದರ್ಶಿಸುತ್ತಿದ್ದ ಮಧ್ಯವಯಸ್ಕನೊಬ್ಬ ತನ್ನ ದೇಹದ ಪ್ರತಿಯೊಂದು ಅಂಗದ ಬಾಧೆಗಳನ್ನು ಬಡಬಡನೇ ಹೇಳುತ್ತಿದ್ದಾಗ, ಡಾಕ್ಟ್ರು ತನ್ನ ದಪ್ಪ ಪೆನ್ನನ್ನು ಪಕ್ಕದಲ್ಲಿಟ್ಟು, ಅವನ ನಾಡಿಯನ್ನು ಪರೀಕ್ಷಿಸುವ ನಾಟಕವಾಡಿದರು. ಎಲ್ಲೋ ಇದ್ದ ತಮ್ಮ ಮನಸ್ಸನ್ನು ಹಿಂದಕ್ಕೆ ತಂದು, ಕಿರುನಗೆ ಬೀರಿ, ತಾವು ಕುಳಿತಿದ್ದ 'ಸುಂದರ್ ಛೇರ್'ನಲ್ಲಿ ಹಿಂದಕ್ಕೆ ಒರಗಿಕೊಂಡು ಹೇಳಿದರು – ''ಇಲ್ಲಿಂದ ಎದ್ದು ಒಂದು ಮೈಲಿ ಮುಂದಕ್ಕೆ ನಡೆದುಕೊಂಡು ಹೋಗು. ವಿಕ್ಟೋರಿಯಾ ಆಸ್ಪತ್ರೆ ಕಾಣಿಸುತ್ತೆ. ಒಳಕ್ಕೆ ಹೋಗಿ ಎಲ್ಲಾ ವಾರ್ಡುಗಳ ಮುಂದಿನ ವರಾಂಡದಲ್ಲಿ ಓಡಾಡು. ಅಲ್ಲಿರುವವರನ್ನು, ಅವರೊಂದಿಗೆ ಬಂದಿರುವವರನ್ನು ಒಂದು ಸಾರಿ ನೋಡು. ನಿನಗೇನಾದರೂ ಆಗಿದೆ ಅನ್ನಿಸಿದರೆ ಮತ್ತೆ ಇಲ್ಲಿಗೇ ಬಾ. ಔಷಧಿ ಕೊಡ್ತೀನಿ. ಇಲ್ದೇ ಇದ್ರೆ ಹಾಗೇ ಉಡುಪಿ ಕೃಷ್ಣಭವನಕ್ಕೆ ಹೋಗಿ ಒಂದೋ ಎರಡೋ ಮಸಾಲೆ ದೋಸೆ ತಿಂದು ಮನೇಗೆ ಹೋಗಿಬಿಡು.''

'ನಿನಗೆ ಏನೂ ಆಗಿಲ್ಲ' ಅಂತ ಹೇಳುವುದನ್ನು ತಮ್ಮದೇ ಧಾಟಿಯಲ್ಲಿ ಹೇಳಿದ್ದರಿಂದ, ಅರ್ಥಮಾಡಿಕೊಂಡ ಜಾಣ ಪೇಷೆಂಟು ಜಾಗ ಖಾಲಿ ಮಾಡಿದ.

ಹೊಸದಾಗಿ ತಾಯಿಯಾಗಿದ್ದ ಗೃಹಿಣಿಯೊಬ್ಬಳು, ಆತುರಾತುರವಾಗಿ ಸೀರೆಯನ್ನುಟ್ಟುಕೊಂಡು, ತನ್ನ ಮಗುವನ್ನು ಎತ್ತಿಕೊಂಡು ಬಂದು ವೈದ್ಯರ ಮುಂದೆ ಕುಳಿತಳು. ವೈದ್ಯರು, ಅಷ್ಟೇನೂ ಶುಚಿಯಾಗಿರದ, ಕೊಳಕುಬಟ್ಟೆಯನ್ನು ಹಾಕಿಸಿಕೊಂಡಿದ್ದ ಮಗುವನ್ನು, ತಮ್ಮದೇ ಮಗುವಿನಂತೆ ಎತ್ತಿಕೊಂಡು ತೊಡೆಯ ಮೇಲೆ ಕೂರಿಸಿಕೊಂಡು (ಅರ್ಥಾತ್ ಮಲಗಿಸಿಕೊಂಡು) ಹೊಟ್ಟೆಯನ್ನೆಲ್ಲಾ ಮುಟ್ಟಿ ಸವರಿ, ''ನಿಮ್ಮನೇನಲ್ಲಿ ಯಾರೂ ಅಜ್ಜಿ ಇಲ್ವೇನೇ, ಅವರ್ನೇ ಕೇಳಿದ್ರೆ ಒಳ್ಳೇ ಔಷಧ ಕೊಡ್ತಿದ್ರಲ್ಲೇ. ಈಗೇನು, ಬಸ್‌ಜಾರ್ಜು ಕೊಟ್ಟು ಬಂದ್ಬಿಟ್ಟಿದ್ದೀಯಲ್ಲಾ, ಔಷಧಿ ಕೊಡ್ತೀನಿ, ನಾಳೆಗೆ ಎಲ್ಲಾ ಸರಿಹೋಗುತ್ತೆ'' ಅಂದರು. ಕೆಲವು ಸಣ್ಣಪುಟ್ಟ ರೋಗಗಳಿಗೆ ಮನೆಮದ್ದೇ ಲೇಸು ಎನ್ನುವುದನ್ನು ಮನದಟ್ಟು ಮಾಡಿಸಿದರು.

ಮೈಮುಟ್ಟಿ ಸರಸವಾಗಿ ಮಾತನಾಡಿಸುವುದು ವಾಸಿ ಮಾಡುವ ವಿಧಾನ. ಆಧುನಿಕವಾದದ್ದು ಅಂತ ನೀವೇನಾದರೂ ಅಂದುಕೊಂಡಿದ್ದರೆ ಅದು ತಪ್ಪು. ನಮ್ಮ ಹಳೇಡಾಕ್ಟ್ರು ಇದನ್ನ ಅರ್ಧ ಶತಮಾನದ ಹಿಂದೆಯೇ ಜಾರಿಗೆ ತಂದಿದ್ರು. ಆತ್ಮೀಯತೆಯನ್ನು ಮೆರೆಯುತ್ತಿದ್ದ ಈ ಮಹಾನುಭಾವ ಈ *East* ಆ *west*ಗಳ *perfect blend*ಉ. ಇವರೇ ನನ್ನ ಡಾಕ್ಟ್ರು, ರಾಶಿ ಕಾವ್ಯನಾಮದ ಡಾ|| ಶಿವರಾಂ.

✷

---

## ನಗು way ಔಷಧಿ



ಡಾಕ್ಟರಾದಿಯಾಗಿ ಎಲ್ಲರೂ ಹೇಳೋದು ನಗುನಗುತ್ತಾ ಇದ್ದರೆ ಯಾವ ಕಾಯಿಲೆಯೂ ಬರಲ್ಲ ಅಂತ. ಅದು ನಿಜವೂ ಹೌದು. ಆದರೆ ನಗುನಗುತ್ತಲೇ ಇರೋರ ಕಾಯಿಲೆಯನ್ನು ವಾಸಿ ಮಾಡೋದು ಹೇಗೆ ಅನ್ನೋ ಪ್ರಶ್ನೆ ನಮ್ಮ ಸೋಮುನ ಆಗಾಗ ಕಾಡುತ್ತಿರುತ್ತೆ. ಅವನ ಸ್ನೇಹಿತ ಒಬ್ಬ ಇದ್ದ ಪ್ರಭು ಅಂತ. ಏನೋ ಪಾಪ ಮನೇಲಿ ತೊಂದರೆ, ತಾಪತ್ರಯ ಅಂತೆಲ್ಲ ಆದರೂ ಸಖತ್ತಾಗಿ ನಗ್ತಿದ್ದ. ಚೆನ್ನಾಗಿ ನಗೋನು, ನಿಲ್ಲಿಸ್ದಲೇ ನಗೋನು. ಯಾಕೋ ಸುಮ್ ಸುಮ್ನೆ ನಗ್ತಿದೀಯ ಅಂದ್ರೆ ನಗು ಇನ್ನೂ ಹೆಚ್ಚು ಮಾಡೋನು. ಎಲ್ಲರ ಮುಂದೂ ಹೋಗಿ ನಗೋನು. ಹೆದರಿಕೆಯಾಗೋ ಹಾಗೆ ನಗೋನು. ಜನ ಎಲ್ಲ ಓಹೋ ಪ್ರಭುಗೆ ಹುಚ್ಚು ಹಿಡಿದಿದೆ, ನಗೋ ಹುಚ್ಚು ಅಂತ ಅಂದುಕೊಂಡರು. ಇದು ಹೆಚ್ಚಾದಾಗ ಅವನನ್ನು ಆಸ್ಪತ್ರೆಗೆ ಸೇರಿಸಿದರು. ಈಗ ಅಲ್ಲಿ ಪ್ರಭು ಚೆನ್ನಾಗಿ ನಗ್ತಾ ಇದಾನೆ. ಈಗ ಹೇಳಿ ಎಲ್ಲಾ ಕಾಯಿಲೆಗಳಿಗೆ ನಗುವೇ ಔಷಧಿ ಅನ್ನುವಾಗ ಪ್ರಭು ನಗುತ್ತಿರುವ ಇಂಥಾ ನಗೂಗೆ ಔಷದಿ ಇದೆಯೋ ಇಲ್ಲವೋ?

# ಕತ್ತೆ ಚಾಕರಿ

- ಕುಮುದಾ ಪುರುಷೋತ್ತಮ್

**ಮುಂ**ಜಾನೆ ಏಳು ಗಂಟೆ. ಮಾವಯ್ಯನ ದಿನಚರಿ ಆರಂಭವಾಗಿತ್ತು. ಕಾಫಿ ಲೋಟ ಹಿಡಿದು ಆರಾಮ ಕುರ್ಚಿಯಲ್ಲಿ ಕುಳಿತು ಒಂದೊಂದೇ ಗುಟುಕು ಹೀರುತ್ತಿದ್ದರು. ಒಮ್ಮೆಲೇ ಮುಖ ಸೊಟ್ಟಗಾಯಿತು. ಯಾಕೋ ಕಾಫಿ ಎಂದಿನಂತಿಲ್ಲ ಎನಿಸಿತು. ಪತ್ನಿಗೆ ಕೇಳುವಂತೆ ಆಕ್ಷೇಪಿಸಿದರು. ''ಇಷ್ಟು ವರ್ಷಗಳಾಯ್ತು, ಇನ್ನೂ ನಿಂಗೆ ಒಳ್ಳೇ ಕಾಫಿ ಮಾಡೋ ಹದ ತಿಳೀಲಿಲ್ಲ. ಒಳ್ಳೇ ಕಾಫಿ ಎಲ್ಲಾ ನಮ್ಮಮ್ಮನ ಕಾಲಕ್ಕೇ ಹೋಯ್ತು.''

**ಬೇಕಿಲ್ಲದ, ಬ್ರೇಕಿಲ್ಲದ ಕೆಲಸವೇ ಕತ್ತೆ ಚಾಕರಿ ಅಲ್ಲವೇ**

''ಕಾಫಿ ಎಲ್ಲಾ ನಿಮ್ಮಮ್ಮ ಮಾಡ್ತಿದ್ದ ಹಾಗೇ ಇದೆ. ಇವತ್ತು ಕಾಫಿ ಜೊತೆ ಓದೋಕ್ಕೆ ಪೇಪರ್ ಬಂದಿಲ್ಲ. ಅದಕ್ಕೇ ಕಾಫಿ ರುಚಿಸ್ತಾಇಲ್ಲ.'' ಅಡುಗೆ ಮನೆಯಿಂದ್ಲೇ ಅಶರೀರವಾಣಿ ಕೇಳಿಸಿತು. ಹೌದಲ್ಲ! ಪೇಪರ್ ಇಲ್ಲದೆ ಕಾಫಿಗೆ ರುಚಿ ಇಲ್ಲ ಎಂದುಕೊಂಡು ಹೊರಗಿಣುಕಿದರು.

ಹಿಂದಿನ ರಾತ್ರಿ ಮಳೆ ಸುರಿದು ಅಲ್ಲಲ್ಲಿ ಪುಟ್ಟ ಹೊಂಡಗಳಾಗಿತ್ತು. ಅದರೊಂದರಲ್ಲಿ ಅಂದಿನ ಪತ್ರಿಕೆ ನೀರ ಹೊಂಡದೊಳಗಿನ ಎಮ್ಮೆಯೋಪಾದಿಯಲ್ಲಿ ಆನಂದದಿಂದ ಪವಡಿಸಿತ್ತು! ಕಾಫಿ ಅರ್ಧಕ್ಕೇ ಬಿಟ್ಟು ಪೇಪರ್ ಹುಡುಗನನ್ನು ಶಪಿಸುತ್ತಾ ಹೊರಬಂದು ನೀರಿನಲ್ಲಿ ನೆನೆದು ಚೂರುಚೂರಾಗುವಂತಿದ್ದ ಪತ್ರಿಕೆಯನ್ನು ನಾಜೂಕಾಗಿ ಮೇಲಕ್ಕೆತ್ತಿದರು. ಆಗ ಲೆಟರ್ ಬಾಕ್ಸ್‌ನಿಂದ ಹಿಂದಿನ ದಿನ ಅಂಚೆಯವನು ಹಾಕಿದ್ದ ಲಕೋಟೆ ಮುಚ್ಚಿದ್ದ ಬಾಗಿಲಿನ ಸಂದಿಯಿಂದ ಹೊರಬರಲು ಒದ್ದಾಡುತ್ತಿರುವುದನ್ನು ಕಂಡರು. ಪತ್ರಿಕೆ ಅಲ್ಲಿಯೇ ಹಾಕಿ ಬಾಗಿಲು ತೆಗೆದು ಲಕೋಟೆ ಎತ್ತಿಕೊಂಡರು. ಕೆಳಗೆ ಸತ್ತುಬಿದ್ದಿದ್ದ ಹಲ್ಲಿ ಕಣ್ಣಿಗೆ ಬಿತ್ತು.

ಥೆ, ಇದು ಸಾಯೋದಕ್ಕೆ ನಮ್ಮ ಲೆಟರ್ ಬಾಕ್ಸೇ ಆಗಬೇಕಿತ್ತೆ? ನನಗೊಳ್ಳೆ ಗ್ರಹಚಾರ ಎಂದುಕೊಳ್ಳುತ್ತಾ ಲಕೋಟೆ ಅಲ್ಲಿಯೇ ಹಾಕಿ ಹಲ್ಲಿಯ ಕಳೇಬರ ಗುಡಿಸಿಹಾಕಲು ತೆಂಗಿನ ಪೊರಕೆ ಅರಸುತ್ತಾ ಹಿತ್ತಲಿಗೆ ಧಾವಿಸಿದರು. ಪೊರಕೆ ಅದರ ಜಾಗದಲ್ಲಿ ಇರಲಿಲ್ಲ. ''ಈ ಮನೇಲಿ ಯಾವ್ದೂ ಇರ್ಬೇಕಾದ ಜಾಗದಲ್ಲಿ ಇರೋಲ್ಲ. ಎಲ್ಲಾ ಅಸ್ತವ್ಯಸ್ಥ. ದಿನದ ಇಪ್ಪತ್ನಾಲ್ಕು ಗಂಟೆಯೂ ಮನೇಲೇ ಇರ್ತೀಯ. ಅದೇನು ಮಾಡ್ತೀಯೋ ದೇವ್ರೇ ಬಲ್ಲ. ಎಲ್ಲಾ ಜವಾಬ್ದಾರೀನೂ ಕೆಲಸದವರಮೇಲೇ ಹಾಕೋಬದ್ಲು ನೀನೇ ಸ್ವಲ್ಪ ಗಮನ ಕೊಡಬಾರದೇ?'' ನಿವೃತ್ತಿಯ ನಂತರ ದಿನದ ಇಪ್ಪತ್ನಾಲ್ಕು ಗಂಟೆಯ ತಮ್ಮ ವಿಳಾಸವೂ ಮನೆಯೇ ಎಂಬುದು ಮರೆತು ಒಳಗಿದ್ದ ಪತ್ನಿಯ ಮೇಲೆ ರೇಗಾಡುತ್ತಾ ಪೊರಕೆ ಹುಡುಕುತ್ತಾ ಹೋದರು. ಉಡಿದಾರ ಹರಿದ ಪೊರಕೆ ಕಡ್ಡಿಗಳು ಚಲ್ಲಾಪಿಲ್ಲಿಯಾಗಿ ಎಲ್ಲೆಲ್ಲೂ ಹರಡಿದ್ದುವು.

ಅದನ್ನೆಲ್ಲಾ ಜೋಡಿಸಿ ಪೊರಕೆ ಸರಿಯಾಗಿ ಕಟ್ಟಲು ಕುಳಿತರು. ಮೇಲಿನ ಮಹಡಿ ಮನೆಯ ಮಾಮಿ ಸ್ಯಮಂತಕಮ್ಮ ಅದೇ ವೇಳೆಗೆ ಮಡಿಯುಟ್ಟು ತುಳಸಿಪೂಜೆ ಮಾಡಲು ಬಂದು ಮೋಟುಗೋಡೆಯ ಮೇಲಿದ್ದ ತುಳಸಿ ಕುಂಡಕ್ಕೆ ನೀರೆರೆದು ಅರಿಶಿಣ ಕುಂಕುಮ ಹೂವೇರಿಸಿ ಭಕ್ತಿಯಿಂದ ಮಣಮಣ ಮಂತ್ರ ಹೇಳಿಕೊಳ್ಳುತ್ತಾ ಕಣ್ಮುಚ್ಚಿಕೊಂಡೇ ಚೊಂಬಿನಲ್ಲಿ ಮಿಕ್ಕಿದ್ದ ನೀರನ್ನು ಕೆಳಗೆರೆಚಿದರು. ಚಕ್ಕಮಕ್ಕಳ ಹಾಕಿ ಪೊರಕೆ ಕಟ್ಟಲು ಪ್ರಯತ್ನಿಸುತ್ತಿದ್ದ ಮಾವಯ್ಯನ ತಲೆಗೆ ಜಲಾಭಿಷೇಕ! ಸುತ್ತೆಲ್ಲೂ ಇಲ್ಲದೆ ತನಗೆ ಮಾತ್ರ ಮಳೆಯೇ ಎಂದು ವಿಸ್ಮಯಗೊಳ್ಳುತ್ತಾ ತಲೆಎತ್ತಿ ನೋಡಿದರೆ ಮಾಮಿ ತಮ್ಮ ಕೃತ್ಯಕ್ಕೆ ತಾವೇ ನಾಚುತ್ತಾ ಸೆರಗಿನಿಂದ ಬಾಯ್ಮುಚ್ಚಿಕೊಂಡು ನಗುತ್ತಿರಬೇಕೇ? ಪೊರಕೆಯನ್ನಲ್ಲೇ ಒಗೆದು ಮೆಟ್ಟಲೇರಿ ಮೇಲೆಹೋದರು. ಅದೇನಾಯಿತೋ ದೇವರೇ ಬಲ್ಲ. ಬೆಂಕಿಯುಗುಳುತ್ತ ಕೆಳಗಿಳಿದವರಿಗೆ ಕೆಳಗಿನ ಪಾವಟಿಗೆಯಲ್ಲಿದ್ದು ಹೂಗಳಿಂದ ಜಗಿಯುತ್ತಿದ್ದ ಗುಲಾಬಿ ಕುಂಡ ಕಾಣದೆ ಕಾಲಿಗೆ ತೊಡರಿ ಮಾರುದ್ದ ಸಿಡಿದು ಬಿತ್ತು. ಇನ್ನು ಇವಳಿಂದ ಕಾದಿದೆ ಗ್ರಹಚಾರ. ಅದನ್ನು ಇದ್ದಲ್ಲೇ ನಾಜೋಕಾಗಿ ಜೋಡಿಸಿ ಇಟ್ಟುಬಿಡೋದು. ಇವಳೇನಾದರೂ ಕೇಳಿದರೆ ತನ್ನಮೇಲೆ ನೀರು ಸುರಿದ ಮಾಮಿಯ ಕೃತ್ಯ ಎಂದು ಆಕೆಯ ಮೇಲೆ ಹೊರಿಸಿದರೆ ಹೇಗೆ ಎಂಬ ಪ್ರಶ್ನೆ ಕಾಡಿ ಹೇಗಾದರಾಗಲಿ ಈಗ ಜೋಡಿಸಿಟ್ಟುಬಿಡೋಣ ಎಂದುಕೊಂಡು ಕೆಳಕ್ಕೆ ಬಗ್ಗಿದರು. ಸೊಂಟದಲ್ಲೆಲ್ಲೋ ಕಳಕ್ ಎಂದಂತಾಗಿ ಶಾಕ್ ಹೊಡೆತಂತಹ ಅನುಭವ. ಅಸಾಧ್ಯ ನೋವು. ಕುಂಡವನ್ನಲ್ಲೇ ಬಿಟ್ಟು ಅಮೃತಾಂಜನ ಅರಸುತ್ತಾ ಒಳಬಂದು ಕಪಾಟು ತೆಗೆದರು.

ಅದೇ ಮುಹೂರ್ತದಲ್ಲಿ ಪತ್ನಿಯ ಸಿಹಿಯಾದ ಉಲಿ ಕೇಳಿತು. ''ರೀ, ಸ್ವಲ್ಪ ಬರ್ತೀರಾ?'' ಹೋದರೆ ಫ್ರಿಜ್ಜಿನಲ್ಲಿಟ್ಟು ಹೆಪ್ಪುಗಟ್ಟಿದ್ದ ತುಪ್ಪದ ಬಾಟ್ಲಿಯ ಮುಚ್ಚಳ ತೆಗೆಯಲಾಗದೆ ನೀವು ತೆಗೀರಿ ಎನ್ನುವಂತೆ ಆಕೆ ಮುಂದೆ ಹಿಡಿದರು. ನಾವು ಮಹಿಳೆಯರು ವೀಕರ್ ಸೆಕ್ಸ್ ಅಲ್ಲ ಅಂತ ಹಾರಾಡ್ತೀಯಲ್ಲ ನೀನೇ ತೆಗಿ ಎಂದು ಕೀಟಲೆ ಮಾಡಬೇಕೆನಿಸಿದರೂ ಬಾಯ್ಮುಚ್ಚಿಕೊಂಡರು. ಕಾರಣ ಅವರಿಗೂ ತೆಗೆಯಲಾಗಲಿಲ್ಲ! ತುಂಬಾ ಹೆಪ್ಪುಗಟ್ಟಿದೆ. ಬಿಸಿಲಿನಲ್ಲಿ ಇಟ್ಟರೆ ಸರಿಹೋಗುತ್ತೆ ಎಂದು ಹೇಳಿಕೊಳ್ಳುತ್ತಾ ಹಿತ್ತಲ ಬಿಸಿಲಿನಲ್ಲಿಡಲು ಬಗ್ಗಿದರಷ್ಟೇ. ಮತ್ತೆ ಕಳಕ್ ಜೊತೆ ಶಾಕ್. ಅದರ ಪರಿಣಾಮ ತುಪ್ಪದ ಬಾಟ್ಲಿ ಕೈಯಿಂದ ಜಾರಿ ಬಿದ್ದು ಒಡೆಯಿತು. ಇನ್ನು ಇಲ್ಲಿದ್ರೆ ಇವಳಿಂದ ಡೇಂಜರ್ ಎಂದು ಒಳಗೆ ಕಪಾಟಿನಲ್ಲಿ ಅಮೃತಾಂಜನದ ಹುಡುಕಾಟ ಮುಂದುವರೆಸಿದರೆ ಅದು ಸಿಗದೆ ಓಬೇರಾಯನ ಕಾಲದ ಆಲ್ಬಂ ಸಿಕ್ಕರೆ ಅದವರ ತಪ್ಪೇ? ಅಲ್ಲೇ ಕುಳಿತು ಮುಂದಿನ ಅರ್ಧ ಗಂಟೆ ಭೂತಕಾಲದಲ್ಲಿ ಕಳೆದುಹೋದರು. ಶೈಶವ, ಬಾಲ್ಯ, ಯೌವನ, ವಾರ್ಧಕ್ಯ ಎಲ್ಲಾ ಅವಸ್ಥೆಗಳನ್ನೂ ಆ ಆಲ್ಬಂ ದಾಖಲಿಸಿತ್ತು. ಆಗ ಕಣ್ಣಿಗೆ ಬಿದ್ದದ್ದು ಆ ಫೋಟೋ. ಶಾಲೆಯ ದಿನಗಳಲ್ಲಿ ತೆಗೆಸಿದ್ದು. ಮಾವಯ್ಯನಿಗೆ ಆಗ ಹಲ್ಲು ಬೀಳುವ ವಯಸ್ಸು. ಪ್ರಾಣಸಖ ಕೋದಂಡನ ಹೆಗಲಮೇಲೆ ಕೈ ಹಾಕಿ ಇಲ್ಲದಿದ್ದ ಹಲ್ಲು ಕಿರಿದು ಕ್ಯಾಮರಾ ಎದುರಿಸಿದ್ದರು. ಫೋಟೋ ನೋಡುತ್ತಲೇ ಕೋದಂಡನನ್ನು ಕೂಡಲೇ ನೊಡಬೇಕೆಂಬ ತುಡಿತ. ಆಲ್ಬಂ ಅಲ್ಲೇ ಹಾಕಿ ಫೋನ್ ಹಿಡಿದರು. ''ಹಲೋ ಕೋದಂಡ ಹೇಗಯ್ಯ ಇದ್ದೀ? ನೋಡಿ ತುಂಬಾ ದಿವ್ಸ ಆಯ್ತು. ಈಗ ಎಲ್ಲಿದ್ದೀ?

ಪೋಸ್ಟ್ ಆಫೀಸಿನ ಬಳಿನಾ? ಇಗೋ ಈಗ್ಬಂದೆ. ಕಾಫಿ ಕುಡೀತಾ ಮಾತನಾಡೋಣ.'' ಚಪ್ಪಲಿ ಮೆಟ್ಟಿ ಮನೆಬಿಟ್ಟರು.

ಪೋಸ್ಟ್ ಆಫೀಸ್ ಸಮೀಪಿಸಿ ಇನ್ನೇನು ಮೆಟ್ಟಿಲೇರಬೇಕು ಕಾಲಿಗೆ ಹಾಕಿದ್ದ ಚಪ್ಪಲಿಗಳು ಕಣ್ಣಿಗೆ ಬಿತ್ತು. ಒಂದು ಕಾಲಿಗೆ ಕಪ್ಪು ಮತ್ತೊಂದು ಕಾಲಿಗೆ ಬಿಳೀ ಚಪ್ಪಲಿ! ಅವಸರದಲ್ಲಾದದ್ದು. ತನ್ನ ಈ ಪೆಚ್ಚುತನ ಕೋದಂಡನ ಕಣ್ಣಿಗೇನಾದರೂ ಬಿದ್ದರೆ ಮುಲಾಜಿಲ್ಲದೆ ಫೇಸ್ ಬುಕ್ಕಿನಲ್ಲಿ ಹಾಕಿ ಜಗತ್ ಜಾಹೀರು ಮಾಡಿಬಿಡುವಷ್ಟು ಛಾತಿ ಅವನದು! ಮುಂದಿಟ್ಟ ಹೆಜ್ಜೆ ಹಿಂದಿಟ್ಟು ಮನೆಗೆ ಹಿಂದಿರುಗಿ ಬಂದು ನೋಡಿದರೆ ಅಲ್ಲೂ ಅದೇ ಬಗೆಯ ವಿಷಮ ದಾಂಪತ್ಯದ ಚಪ್ಪಲಿಗಳು! ಒಂದು ಬಿಳಿ ಮತ್ತೊಂದು ಕಪ್ಪು. ಇದ್ಯಾಕೆ ಹೀಗೆ? ತಲೆ ಬಿಸಿಯಾಯ್ತು. ಯೋಚಿಸಿಯೇ ಯೋಚಿಸಿದರು. ಗೊಂದಲ ತಿಳಿಯಾದಾಗ ತಲೆ ಚಚ್ಚಿಕೊಂಡರು. ತನ್ನ ಬುದ್ಧಿಗೇನಾಗಿದೆ? ವಯಸ್ಸಿನ ಪ್ರಭಾವವೇ ಅಥವಾ ಖಾಲಿ ಹೊಟ್ಟೆಯದೋ? ಅದೇನೇ ಇರಲಿ. ತನಗಂತೂ ವಿಪರೀತ ಸುಸ್ತು. ಇದಕ್ಕೆ ವಿಶ್ರಾಂತಿಯೇ ಮದ್ದು. ಛೇ, ತನಗೀ ಮನೆಯಲ್ಲಿ ಕತ್ತೆ ಚಾಕರಿ. ಬೆಳಗಿನಿಂದ ನಾ ಮಾಡಿದ ಕೆಲಸಗಳೆಷ್ಟು? ಒಂದೇ ಎರಡೇ? ಉದ್ಯೋಗದಲ್ಲಿದ್ದಾಗ ಒಂದು ದಿನವೂ ಆಫೀಸಿನಲ್ಲಿ ತಾನು ಇಷ್ಟೊಂದು ಕೆಲಸ ಮಾಡಿದ್ದೇ ಇಲ್ಲ ಎಂದುಕೊಂಡು ಹೊದ್ದು ಮಲಗಿದರು.

ಅರ್ಧ ಕುಡಿದಿದ್ದ ಕಾಫಿ ಕೆನೆಗಟ್ಟಿತ್ತು. ವಾರ್ತಾಪತ್ರಿಕೆ ನೀರಿನಲ್ಲಿ ಒಂದಾಗಿತ್ತು. ಅಂಚೆ ಪತ್ರ ಹೊರಬರಲು ಹಾತೊರೆಯುತ್ತಲೇ ಇತ್ತು. ಹಲ್ಲಿ ಕೊರೆಯುತ್ತಾ ಬಿದ್ದಲ್ಲೇ ಬಿದ್ದಿತ್ತು. ಪೊರಕೆ ಕಡ್ಡಿಗಳು ಚಲ್ಲಾಪಿಲ್ಲಿಯಾಗಿ ಅಂಗಳದಲ್ಲಿ ಹರಡಿತ್ತು. ಗುಲಾಬಿ ಕುಂಡ ಬಿದ್ದು ಹೊರಳಾಡುತ್ತಿತ್ತು. ತೆರೆದ ಆಲ್ಬಂ ತೆರೆದೇ ಇತ್ತು. ಒಡೆದ ಬಾಟಲಿಯಿಂದ ತುಪ್ಪ ಬಿಸಿಲಿಗೆ ಕರಗಿ ಎಲ್ಲೆಡೆ ಹರಡಿತ್ತು. ಸೊಂಟದ ಕಳಕ್ ಅಮೃತಾಂಜನವನ್ನು ಎದುರು ನೋಡುತ್ತಿತ್ತು. ಎರಡು ಜೋಡಿ ಕೆಂಪು ಬಿಳಿ ಚಪ್ಪಲಿಗಳು ತಮ್ಮನ್ನು ಒಂದುಗೂಡಿಸುವ ಕಾಲುಗಳ ಹಾದಿ ಕಾಯುತ್ತಿದ್ದವು. ಮಾವಯ್ಯನ ಗೊರಕೆ ಮಾತ್ರ ಫ್ಯಾಕ್ಟರಿ ಸೈರನ್ನಿನಂತೆ ಕೂಗುತ್ತಲೇ ಇತ್ತು!

*ಸ್ಫೂರ್ತಿ– ಇಂಟರ್ನೆಟ್*

---

## ಕತ್ತೆ ಕತೆ

ಒಂದು ಕತ್ತೆ ಕತ್ತಲಲ್ಲಿ ಕತ್ತೆತ್ತಿ ಕೆನೆಯುತ್ತಾ ಕತ್ತಿಯಂಥಾ ಕಿರುಹಾದಿಯಲ್ಲಿ ಸಾಗುತ್ತಾ ಕತ್ತರಿಗುಂಡಿಯಲ್ಲಿ ಸಿಕ್ಕಿ ಬಾಲ ಕತ್ತಿರಿಸಿಕೊಂಡು ಕುತ್ತು ತಂದುಕೊಂಡು ಕತ್ತೆ ನಾನಿರಬಹುದು ನನಗೇಕೆ ಈ ಕಥೆ ಅಂತ ವ್ಯಥೆ ಪಟ್ಟು ಹೀಗೆ ಎಷ್ಟೊತ್ತು ಕಥಾಕಾಲಕ್ಷೇಪ ಮಾಡಲಿ ಅಂತ ಕತ್ತೆತ್ತಿ ಆಕಾಶದ ಕಡೆ ನೋಡಿ ಒಮ್ಮೆ ಕಾಲು ಕದಲಿಸಿತು. ಕತ್ತೆ ಕಾಲು ಬಿಡಿಸಿಕೊಂಡು ಅಲ್ಲಿಂದ ಕಾಲು ತೆಗೆಯುವ ಮುನ್ನ ಕತ್ತೆಗೂ ಒಂದು ಕಾಲ ಇದೆ ಅಂತ ಇದಕ್ಕೆ ಹೇಳೋದು ಅಂದುಕೊಂಡಿತು.

# ಆಯ್ದ ಚಾಣಕ್ಯ ನೀತಿಗಳು ಮತ್ತು ಅದಕ್ಕೆ ಪೂರಕವಾದ ರಾಜಕಾರಣ ನೀತಿಗಳು

**- ಬೇಲೂರು ರಾಮಮೂರ್ತಿ**

ಇತರರ ತಪ್ಪುಗಳಿಂದ ಕಲಿಯಿರಿ ಏಕೆಂದರೆ ಎಲ್ಲಾ ತಪ್ಪುಗಳನ್ನು ನೀವೇ ಮಾಡಲು ಹೆಚ್ಚು ಕಾಲ ನೀವು ಬದುಕಿರೋಲ್ಲ –

***ಇತರರು ತಪ್ಪು ಮಾಡೋಕೆ ಕಾಯಲೇಬೇಕಿಲ್ಲ. ನಾವೇ ತಪ್ಪು ಮಾಡಿ ಅದನ್ನು ಇತರರ ಮೇಲೆ ಹೊರಿಸೋ ಚಾಕಚಕ್ಯತೆ ಇದ್ದರೆ ಸಾಕಲ್ಲ.***

ಯಾವುದೇ ಒಬ್ಬ ಮನುಷ್ಯ ತುಂಬಾ ಸತ್ಯವಂತನಾಗಿರೋಕೆ ಸಾಧ್ಯವಿಲ್ಲ. ಏಕೆಂದರೆ ನೆಟ್ಟಗೆ ಇರುವ ಮರದ ರೆಂಬೆಗಳನ್ನೇ ಮೊದಲು ಕತ್ತರಿಸೋದು. ಸತ್ಯವಂತನಿಗೇ ಮೊದಲ ಹೊಡೆತ ಬೀಳೋದು –

**ಅನೀತಿಯೇ ರಾಜಕಾರಣದ ನೀತಿ ಇರಬಹುದೇ**

***ಸತ್ಯವಂತರಾಗಿರೋದು ಸಾಧ್ಯವಿಲ್ಲ ಎಂತಲೇ ನಾವು ರಾಜಕೀಯ ಸೇರಿರೋದು.***

ಯಾವುದೇ ಹಾವು ವಿಷಪೂರಿತವಲ್ಲದಿದ್ದರೂ ಸಹ ಅದು ಹಾಗೆ ನಟಿಸಿದರೆ ಅದಕ್ಕೇ ಕ್ಷೇಮ –

***ಅದಕ್ಕೇ ವಿಧಾನಸೌಧದ ಹೊರಗೂ ಒಳಗೂ ನಾವು ಯಾವಾಗಲೂ ಸರ್ಕಾರದ ವಿರುದ್ಧ ಗಲಾಟೆ ಮಾಡಿದ ಹಾಗೆ ನಟಿಸುತ್ತಲೇ ಇರುತ್ತೇವೆ.***

ಪ್ರತಿ ಸ್ನೇಹದ ಹಿಂದೆಯೂ ಒಂದು ಚೂರು ಸ್ವಾರ್ಥ ಇದ್ದೇ ಇರುತ್ತೆ. ಸ್ವಾರ್ಥ ಇಲ್ಲದ ಸ್ನೇಹವಿಲ್ಲವೇ ಇಲ್ಲ. ಇದು ಕಹಿಯಾದ ಸತ್ಯ –

***ಸ್ನೇಹದ ಹಿಂದೆ ಸ್ವಾರ್ಥ ಇಲ್ಲದಿದ್ದರೆ ನಾವು ಶಾಸಕರೂ, ಮಂತ್ರಿಯೂ ಆಗೋದು ಸಾಧ್ಯವೇ ಇಲ್ಲ.***

ನೀವು ಯಾವುದೇ ಕೆಲಸ ಪ್ರಾರಂಭಿಸುವ ಮೊದಲು ಮೂರು ಪ್ರಶ್ನೆಗಳನ್ನು ನಿಮಗೇ ಕೇಳಿಕೊಳ್ಳಿ. ನಾನು ಈ ಕೆಲಸವನ್ನು ಏಕೆ ಪ್ರಾರಂಭಿಸುತ್ತಿದ್ದೀನಿ? ಇದರ ಫಲಿತಾಂಶವೇನಾಗಬಹುದು? ನಾನು ಈ ಕೆಲಸದಲ್ಲಿ ಯಶಸ್ವಿಯಾಗುತ್ತೇನೆಯೇ? ಈ ಪ್ರಶ್ನೆಗಳ ಕುರಿತು ಚೆನ್ನಾಗಿ ಚಿಂತಿಸಿ ಉತ್ತರ ನಿಮಗೆ ಸಮಾಧಾನ ತರುವಂತಿದ್ದರೆ ಕೆಲಸ ಪ್ರಾರಂಭಿಸಿ –

***ಚುನಾವಣೆಗೆ ನಿಂತ್ಕೊಳ್ಳಾ? ಮತಪೆಟ್ಟಿಗೆಗಳನ್ನು ಎಗರಿಸ್ಲಾ? ಚುನಾವಣೆ ಗೆದ್ದು ಮಂತ್ರಿಯಾಗ್ಲಾ? ಅಂತ ಪ್ರಶ್ನೆ ಕೇಳ್ಕೊತೀನಿ, ನನ್ನ ಮನಸ್ಸು ಆಗಬಹುದು ಎನ್ನುತ್ತೆ ಆಗ ಉಮೇದುವಾರಿಕೆ ಸಲ್ಲಿಸ್ತೀನಿ.***

ನಿಮಗೆ ಭಯ ಆವರಿಸಿದ ತಕ್ಷಣವೇ ಅದರ ಮೇಲೆ ಬಿದ್ದು ಅದನ್ನು ಸರ್ವನಾಶಗೊಳಿಸಿ –

***ನಮ್ಮನ್ನು ಕಂಡರೆ ಇತರರು ಭಯಪಡೋ ಹಾಗೆ ವ್ಯಕ್ತಿತ್ವ ಬೆಳೆಸಿಕೊಂಡರೆ ನಮಗೆ ಭಯ ಆವರಿಸುವ ಪ್ರಮೇಯವೇ ಇರೋಲ್ಲ.***

ಪ್ರಪಂಚದ ಅತ್ಯುತ್ತಮ ಶಕ್ತಿ ಎಂದರೆ ಯೌವನ ಮತ್ತು ಸೌಂದರ್ಯ ತುಂಬಿದ ಹೆಣ್ಣು –

***ಅದು ನಮಗೂ ಗೊತ್ತು. ಅದಕ್ಕೇ ನಾವು ಅಂಥಾ ಶಕ್ತಿಯ ಜೊತೆಜೊತೆಗೆ ಹಗಲೂ ರಾತ್ರಿ ಇರಬೇಕು ಅಂತ ಸದಾ ಚಿಂತಿಸುತ್ತಿರುತ್ತೀವಿ ಮತ್ತು ಅವಕಾಶ ಮಾಡಿಕೊಂಡು ಶಕ್ತಿಯನ್ನು ಉಪಯೋಗ ಮಾಡ್ಕೊತೀವಿ.***

ನೀವು ಯಾವುದೇ ಕೆಲಸ ಪ್ರಾರಂಭಿಸಿದ ಮೇಲೆ ಅದರ ಫಲಿತಾಂಶ ಕುರಿತು ಚಿಂತಿಸಿ ಕೆಲಸವನ್ನು ಅರ್ಧಕ್ಕೇ ನಿಲ್ಲಿಸಬೇಡಿ. ಯಾರು ನಿಯತ್ತಿನಿಂದ ಕೆಲಸ ಮಾಡುತ್ತಾರೋ ಅವರೇ ಯಶಸ್ವಿಯಾಗೋದು –

***ಖಂಡಿತಾ. ನಾವು ಪ್ರಾರಂಭಿಸಿದ ಕೆಲಸ (ಸರ್ಕಾರ ಉರುಳಿಸೋದು – ಮಂತ್ರಿ ಸ್ಥಾನ ಗಿಟ್ಟಿಸಿಕೊಳ್ಳೋದು – ವಿದೇಶ ಯಾತ್ರೆ ಮಾಡೋದು) ಯಶಸ್ವಿಯಾಗಲು ಏನೇನು ಮಾಡಬೇಕೋ – ಅಪಹರಣ, ದರೋಢೆ, ಕೊಲೆ ಮುಂತಾದುವು – ಅವುಗಳನ್ನೆಲ್ಲ ಮಾಡೇ ಮಾಡ್ತೀವಿ, ಅಥವಾ ಮಾಡಿಸ್ತೀವಿ ಮತ್ತು ಯಶಸ್ವಿಯಾಗ್ತೀವಿ.***

ಹೂವಿನ ಪರಿಮಳ ಹರಡೋದು ಗಾಳಿ ಬೀಸುವ ದಿಕ್ಕಿನತ್ತ. ಆದರೆ ಒಳ್ಳೆಯ ಜನರ ಒಳ್ಳೆಯತನಗಳು ಎಲ್ಲಾ ದಿಕ್ಕುಗಳಿಗೂ ಹರಡುತ್ತವೆ.

***ಒಳ್ಳೇದು ಮಾಡ್ತೀವೋ ಕೆಟ್ಟದು ಮಾಡ್ತೀವೋ, ಆದರೆ ಒಳ್ಳೇದು ಮಾಡ್ತಿದೀವಿ ಅಂತ ಎಲ್ಲ ಕಡೆ ಸುದ್ದಿ ಹರಡೋ ಭಟ್ಟಂಗಿಗಳ ಗುಂಪೊಂದನ್ನು ಸೃಷ್ಟಿಸಿಕೊಂಡಿರ್ತೀವಲ್ಲ.***

ದೇವರು ಬರೀ ವಿಗ್ರಹಗಳಲ್ಲಿರುತ್ತಾನೆ ಎನ್ನೋದು ತಪ್ಪು. ನಿಮ್ಮ ಒಳ್ಳೆಯ ಚಿಂತನೆಗಳೇ ದೇವರು. ನಿಮ್ಮ ಹೃದಯವೇ ದೇವಾಲಯ.

***ಗೊತ್ತು. ಅದಕ್ಕೇ ಅಧಿಕಾರ ಬರೀ ಚಿಂತನೆಯಲ್ಲಿರುತ್ತೆ ಅನ್ನೋದನ್ನು ನಾವು ನಂಬೋದಿಲ್ಲ. ನಮ್ಮ ಕುರ್ಚಿಯೇ ದೇವಾಲಯ, ನಮ್ಮ ಅಧಿಕಾರವೇ ದೇವತಾ ಕಾರ್ಯ, ಭರವಸೆಗಳೇ ಮಂತ್ರ, ಲಂಚವೇ ದಕ್ಷಿಣೆ.***

ಹುಟ್ಟಿನಿಂದ ಯಾರೂ ಉತ್ತಮರೆನಿಸಿಕೊಳ್ಳೋದಿಲ್ಲ, ಬದಲಿಗೆ ಅವರು ಮಾಡಿದ ಒಳ್ಳೆಯ ಕೆಲಸಗಳಿಂದ –

***ಚೆನ್ನಾಗಿದೆ. ಮಂತ್ರಿಯಾಗೋದೂ ಕೂಡಾ ಒಂದು ಒಳ್ಳೇ ಕೆಲಸವೇ. ಮತ್ತೆ ಒಳ್ಳೇ ಕೆಲಸ ಮಾಡಬೇಕು ಅಂದ್ರೆ, ಮಂತ್ರಿ ಪದವಿ ಬೇಡ್ವೇ. ಅದಕ್ಕೇ ನಾವು ಒಳ್ಳೆ ಕೆಲಸ ಮಾಡೋಣ ಅಂತಲೇ ಮಂತ್ರಿಪದವಿಗೆ ಹೋರಾಡೋದು.***

ನಿಮಗಿಂತ ತೀರ ಎತ್ತರದ ಮಟ್ಟದಲ್ಲಿರುವ ಅಥವಾ ನಿಮಗಿಂತ ತೀರಾ ಕೆಳಮಟ್ಟದಲ್ಲಿರುವವರೊಂದಿಗೆ ಎಂದೂ ಸ್ನೇಹ ಮಾಡಬೇಡಿ. ಏಕೆಂದರೆ ಅಂಥಾ ಸ್ನೇಹ

ಎಂದೂ ಸಂತೋಷ ತಂದುಕೊಡೋದಿಲ್ಲ –

***ಅದಕ್ಕೇ ನಾವು ಎಂದೂ ಕೆಳಮಟ್ಟದ ರಾಜಕಾರಿಣಿಗಳ ಸ್ನೇಹ ಮಾಡೋದಿಲ್ಲ, ಪ್ರಧಾನಮಂತ್ರಿಯ ಸ್ನೇಹಾನೂ ಮಾಡಲ್ಲ. ಬರೀ ಮಂತ್ರಿಗಳು ಮುಖ್ಯಮಂತ್ರಿಗಳ ಸ್ನೇಹ ಮಾಡ್ತೀವಿ.***

ಮೊದಲ 5 ವರ್ಷ ನಿಮ್ಮ ಮಗುವನ್ನು ಅತಿಯಾಗಿ ಪ್ರೀತಿಸಿ. ನಂತರದ 5 ವರ್ಷಗಳಲ್ಲಿ ಅವಶ್ಯಕತೆ ಬಂದಾಗ ಬೈಯೋಕೆ, ತಿದ್ದೋಕೆ ಹಿಂಜರಿಯಬೇಡಿ. ನಂತರದ 5 ವರ್ಷಗಳಲ್ಲಿ ನಿಮ್ಮ ಮಗುವನ್ನು ಸ್ನೇಹಿತನಂತೆ ಕಾಣಿ. ನಿಮ್ಮ ಬೆಳೆದ ಮಕ್ಕಳೇ ನಿಮ್ಮ ಅತ್ಯುತ್ತಮ ಸ್ನೇಹಿತರು –

***ಇದು ಶಾಸಕರಿಗೂ ಅನ್ವಯ ಮಾಡ್ಕೊಂಡಿದೀವಿ. ಮೊದಲ 5 ವರ್ಷ ಹೊಸ ಶಾಸಕನನ್ನು ಅತಿಯಾಗಿ ಪ್ರೀತಿಸ್ತೀವಿ. ನಂತರ 5 ವರ್ಷ ಅವನ ಜೋಬಲ್ಲಿ ನಮ್ಮ ಕೈ ಇರುತ್ತೆ. ನಂತರದ 5 ವರ್ಷ ಅವನನ್ನು ಸ್ನೇಹಿತನಂತೆ ಕಂಡರೂ ಒಳಗೊಳಗೇ ದ್ವೇಷಿಸುತ್ತೀವಿ. ಏಕಂದ್ರೆ ನಮ್ಮ ಕುರ್ಚಿಗೆ ಯಾವತ್ತೂ ಅವನೇ ಪೈಪೋಟಿ ಒಡ್ಡೋನು.***

ಪುಸ್ತಕಗಳು ದಡ್ಡರಿಗೆ ಅನುಪಯೋಗಿ ವಸ್ತುಗಳು ಹೇಗೆಂದ್ರೆ ದೃಷ್ಟಿಹೀನರಿಗೆ ಕನ್ನಡಿ ಇದ್ದಂತೆ –

***ಎಲ್ಲಾ ಪುಸ್ತಕಗಳೂ ಹಾಗೇನಲ್ಲ. ನಮ್ಮ ಚೆಕ್ (ಕೆಲವು ಸಲ ಇತರರ ಚೆಕ್ ಪುಸ್ತಕವೂ) ಪುಸ್ತಕ ನಮಗೆ ತುಂಬಾ ಅತ್ಯುತ್ತಮ. ಅದೇ ನಮಗೆ ಕನ್ನಡಿ.***

ವಿದ್ಯಾಭ್ಯಾಸ ನಿಮ್ಮ ಬದುಕಿಗೆ ತೀರ ಅವಶ್ಯಕ. ವಿದ್ಯಾವಂತರನ್ನು ಸಮಾಜ ತುಂಬಾ ಗೌರವಿಸುತ್ತದೆ. ಪೈಪೋಟಿಯಲ್ಲಿ ವಿದ್ಯಾಭ್ಯಾಸವು ಯೌವನ ಮತ್ತು ಸೌಂದರ್ಯವನ್ನೂ ಕೂಡಾ ಹಿಂದಿಕ್ಕುತ್ತದೆ.

***ಪ್ರತಿಯೊಂದು ಚುನಾವಣೆಯನ್ನೂ ಗೆಲ್ಲೋದು ಹೇಗೆ, ಪ್ರತಿಯೊಂದು ಸರ್ಕಾರದಲ್ಲೂ ಒಂದಲ್ಲ ಒಂದು ಕುರ್ಚಿ ಗಿಟ್ಟಿಸಿಕೊಳ್ಳೋದು ಹೇಗೆ ಎನ್ನುವ ವಿದ್ಯಾಭ್ಯಾಸವನ್ನು ನಾವು ಸದಾ ಮಾಡ್ತಲೇ ಇರ್ತೀವಿ.***

## ಪಕ್ಷಾಂತರಿಗಳು ಮತ್ತು ವಿವಾಹ

ಹುಡುಗನಿಗೆ ಮದುವೆ ಫಿಕ್ಸ್ ಆಯಿತು. ಹುಡುಗಿ ಕೇಳಿದಳು ನಿಮ್ಮದೇನು ವೃತ್ತಿ? ಹುಡುಗ ಹೇಳಿದ ರಾಜಕಾರಣ. ಹಾಗಾದರೆ ಪಕ್ಷಾಂತರ ಮಾಡುತ್ತೀರಲ್ಲವೇ ಅಂತ ಕೇಳಿದಳು. ಪಕ್ಷಾಂತರವಿಲ್ಲದೇ ರಾಜಕಾರಣವೇ ಎಂದು ನಕ್ಕ. ಹುಡುಗ ಕೇಳಿದ ನಾನು ನಿನಗೆ ಇಷ್ಟವೇ. ಹುಡುಗಿ ಹೇಳಿದಳು. ನಾನೂ ಪಕ್ಷಾಂತರ ಪ್ರೇಮಿಯೇ ಇನ್ನೊಂದು ಪಕ್ಷ ಸಿಗೋವರೆಗೂ ಸಧ್ಯಕ್ಕೇ ನಿಮ್ಮ ಪಕ್ಷದಲ್ಲೇ ಇರ್ತೀನಿ ಅಂತ ಕಣ್ಣು ಮಿಟುಕಿಸಿದಳು.

# ಸ್ನೇಹಕ್ಕೆ ಬೇಕಾಗಿರುವ ಬೇಸ್.....

**- ಎಚ್. ಗೋಪಾಲಕೃಷ್ಣ**

**ಮೊ**ದಲಿನಿಂದಲೂ ನನಗೆ ಒಂದು ಆಶ್ಚರ್ಯವಾಗುವ ಸಂಗತಿ ಎಂದರೆ ನಾವು ಹೇಗೆ ಹೋದ ಕಡೆಗಳಲ್ಲಿ ಹೊಂದಿಕೊಳ್ಳುತ್ತೇವೆ ಅನ್ನುವುದು. ಮೊದಮೊದಲು ಮನುಷ್ಯ ಸಾಂಘಿಕ ಜೀವಿ ಅವನಿಗೆ ಹೊಂದಿಕೊಳ್ಳದೇ ಬೇರೆ ದಾರಿಯೇ ಇಲ್ಲ, ಅದರಿಂದ ಹೊಂದಿಕೊಳ್ಳುತ್ತಾನೆ ಎಂದು ನನ್ನದೇ ಆದ ತಿಳುವಳಿಕೆ ನನಗಿತ್ತು. ಆದರೆ ವಯಸ್ಸಾಗುತ್ತಾ ಬಂದ ಹಾಗೆ, ಅನುಭವ ಹೆಚ್ಚಾಗುತ್ತದೆ ನೋಡಿ, ಆಗ ಅನಿವಾರ್ಯವಾಗಿ ನಮ್ಮ ಕೆಲವು ನಂಬಿಕೆಗಳನ್ನು ನಾವು ಬದಲಾಯಿಸಿಕೊಳ್ಳುತ್ತೇವೆ.

**ಹೊಂದಾಣಿಕೆಯ ಜೊತೆಗೆ ಒಂದಾಣಿಕೆಯೂ ಸ್ನೇಹದ ಹೈಲೈಟ್ ಅಲ್ಲವೇ**

ನನಗೆ ತಿಳಿದಿರುವ ಸುಮಾರು ಜನರು ಅವರು ಹುಟ್ಟಿದ ಬೆಳೆದ ಸ್ಥಳಗಳಿಂದ ಹೊರ ಊರುಗಳಿಗೆ ಹೊರ ದೇಶಗಳಿಗೆ ವಲಸೆ ಹೋಗಿದ್ದಾರೆ. ಸುಮಾರು ವರ್ಷ ಅಲ್ಲಿಯೇ ವಾಸ್ತವ್ಯ ಸಹ ಮಾಡಿದ್ದಾರೆ. ತಮ್ಮ ಕೊನೆಗಾಲವನ್ನೂ ಅಲ್ಲೇ ಅಂದರೆ ತಾವು ಜೀವನ ಸಾಗಿಸಿದ ಸ್ಥಳಗಳಲ್ಲಿಯೇ ಕಳೆದೂ ಇದ್ದಾರೆ. ಅವರ ಪರಿಸ್ಥಿತಿ ನೆನೆಸಿಕೊಂಡಾಗ ನನಗೆ ಹಲವಾರು ಬಾರಿ ಅಯ್ಯೋ ಅಂತ ಅನ್ನಿಸಿದ್ದರೂ ಅವರ ಮನೋಬಲದ ಬಗ್ಗೆ ಅಭಿಮಾನ ಪಟ್ಟಿದ್ದೇನೆ.

ನನ್ನ ಬಂಧುವೊಬ್ಬರು ಸುಮಾರು ವರ್ಷ ನಾಡಿನ ಹೊರಗಡೆಯೇ ಸೇವೆ ಸಲ್ಲಿಸಿದ್ದರು. ಕಳೆದ ವರ್ಷ ಅವರಿಗೆ ಉದ್ಯೋಗದಿಂದ ನಿವೃತ್ತಿಯಾಯಿತು. ಹೊರದೇಶದಲ್ಲಿಯೇ ಸುಮಾರು ವರ್ಷಗಳು ಕಳೆದಿದ್ದರಿಂದ ಅವರಿಗೂ ಇಲ್ಲಿಗೆ ಬರುವುದು, ಇಲ್ಲಿ ಬಂದ ನಂತರ ಹೊಸದಾಗಿ ಇಲ್ಲಿ ತಮ್ಮ ಜೀವನ ಆರಂಭಿಸುವುದು, ಹೊಸ ಗೆಳೆಯರನ್ನು ಹುಡುಕಿಕೊಳ್ಳುವುದು ಮೊದಲಾದ ಚಿಂತೆಗಳು ಕಾಡತೊಡಗಿದವು. ಪಾಪ ಒಂದೆರೆಡು ದಿವಸ ಚಿಂತೆಯಲ್ಲಿಯೇ ಕಳೆದರು. ಕೊನೆಗೆ ಬೇರೆ ದಾರಿ ಕಾಣಿಸದೇ ನನ್ನ ಬಳಿ ಬಂದರು. ''ಹೀಗೆ ಹೊರದೇಶದಲ್ಲಿನ ನನ್ನ ನಂಟು ಮುಗೀತು. ಇನ್ನೊಂದೆರಡು ತಿಂಗಳಿನಲ್ಲಿ ಇಲ್ಲಿಗೆ ಬಂದು ಜೀವನ ಮತ್ತೆ ಶುರು ಮಾಡುವ ಯೋಚನೆ ಇದೆ....'' ಅಂದರು.

''ಬನ್ನಿ ಸಾರ್. ಹೊರದೇಶದಿಂದ ಬಂದಿದ್ದೀರಿ, ನಿಮಗೆ ಸುಮಾರು ಜನ ಹೊಸಾ ಸ್ನೇಹಿತರೂ ಸಿಗ್ತಾರೆ, ಜೀವನ ಸುಗಮವಾಗುತ್ತೆ...'' ಅಂದೆ.

''ಜೀವನ ಸುಗಮವಾಗೋದಲ್ಲಾ ಸಾರ್ ಸಮಸ್ಯೆ ಬೇರೆ ರೀತಿಯದ್ದು...'' ಅಂದರು.

ನನಗೆ ಇದೇನಪ್ಪಾ ಅನಿಸಿತು.

''ಹೇಳೀ ಸಾರ್? ಯಾವ ರೀತಿ ಸಮಸ್ಯೆ? ನಮ್ಮ ಕೈಲಾದರೆ ಪರಿಹಾರ ಹುಡುಕೋಣ...'' ಅಂತ ವಿವರ ಬಯಸಿದೆ.

''ಹೊರದೇಶದಿಂದ ಬಂದಿರೋರು ಅಂದ ಕೂಡಲೇ ಆರ್ಥಿಕವಾಗಿ ಚೆನ್ನಾಗಿರೋರು

ಅನ್ನುವ ಭಾವನೆ ಇರುತ್ತೆ. ಅದರ ಮೂಲಕ ನನಗೆ ಮೋಸ ಮಾಡೋರೇ ಸಿಕ್ಕರೆ ನನ್ನ ಗತಿ ಏನು...?''

ಹೌದಲ್ಲಾ ಅನ್ನಿಸಿತು.

''ಸರಿ ಇವರೇ ನೀವು ಹೇಳೋದು ಸರಿ. ಒಂದು ವಾರ ಸಮಯ ಕೊಡಿ ನಿಮಗೆ ಸರಿ ಹೋಗುವ ಗೆಳೆಯರು ಸಿಕ್ತಾರಾ ನೋಡ್ತೀನಿ...'' ಅಂದೆ.

''ಸರಿ ಹಾಗೇ ಮಾಡ್ತೀನಿ. ನನ್ನ ಮೈಂಡ್ ಸೆಟ್ ಗೊತ್ತಲ್ಲಾ ನಿಮಗೆ?...'' ಅಂತ ಅವರ ವಿವರಗಳನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದರು.

ಇವರಿಗೆ ಸರಿಹೋಗುವ ಮನುಷ್ಯ ಹೇಗಿರಬೇಕು ಅಂತ ಒಂದು ಪಟ್ಟಿ ಮಾಡಿಕೊಂಡೆ. ಮನೆಯವರ ಹತ್ತಿರ ವಿಚಾರಗೋಷ್ಠಿ ನಡೆಸಿದೆ. ನಿನ್ನ ವಿಷಯದಲ್ಲಿ ನೀನು ಇವಾಗ ವಹಿಸುತ್ತಿರೋ ಈ ಜಾಗ್ರತೆ ವಹಿಸಿದ್ದರೆ ಖಂಡಿತ ನೀನು ಹೀಗೆ ಇರ್ತಾ ಇರಲಿಲ್ಲ ಅಂತ ಯಾವ ಗೊರವನಹಳ್ಳಿ ದೇವರ ಮುಂದೆ ಬೇಕಾದರೂ ಪ್ರಮಾಣ ಮಾಡ್ತೀನಿ ಅಂತ ನನ್ನಾಕೆ ಷರಾ ಹಾಕಿದಳು.

ಹೆಂಡತಿ ಎದುರು ಮಾತು ಆಡಿ ಯಾವ ಬ್ರಹ್ಮ ಗೆದ್ದಿದ್ದಾನೆ ಹೇಳಿ? ಹೌದು ಅಂತ ತಲೆಯಾಡಿಸಿದೆ.

ಐದು ದಿವಸ ಕೂತು ನನ್ನ ಗೆಳೆಯರ ಒಂದು ಪಟ್ಟಿ ತಯಾರಿಸಿದೆ. ಅದರಲ್ಲಿ ಈ ನನ್ನ ಬಂಧು(ಹೊಸಾ ಸ್ನೇಹಿತ)ವಿಗೆ ಯಾರು ಸರಿಹೋಗಬಹುದು ಅಂತ ಪಟ್ಟಿ ಕಿರಿದು ಮಾಡಿದೆ. ಮನಸ್ಸಿನಲ್ಲಿ ಅದೇನೋ ಹುಮ್ಮಸ್ಸು ಎದ್ದು ಕಾಣಿಸಿತು. ಹೊಸದಾಗಿ ಏನನ್ನಾದರೂ ಮಾಡಲು ಹೊರಟಾಗ ಕಾಣುತ್ತಲ್ಲಾ ಅಂತಹ ಹುಮ್ಮಸ್ಸು.

ಒಂದು ವಾರದ ನಂತರ ಹೊಸಾ ಸ್ನೇಹಿತ ಬಂದ. ಅವರನ್ನು ಕೂಡಿಸಿಕೊಂಡು ಪಟ್ಟಿ ಎದುರಿಗೆ ಇಟ್ಟುಕೊಂಡೆ.

''ನೋಡಿ ಇವರೇ...'' ಅಂತ ಮಾತು ಆರಂಭಿಸಿದೆ.

''ನನ್ನ ಗೆಳೆಯರ ಅವರುಗಳ ಸ್ನೇಹಿತರ ಒಂದು ಲಿಸ್ಟು ಮಾಡದೀನಿ. ಅವರವರ ಅಭಿರುಚಿಗಳು ಅವರವರ ಫೀಲ್ಡ್ ಇವನ್ನೆಲ್ಲಾ ಇಲ್ಲಿ ವಿವರವಾಗಿ ನಮೂದಿಸಿದ್ದೀನಿ. ನನಗೆ ತಿಳಿದ ಹಾಗೆ ಇವರನ್ನ ನೀವು ನನ್ನನ್ನು ಹೇಗೆ ನಂಬಿದೀರೋ ಹಾಗೇ ನಂಬಬಹುದು. ಇದನ್ನ ಎರಡು ಮೂರು ಸಲ ನೋಡಿ, ನಿಮಗೆ ಸರಿ ಹೋಗ್ತಾರೆ ಅನ್ನೋವರನ್ನ ಟಿಕ್ ಮಾಡಿ. ಆಮೇಲೆ ಅವರನ್ನ ಭೇಟಿ ಮಾಡಿಸ್ತೀನಿ...'' ಅಂದೆ.

''ಹಾಗೇ ಆಗಲಿ...'' ಅಂತ ಅವರು ಪಟ್ಟಿ ತೆಗೆದುಕೊಂಡರು. ನನ್ನ ಎದುರು ಪಟ್ಟಿ ಮೇಲೆ ಕಣ್ಣು ಹಾಯಿಸಿದರು. ''ಎರಡು ದಿವಸದ ನಂತರ ಬರ್ತೀನಿ, ಮತ್ತೆ ತಮ್ಮನ್ನ ಕಾಣ್ತೀನಿ..'' ಅಂದರು. ಸರಿ ಇವರೇ ಅಂದೆ. ಈ ಪಟ್ಟಿ ಹಿಡಕೊಂಡು ಮತ್ತೊಬ್ಬರ ಹತ್ತಿರ ಅವರ ಸಲಹೆ ಕೇಳ್ತಾರೆ ಅಂತ ನನಗೂ ಗೊತ್ತು, ಅವರಿಗೂ. ಈತ ಹೀಗೆ ಯೋಚನೆ ಮಾಡ್ತಾನೆ ಅಂತ ಗೊತ್ತು ! ಅವರ ಸಂಕಟವೂ ಗೊತ್ತು – ಆದರೆ ಯಾರನ್ನೇ ಆಗಲಿ ಹೇಗೆ ಮೊದಲನೇ ಸಲಕ್ಕೇ ಪೂರ್ಣವಾಗಿ ನಂಬೋದೂ...?

ಎರಡು ದಿವಸದ ನಂತರ ಅವರು ಹುಡುಕಿಕೊಂಡು ಬಂದರು. ಸಾರ್, ನೀವು ಕೊಟ್ಟ ಲಿಸ್ಟು ನೋಡಿದೆ, ಅದರಲ್ಲಿ ಕೆಲವರನ್ನ ನಾನೇ ಆರಿಸಿದ್ದೀನಿ, ಅವರನ್ನ ಭೇಟಿ ಮಾಡಿಸಿ... ಅಂತ ವಿನಂತಿಸಿದರು.

ಪಟ್ಟಿಯನ್ನ ಅವರ ಹತ್ತಿರ ಇಸಕೊಂಡೆ. ಇವರನ್ನ ಸಂಪರ್ಕ ಮಾಡ್ತೀನಿ, ಅವರ ಬಿಡುವು ನೋಡಿಕೊಂಡು ಅವರ ಹತ್ತಿರ ಕರಕೊಂಡು ಹೋಗ್ತೀನಿ... ಅಂತ ಆಶ್ವಾಸನೆ ನೀಡಿದೆ. ಅವರ ಹತ್ತಿರ ಕೊಟ್ಟಿದ್ದ ಪಟ್ಟಿ, ಅವರು ನನಗೆ ನೀಡಿದ ಪಟ್ಟಿ ನೋಡಿದೆ. ಅದೆಂತಹ ಆಶ್ಚರ್ಯ ಕಾದಿತ್ತು ಅಂತೀರೀ...? ಅವರ ಆಯ್ಕೆ ಮಾಡಿದ್ದವರನ್ನು ನೋಡಿದರೆ ಸರಿ ಸುಮಾರು ಎಲ್ಲರೂ ಅವರ ಕ್ಷೇತ್ರಕ್ಕೆ ಸಂಬಂಧಿಸಿದವರೇ ಆಗಿದ್ದರು ಮತ್ತು ಒಂದೋ ಎರಡೋ ಅಪವಾದಗಳೂ ಇದ್ದವು. ಈ ಅಪವಾದಗಳು ಎಂದರೆ ಇವರ ಕ್ಷೇತ್ರಕ್ಕೆ ಯಾವುದೇ ರೀತಿಯಲ್ಲಿಯೂ ಸಂಬಂಧ ಪಡದವರೂ ಇದ್ದರು.

ಒಂದು ವಾರದ ನಂತರ ನನ್ನ ಸ್ನೇಹಿತರ ಬಿಡುವು ನೋಡಿಕೊಂಡು ಅವರ ಬಳಿಗೆ ಈ ನನ್ನ ಹೊಸ ಗೆಳೆಯರನ್ನು ಕರೆದೊಯ್ದೆ - ಪರಿಚಯ ಮಾಡಿಸಲು. ಪರಿಚಯ ಮಾಡಿಸಿ ಆಯಿತು. ಇಬ್ಬರೂ ಪರಸ್ಪರ ಹೇಗೆ ಮಾತಿನಲ್ಲಿ ತೊಡಗಿಕೊಂಡರು ಎಂದರೆ ನನ್ನ ಇರುವೇ ಅವರಿಗೆ ಮರೆತ ಹಾಗಿತ್ತು ! ಕೆಲವೇ ಗಂಟೆಗಳಲ್ಲಿ ಇವರು ಹಳೆಯ ಗೆಳೆಯರೇ ಆಗಿಹೋಗಿದ್ದರು. ಇದೇ ರೀತಿ ಸುಮಾರು ಜನ ಪರಿಚಯವಾದರು ನನ್ನ ಹೊಸ ಗೆಳೆಯರಿಗೆ. ಕೆಲವೇ ತಿಂಗಳುಗಳಲ್ಲಿ ಎಲ್ಲರ ಬಗ್ಗೆಯೂ ಒಳ್ಳೆಯ ಅಭಿಪ್ರಾಯವನ್ನೇ ಇವರು ಹೊಂದಿದ್ದರು ಅದೇ ರೀತಿ ಇವರ ಕ್ಷೇತ್ರಕ್ಕೆ ಸಂಬಂಧ ಪಡದವರೂ ಸಹ ಇವರ ಗೆಳೆಯರಾದರು. ಈ ಪ್ರಸಂಗ ನಡೆದ ನಂತರ ನಾನೂ ಈ ವಿಷಯವನ್ನು ಮರೆತೇ ಬಿಟ್ಟಿದ್ದೆ. ಮೊನ್ನೆ ನನ್ನ ಮನೆಗೆ ಬಂದ ಹೊಸ ಗೆಳೆಯರು ಒಂದು ಆಹ್ವಾನ ನೀಡಿದರು. ಹೊಸದಾಗಿ ಸ್ನೇಹಿತರಾದವರಿಗೆ ಮನೆಯಲ್ಲಿ ಒಂದು ಔತಣ ಏರ್ಪಾಟು ಮಾಡಿದ್ದರು.

ಏನು ಹೊಸಾ ಸಂಗತಿ? ಅಂತ ಕೇಳಿದೆ,

ತುಂಬಾ ಒಳ್ಳೆಯ ಗೆಳೆಯರನ್ನು ಗುರುತು ಮಾಡಿಕೊಟ್ಟಿರಿ, ಥ್ಯಾಂಕ್ಸ್ ಅಂದರು.

ಆಗಲೇ ಇವರೆಲ್ಲಾ ಒಳ್ಳೆಯವರು ಅಂತ ಹೇಗೆ ಗೊತ್ತಾಯಿತು? ಅಂತ ಆಶ್ಚರ್ಯದಿಂದ ಕೇಳಿದೆ!

ಸರಿಸುಮಾರು ಎಲ್ಲರಿಗೂ ನನಗಿರುವ ಆಸಕ್ತಿಗಳೇ ಇದೆ, ಅವರೂ ನನ್ನ ಹಾಗೇ ವಿಷಯಗಳನ್ನು ತಿಳಿದುಕೊಂಡಿದ್ದಾರೆ ಮತ್ತು ಸಮಾನ ಮನಸ್ಕರಾಗಿದ್ದರೆ ಅದಕ್ಕಿಂತಲೂ ಸ್ನೇಹಕ್ಕೆ ಬೇರೇನು ಬೇಸ್ ಬೇಕು ಹೇಳಿ...? ಅಂದರು.

ಪಿಳಿಪಿಳಿ ಅವರ ಮುಖ ನೋಡಿದೆ.

ಅರ್ಥವಾಗಲಿಲ್ಲವೇ? ನಿಮ್ಮ ಹತ್ತಿರ ಸ್ನೇಹಿತರನ್ನ ಗುರುತು ಮಾಡಿಸಿಕೊಂಡೆನಲ್ಲಾ ಆಗ ನನಗೆ ಬಾರೀ ಯೋಚನೆ ಇತ್ತು. ಕಾಣದ ಸ್ನೇಹಿತರನ್ನ ಈಗ ಗುರುತು ಮಾಡಿಕೊಂಡು ಹೊಸಾ ಸಮಸ್ಯೆಗಳನ್ನ ತಲೆ ಮೇಲೇ ಕೂಡಿಸಿಕೊಳ್ತಾ ಇದೇನಾ ಅಂತ. ಅದಕ್ಕೇ ಅವರುಗಳ ಸಂಗಡ ಸುಮಾರು ದಿವಸ ಓಡಾಡಿ ಪರಿಚಯ ಹೆಚ್ಚು ಮಾಡಿಕೊಂಡೆ. ಅವರುಗಳ ಬಗ್ಗೆ ಏನಾದರೂ ಸಂಶಯ ಬಂದಕೂಡಲೇ ಈ ಗುಂಪಿಗೆ ಸೇರಿಲ್ಲದೇ ಇರೋರನ್ನ ಪರಿಚಯ ಮಾಡಿಸಿದ್ರಲ್ಲಾ ಅವರ ಬಳಿ ಸಲಹೆ ಕೇಳುತ್ತಿದ್ದೆ ಈಗ ನೋಡಿ ಎಲ್ರೂನೂ ನನಗೆ ಆಪ್ತರೇ... ಅಂತ ದೊಡ್ಡದಾಗಿ ನಕ್ಕರು..

# ಇಲಿ ಹಿಡಿಯಕ್ಹೋಗಿ ಹೆಗ್ಣ ಒಳಗ್ಬಿಟ್ಕಂಡ್ರಂತೆ

**- ಎಚ್.ಆರ್. ಹನುಮಂತರಾವ್**

**ಎಂ**ದಿನಂತೆ ಈ ಆಷಾಢದ ಮೊದಲ ಶನಿವಾರದಂದು ನಮ್ಮ ಆನಂದವಿಹಾರ ಕ್ಲಬ್ಬಿನ ಚಿಟಿಕೆ ಸಂಘದವರ ಸಭೆ ಸೇರಿತ್ತು. ಖಾದ್ಯ, ಪಾದ್ಯ, ಪಾನೀಯಗಳ ಸಮಾರಾಧನೆಯ ನಡುವೆ ಚರ್ಚೆ ಎತ್ತಲಿಂದ ಎಲ್ಲಿಗೋ ಸಾಗುತ್ತಾ, ಬೆಂಗಳೂರು ನಗರ ಸಭೆ ಕಛೇರಿಯಲ್ಲಿ ಇಲಿಗಳ ಹಿಡಿಯಲಿಕ್ಕಾಗಿ, ವಿನಿಯೋಗಿಸಿದ ಹಣದ ಬಗ್ಗೆ ಆ ದಿನದ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಯ ಕಡೆಗೆ ಹೊರಳಿತ್ತು. ಅನೇಕ ಬಾರಿ ಇಂತಹ ಚರ್ಚೆಗಳು ಬಹು ರೋಚಕವಾಗಿದ್ದು, ಈ ವರದಿಗಾರನ ಲೇಖನಿಗೆ ಸಾಕಷ್ಟು ಸಾಮಗ್ರಿಯಾಗುತ್ತಿತ್ತು. ಈ ''ಆನಂದ ವಿಹಾರ ಕ್ಲಬ್''ನ ಪರಿಚಯವಿಲ್ಲದವರು ಒಮ್ಮೆ ಗುರುಗೋವಿಂದ ನಗರಕ್ಕೆ ಬಂದರೆ, ಅಲ್ಲಿಯ ರಾಮಮಂದಿರದ ರಸ್ತೆ ದಾಟಿ, ಸ್ವಲ್ಪ ಎಡಕ್ಕೆ ನಡೆದು ಮತ್ತೆ ಬಲಕ್ಕೆ ತಿರುಗಿದರೆ ಕಾಣಸಿಗುವ ಏಕೈಕ ಬಹು ಮಹಡಿ ಕಟ್ಟಡವೇ ಈ ಕ್ಲಬ್ಬಿನ ವಿಳಾಸ. ಅದರ ಮೊದಲ ಉಪ್ಪರಿಗೆಯ ಈಶಾನ್ಯ ದಿಕ್ಕಿಗಿರುವ ಪುಟ್ಟ ಹಜಾರವೇ ನಮ್ಮ ಚಿಟಿಕೆ ಸಂಘದವರ ಆಶ್ರಯ ಧಾಮ ಹಾಗೂ ಶಂಕರ ಸಿದ್ಧಾಂತಿಗಳೇ ಇದರ ಕೇಂದ್ರ ಬಿಂದು. ಅವರ ಮಾತೆಂದರೆ ಎಲ್ಲರಿಗೂ ಕುತೂಹಲದ, ರೋಚಕ ವೃತ್ತಾಂತಗಳ ರಸಾಸ್ವಾದನೆಯ ಕ್ಷಣಗಳು.

**ಇಲಿ ಹೆಗ್ಗಣ ಅವುಗಳ ರೂಪದಲ್ಲಿದ್ದರೆ ಗುರುತಿಸಬಹುದು. ಅವು ಮನುಷ್ಯರ ರೂಪ ತಾಳಿದ್ದರೆ?**

''ರೇವಣಪ್ಪ ನಿಮಗೆ ಗೊತ್ತಾ, ಈ ಬಿ.ಬಿ.ಎಂ.ಪಿ. ಕಛೇರಿಯಲ್ಲಿ ಇಪ್ಪತ್ತು ಇಲಿಗಳ ನಾಶಕ್ಕಾಗಿ ಎರಡು ಲಕ್ಷರೂಪಾಯಿಗಳು ವಿನಿಯೋಗವಾದವಂತೆ. ಅಂದ್ಮೇಲೆ, ನಿಮ್ಮ ಮಂಡಿಯಲ್ಲಿ ಈರುಳ್ಳಿ, ಆಲುಗಡ್ಡೆ, ಶೇಂಗಾ, ಧನಿಯ ಇತ್ಯಾದಿ ಸಾಮಗ್ರಿಗಳನ್ನು ಕಾಪಾಡಕ್ಕೆ ಎಷ್ಟಾಗಬಹುದು?'' ಪ್ರೊಫೆಸರ್ ಹಂಚಿಕಡ್ಡಿಯವರ ಪ್ರಶ್ನೆ.

''ತೆಗೀರಿ ಸಾರ್, ನಿಮ್ಮಾತೇನು, ಅವ್ರಿಗೇನ್ ಸರ್ಕಾರ ಹಣದ ಗ್ರಾಂಟ್ ಕೊಡ್ತಾರಾ?'' ಸಾಫ್ಟ್‌ವೇರ್ ತಂತ್ರಜ್ಞ ಪಿಲ್ಲೂ ಉವಾಚ. ''ಅಲ್ರೀ, ಅವರ ಗೋಡೌನಲ್ಲಿ ಧಾನ್ಯ ಕಾಪಾಡ್ಕೊಂಡ್ರೆ ತಾನೇ ನಮಗೆಲ್ಲ ಉಣ್ಣಕ್ಕೆ ಆಹಾರ ಒದಗೋದು? ರೈತರಿಗೆ ಸಾಲ ಮನ್ನ, ಸಾಲ ರಹಿತ ಬಡ್ಡಿ ಮನ್ನ, ಅಲ್ಲಲ್ಲ ಬಡ್ಡಿ ರಹಿತ ಸಾಲ ಇತ್ಯಾದಿ ಎಲ್ಲಾ ಸರ್ಕಾರ ಸಹಾಯ ಮಾಡೋವಾಗ, ಇದನ್ನೂ ಯಾಕ್ಮಾಡ್ಬಾರ್ದು? ಅಷ್ಟಕ್ಕೂ, ನೂರಕ್ಕೆ ನಲ್ವತ್ತೋ, ಐವತ್ತೋ ಆದಾಯ ತೋರ್ಸಿ ರೇವಣಪ್ಪ ಟ್ಯಾಕ್ಸ್ ಕಟ್ಟಲ್ವ? ಹೀ ಇಸ್ ಎ ಟ್ಯಾಕ್ಸ್ ಪೇಯರ್ ಯು ನೋ? ''ಕ್ರಾಸ್ ಕೊಶ್ಚನಿಸಿದರು ಎ.ಎನ್. ಕಪ್ಪಣ್ಣ (ನಮ್ಮ ಭಾಷೆಯಲ್ಲಿ ಎ.ಎನ್.ಕೆ. ಅರ್ಥಾತ್ ಎಳೆ ನಿಂಬೆಕಾಯಿ).

ಕಡೇ ವಾಕ್ಯವನ್ನ ಕೇಳಿ ಮಂಡಿಪೇಟೆ ದೊರೆ ರೇವಣಪ್ಪನವರಿಗೆ ಹೇಗೆ ಹೇಗೋ ಆಯಿತು. ಅವರ ಗಿರಿಜಾ ಮೀಸೆಯನ್ನು ತಿರುವುತ್ತಾ ಬಾಯಿ ತೆರೆಯುವಷ್ಟರಲ್ಲಿ, ನಮ್ಮ ಗರಡಿ ಪೈಲ್ವಾನ್ ಮಹಮದ್ ಪೀರ್ ಸಾಹೇಬು ''ಕ್ಯಾ ಬಾತ್ ಆಪ್ಕಾ, ಬಹುತ್ ಅಚ್ಚೆ ಬಾತ್ ಬೋಲೆ, ಅಲ್ರೀ, ರೇವಣಪ್ಪ ಬಜಾರ್ಮೇ ಇಲಿ ಕಾಯಕ್ಕೆ ಅಂತಾ ದುಕಾನ್ ಮಡಗವ್ರೆ! ಹಮಾರ ಮನ್ಯಾಗೂ ಇಲೀನು ಅದಾವೇ, ಹೆಗ್ಣ ಕೂಡ ಆತಾ ಜಾತಾ, ಜೊತೆಗೆ ಬಿಲ್ಲಿ ಕೂಡ. ಹಾಗಂತಾ ನಮಗೂ ಸರ್ಕಾರ್ ಸೇ ಗ್ರಾಂಟ್ ಮಿಲೇಗಾ ಕ್ಯಾ, ಎಳೆ ನಿಂಬೆ ಕಾಯವ್ರೆ?'' ಅವಕಾಶ ಸಿಕ್ಕಿದ್ರೆ ಸಾಕು, ಪೀರು ಭಾಯಿ ಕಪ್ಪಣ್ಣನ್ನ ಕಾಲೆಳೆಯೋದ್ ಬಿಡಲ್ಲ. ಅವ್ರಿಗೆ ಅದು ಬಲು ಖುಷಿ.

''ಹಾಗಾದ್ರೆ, ನಿಮ್ಮನೆಗೆ ಬರೋ ಇಲಿ ತಿನ್ನೋ ಬಿಲ್ಲೀಗೂ ಪೈಸಾ ವಸೂಲ್ ಆಗ್ಬೇಕು ಸರ್ಕಾರ್ದಿಂದ ಅಲ್ವೇ'' ನಿವೃತ್ತ ಜಡ್ಜ್ ವಾಸುದೇವ ಅಡಿಗರ ಪ್ರತಿಕ್ರಿಯೆ.

''ಅಷ್ಟೆ ಅಲ್ಲ ಪೀರೂ ಭೈ, ನಮ್ ಮನ್ಯಾಗೆ ನನ್ ಹೆಂಡ್ತಿ ತಮ್ಮ, ಅವ್ರಮ್ಮಾನೂ ಸೇರ್ಕೊಂಡು ಇಲಿಗಳ್ ತರಾನೆ ಕಚ್ಚಾಡ್ತಾನೆ ಇರ್ತಾರೆ, ನಮ್ಮಲ್ಲೇ ಬಂದ್ ಝೂಂಡಾ ಹಾಕಿ. ನಂಗೂ ಕಪ್ಪಣ್ಣ ಡಿ.ಏ., ಟೀ.ಎ. ರೆಕೆಮಂಡ್ ಮಾಡ್ತಾರಾ?''.... ಪಿಲ್ಟು ಅವರ ಉದ್ಗಾರ. ಅವ್ರ ದುಃಖದ ಕಟ್ಟೆ ಒಡೆದಿತ್ತು.

ಮಾತು ಎಲ್ಲೆಲ್ಲಿಗೋ ತಿರುಗುತ್ತಿದ್ದನ್ನ ಗಮನಿಸಿದ ಪ್ರೊ. ಹಂಚಿಕಡ್ಡಿ ''ವಿಷಯಕ್ಕೆ ಬನ್ನಿ ಇತ್ಲಾಗೆ, ಇದೀಗ ಇಲಿ ಹಿಡ್ಯಕ್ಕೋಸ್ಕರ ಅಷ್ಟೊಂದ್ ಖರ್ಚಾದರೆ, ಕಂತ್ರಿ ನಾಯಿಗಳ್ನ ಹಿಡಿಯಕ್ಕೆ ಅದೆಷ್ಟು ಕೋಟಿ ಹಣ ಬೇಕಾಗಬಹುದು? ಇದೇ ಆಧಾರದ ಮೇಲೆ ಒಂದೊಂದ್ ವಾರ್ಡ್ನಲ್ಲಿರೋ ಇಲಿ, ಹೆಗ್ಣ, ತಿಗಣೆ, ಸೊಳ್ಳೆ ಮತ್ತಿತರ ಜನರ ರಕ್ತ ಹೀರೋ ಅಂಥಹವನ್ನ ಕಂಡ್ಹಿಡ್ದು ನಾಶ ಮಾಡ್ಬೇಕಾದ್ರೆ ವರ್ಷೇ ವರ್ಷ ನಾವ್ ಕಟ್ಟೊ ತೆರಿಗೆಯೆಲ್ಲ ಸಾಲೋದೇ ಇಲ್ಲ ಏನಂತೀರಿ ಶಂಕರ್.''

''ಅದೇ ಈಗ ಆಗಿರೋದು, ಅದಕ್ಕೇ ಈ ಬಿ.ಬಿ.ಎಂ.ಪಿ.ನೂ ದಿವಾಳಿ ಆಗಿರೋದು ಅಂತಾ ಪೇಪರ್ನಲ್ಲೇ ಹಾಕವ್ರಲ್ಲ!'' ಪಿಲ್ಟು ಉತ್ತರಿಸಿದರು.

''ನಿಜ ಹೇಳ್ಬೇಕಂದ್ರೆ, ಇದಕ್ಕೆಲ್ಲಾ ಕಾರಣ ಅಲ್ಲಿರೋ ಭಾರಿ ಭಾರಿ ಮಾನವ ರೂಪದಲ್ಲಿರೋ ಸರ್ಕಾರೀ ಹೆಗ್ಣಗಳೇ ಅಂತಾ ಪಿಸುಗುಟ್ಟೋದ್ ಕೇಳಿದ್ದೆ'' ಚಂದ್ರು ಉವಾಚ.

ತಮ್ಮ ಸುಲೋಚನವನ್ನ ಒರೆಸಿ ಮೇಜಿನ ಮೇಲಿಡುತ್ತಾ ಸಿದ್ಧಾಂತಿಗಳು ಒಂದು ಬಾರಿ ಎಲ್ಲರ ಕಡೆ ನೋಡಿ ''ವಿಸ್ಮಯದ ಸಂಗತಿ ಅಂದರೆ ಇಷ್ಟೊಂದು ಹಣ ಹೇಗೆ ವಿನಿಯೋಗವಾಯಿತೆಂಬುದನ್ನ ಜವಾಬ್ದಾರಿಯ ಸ್ಥಾನದಲ್ಲಿದ್ದವರು ಯಾಕೆ ಪರಾಮರ್ಶಿಸದೇ ಹೋದರು ಎಂಬುದೆ.''

''ನಮ್ಮ ಬಜೆಟ್ನಲ್ಲಿ ವಿತ್ತೀಯ ಕೊರತೆ ಅಂತ ತೋರ್ಸುಸ್ತಾರೋ ಹೊರತು, ಅಲ್ಲಿದ್ದುದ್ದನ್ನ ಯಾವ ಯಾವ ಹೆಗ್ಗಣ ಎಲ್ಲೆಲ್ಲಿಂದ ಯಾಕೆ, ಹೇಗೆ ಬಂದು ತಿಂದೋಯ್ತಂತ ಯಾವ ಹಣಕಾಸಿನ ಮಂತ್ರೀನು ಹೇಳೋದೇ ಇಲ್ವೆ?'' ಪ್ರೊ. ಹಂಚಿಕಡ್ಡಿ ಉವಾಚ. ''ಅದೇನ್ ಬಿಡ್ರಿ, ನಂ ಸಾಹೇಬ್ರಿಗೆ ಜೋಬ್ನಲ್ಲಿರೋದೆ ಎಷ್ಟು, ಎಲ್ಹೋಯ್ತಂತ ತಿಳಿಯೋದಿಲ್ಲ ಬಾರ್ಗೆ

ಹೋಗ್ಬಂದ್ನಂತ್ರ, ಅಲ್ವೇ ಪೀರು?! ಆಗೆಲ್ಲಾ ನಿಂ ಬೀವಿ ಕೈಯಲ್ಲಿ ಆಡಿಟ್ ಮಾಡಿಸ್ಕಂಡು, ಮಂಗಳಾರ್ತಿ ಆಗೋದುಂಟಲ್ವಾ'' ಇದೀಗ ಪೀರ್ ಭಾಯಿಯ ಕಾಲೆಳೆಯೋಕೆ, ಸಾಹೇಬ್ರ ಚಾಳಿ ತಿಳಿದಿದ್ದ ಕಪ್ಪಣ್ಣನ ಸರದಿ.

ಪೀರು, ತಮ್ಮ ಗುಟ್ಟುರಟ್ಟಾಗಿದ್ದರಿಂದ, ಅಸಹನೆಯಿಂದ ಕಪ್ಪಣ್ಣರಿಗೆ ತಿರುಗೇಟು ನೀಡುವಷ್ಟರಲ್ಲಿ ನಯವಾಗಿ ಕೆಮ್ಮುತ್ತಾ ಸಿದ್ಧಾಂತಿಗಳು ''ಸುಮಾರು ಐವತ್ತು ವರುಷಗಳಿಗೂ ಮುನ್ನ ಅಂದರೆ ಸ್ವಾತಂತ್ರ್ಯ ಬಂದ ಹೊಸದರಲ್ಲಿ – ಇದೇ ತರಹದ ವ್ಯವಹಾರದಲ್ಲಿ ನಡೆದಿದ್ದ ಸರ್ಕಾರೀ ಪತ್ರ ವಿನಿಮಯ ಬಹಳ ಸ್ವಾರಸ್ಯವಾಗಿದೆ...'' ಎಂದು ಎಲ್ಲರ ದಿಕ್ಕಿನಲ್ಲೂ ನೋಡುತ್ತಾ ದೇಶಾವರಿ ನಗೆ ಬೀರಿದರು.

''ಅದೇನ್ ಸಾರ್, ವಿವರಿಸಿ ಹೇಳಬಹುದಲ್ಲ?'' ಹುಗ್ರ ಕನ್ನಡಾಭಿಮಾನಿ, ಓರಾಟಗಾರ ಚಂದ್ರು ಕೊಶ್ಚನಿಸಿದರು. ಗ್ಲಾಸಿನಲ್ಲಿದ್ದುದನ್ನು ಗಂಟಲಿಗೆ ಇಳಿಸುತ್ತಾ, ಸಿದ್ಧಾಂತಿಗಳು ಪ್ರಾರಂಭಿಸಿದರು ''ಅಪ್ರೋಚ್ ರಸ್ತೆಯೂ ಇಲ್ಲದ, ವಿದ್ಯುತ್ತನ್ನೂ ಕಾಣದ ಆ ದಿನಗಳಲ್ಲಿ, ನಮ್ಮ ಇಲಿಯಾರುಪುರ ಗ್ರಾಮಕ್ಕೆ ಒಂದು ಬಾರಿ ಚಿರತೆಗಳೆರಡು ರಾತ್ರಿಯ ವೇಳೆ ಹೊಂಚು ಹಾಕಿ, ಒಂದು ಮಗು ಹಾಗೂ ಎರಡು ಕರುಗಳನ್ನು ಒಯ್ದಿದ್ದವು. ಕಾಡಿನಲ್ಲಿನ ಇತರೆ ಬಲಿಷ್ಠ ಪ್ರಾಣಿಗಳ ಒತ್ತಡದಿಂದಲೋ ಇಲ್ಲವೇ ವೃದ್ಧಾಪ್ಯತೆಯ ಅಸಹಾಯಕತೆಯಿಂದಲೋ, ಅವುಗಳ ಹಿಂದೆ ನರಿಗಳು, ಇವನ್ನು ಕೀಟಲೆ ಮಾಡುವ ಉದ್ದೇಶದಿಂದ ಒಂದಷ್ಟು ಮಂಗಗಳೂ ಹಿಂಬಾಲಿಸಿದ್ದವು. ಜೊತೆಗೆ, ಅವುಗಳ ಹಿಂದೆ ಕಾಗೆಗಳು. ಇತ್ತ ಚಿರತೆ, ನರಿಗಳಿಂದ ಮಕ್ಕಳು, ದೊಡ್ಡವರು, ಹೈನುಗಳಿಗೆ ಅಪಾಯವಿದ್ದರೆ, ಅತ್ತ ಮಂಗಗಳ ಸಾಮೂಹಿಕ ದಾಂಧಲೆಯಿಂದ ಗ್ರಾಮಸ್ತರು ಕಂಗಲಾಗಿದ್ದರು. ಪೋಲಿಸ್ ಔಟ್‌ಪೋಸ್ಟ್ ಬಹುದೂರವೇ ಇದ್ದು, ದೂರು ಕೊಡಲು ಹೋಗಿ ಬರಲು, ಬಸ್ಸಿನ ಸೌಕರ್ಯವೂ ಇಲ್ಲದ ಆ ದಿನಗಳಲ್ಲಿ ಸುಮಾರು ಎರಡು ಮೂರು ದಿನಗಳೇ ಬೇಕಾಗುತ್ತಿತ್ತು. ಸಾಲದ್ದಕ್ಕೆ ಮಳೆಗಾಲ. ಹೀಗಾಗಿ ಊರ ಪಟೇಲ ಕಣಿಭೈರಯ್ಯ ಶಾನುಭೋಗರಿಂದ ಪತ್ರಬರೆಸಿ, ಅಮಲ್ದಾರ ಕಚೇರಿಗೂ ಮತ್ತು ಅದರ ನಕಲನ್ನು ಪೋಲಿಸ್ ಔಟ್ ಪೋಸ್ಟಿಗೂ ಆಳುಗಳ ಮುಖೇನ ಕಳಿಸಿಕೊಟ್ಟ. ಅಮಲ್ದಾರರು ದೀರ್ಘ ರಜೆಯ ಮೇಲಿದ್ದು, ಏನೂ ಪ್ರಯೋಜನವಾಗಲಿಲ್ಲ. ಇನ್ನು, ಕನಿಷ್ಟ ಬಿಲ್ಲೆಯೊಬ್ಬ ಬಂದು ಎಲ್ಲರಿಂದ ವಿಷಯ ಸಂಗ್ರಹಿಸಿ ಹೋದ ನಂತರ ಮತ್ತೆ ಯಾರೂ ಆ ಪಕ್ಕ ತಲೆ ಹಾಕಲಿಲ್ಲ. ಪಟೇಲ ಮತ್ತು ಶಾನುಭೋಗರ ಮೇಲೆ ಊರ ಜನರ ಒತ್ತಾಯ ಹೆಚ್ಚಾಗತೊಡಗಿತು. ಜನ ಊರು ಬಿಟ್ಟು ಹೋಗುವುದಿರಲಿ, ಬೇರೆಡೆಯಿಂದ ಬರುವವರೂ ಪ್ರಾಣಭಯದಿಂದ ಅಲ್ಲಿಗೆ ಕಾಲಿಡದಾದರು. ಕೊನೆಗೆ ಮತ್ತೂ ಒಬ್ಬ ಗ್ರಾಮಸ್ಥ, ಹನ್ನೆರಡು ಮೇಕೆಗಳು ಚಿರತೆಗಳಿಗೆ ಆಹಾರವಾದ ಮೇಲೆ ಮತ್ತು ಹಲವು ತೋಟಗಳ ನಿರ್ನಾಮದ ನಂತರ, ಸರ್ಕಾರ ಕಣ್ತೆರೆದು ಬೇಟೆಗಾರರನ್ನು ಕಳುಹಿಸಿದರು. ಅಷ್ಟು ಹೊತ್ತಿಗೆ ಎರಡು ಮೂರೂ ತಿಂಗಳೇ ಸಂದುಹೋಗಿದ್ದವು. ಬಿತ್ತನೆ ಕಾರ್ಯ ಮುಂದೂಡಾಗಿತ್ತು. ಎಲ್ಲೆಲ್ಲೂ ಕೃತಕ ಅಭಾವ.'' ಮಾತು ನಿಲ್ಲಿಸಿ ಸಿದ್ಧಾಂತಿಗಳು ಅಂಗವಸ್ತ್ರದಿಂದ ಮುಖವನ್ನ

ಒರೆಸಿಕೊಳ್ಳುತ್ತಾ ಬೇರರ್ ವಾಸುವಿನೆಡೆ ದೃಷ್ಟಿ ಬೀರಿದರು. ಕೂಡಲೇ ವಾಸು ಮತ್ತಷ್ಟು ಪಾನೀಯ, ಖಾರದ ಗೋಡಂಬಿ ಅವರ ಮುಂದಿಟ್ಟ.

''ಯಾಕೆ ಆಗ್ಗ ಅಸೆಂಬ್ಲಿ ಇರಲಿಲ್ಲವೇ ಸಾರು, ಈಗಿನ ನಂ ಪಾರ್ಟಿ ನಾಯಕರಾಗಿದ್ದಿದ್ದರೆ ಸರ್ಕಾರವನ್ನ ಒಕ್ಕಲೆಬ್ಬಿಸಿಬಿಡುತ್ತಿದ್ದರು.'' ನಮ್ಮ ಪುಡಿ ರಾಜಕಾರಣಿ ಮುದ್ದೇಶಯ್ಯನ ಉದ್ಗಾರ. ಈತ ರಾಜಕಾರಣಿಗಳ ವಂಶದಿಂದ ಬಂದವ. ವ್ಯವಹಾರ ಚತುರನಾದ ಈತನಿಗೆ ರಾಜಕಾರಣ ಒಂದು ಸೈಡ್ ಬಿಸಿನೆಸ್ಸ್ ಅಷ್ಟೇಯ.

''ಎನ್ಮಾತ್ ಹೇಳಿದ್ರಿ, ತೆಗೀರೀ ಅತ್ಲಾಗೆ. ಅಲ್ಲ, ಈಗನ್ ಲೀಡರ್ಗೋಳೇ ಆವಾಗಿನ್ ತೋಳಾ, ಚಿರತೆ ಆಗಿಂದ್ರಂತ ಕಾಣ್ಸತ್ತೆ. ಇವರುಗಳು ಆಗಿನ ನಾಯಕರಾಗಿದ್ದಿದ್ರೆ, ಆ ಹಳ್ಳಿನಲ್ಲೂ ಮತ್ತಷ್ಟು ರೇಪ್ ಪ್ರಕರಣ, ಇನ್ನಷ್ಟ್ ಜಮೀನ್ ಒತ್ತುವರೀಗಳೂ ಆಗಿ, ''ಜಿ'' ಕೆಟಗೊರಿ ''ಗುಳುಂ'' ಕೆಟಗೊರಿ ಆಗಿ, ಅವ್ರ ಮಕ್ಕಳೂ, ಮೊಮ್ಮಕ್ಳು ಬಾರುಗಳಲ್ಲಿ ಗಲಾಟೆ ಮಾಡ್ಕಂಡ್ ಮೇಯ್ತಾ ಇರ್ತಿದ್ರಷ್ಟೆಯ'' ಕನ್ನಡ ಸೇನಾನಿ ಚಂದ್ರು ಉವಾಚ.

''ಆವಾಗ್ಗೆ ಮುದ್ದೇಶಯ್ಯ ಹೆಸರ್ಗೆ ತಕ್ಕನಾಗಿ ಮುದ್ದೆ ತಿಂದ್ಕಂಡ್ ಮುಖಕ್ ನಾಮ ಹಾಕಂಡ್ ದಾಸಯ್ಯನ ತರಹ ಬೀದಿಬೀದಿ ಅಲೀಬೇಕಾಗ್ತಿತ್ತು'' ಪಿಲ್ಬು ಮಾತಿನಲ್ಲೇ ತಿವಿದರು.

''ಇಲ್ಲಾ, ಅಸೆಂಬ್ಲಿ ಮೆಂಬರಾಗಿ, ಸೀಟ್ನಾಗ್ ಕುಂತು ನಿದ್ದೇನೂ ತೆಗೀಬೋದಿತ್ತು'' ಪಿಲ್ಬು ಸೇರಿಸಿದರು.

''ಆದ್ರೆ ಆಗ ಇಲಿ, ಹೆಗ್ಗಣಗಳೇ ಇರ್ತಿರಲಿಲ್ಲ! ಕಾರಣ, ಈ ಹೆಬ್ಬುಲಿಗಳೇ ಮೇಯೊಕ್ಕ್ ಷುರು ಮಾಡಿದ್ಮೇಲೆ, ಅವುಗಳ ಬಡ ಸಂಬಂಧಿ ಈ ಇಲಿಗಳಿಗೆಲ್ಲಿ ಜಾಗ?'' ಪ್ರೊ. ಹಂಚಿಕಡ್ಡಿ ಸೇರಿಸಿದರು.

''ಆವಾಗ್ಗೆ ಆ ಊರ ತುಂಬಾ, ಜ್ಞಾನನ ಪೀಠದ ಮೇಲೆ ಕುಂತ – ಅದೇನೋ ಅಂತಾರಲ್ಲ – ಹೆಸರು ಮರ್ತೋಗಿದೆ – ಮೂತ್ರದ ಬಗ್ಗೆ ಕಲ್ನಲ್ಲಿ ಸಂಶೋಧಿಸಿ ಅಲ್ಲಲ್ಲ ಕಲ್ಲು ದೇವರನ ಮೂತ್ರಿಸಿ ಸಂಶೋಧನೆ ಮಾಡಿದ್ರಲ್ಲ, ಅವ್ರು ಯಾವ್ದೋ ಕಥೇಲಿ ಬರ್ದಿರೋ ತರಹ, ''ಇಲಿ, ಇಲಿ ಹೆಗ್ಗಣ, ಇಲಿ, ಇಲಿ ಹೆಗ್ಗಣ'' ಅಂತ ಒದರ್ಕೊಂಡ್ ಪ್ರಾಣ ಬಿಡ್ತಾ ಊರಾಚೆಯ ಹೊಳೆನಲ್ಲಿ ಮುಳುಗಿ ಸಾಯ್ತಿದ್ವು. ಯಾವ ಜೋಗಿ ಸಹಾಯವೂ ಇಲ್ದೆ, ಅಲ್ವಾ ಚಂದ್ರು?'' ಪ್ರಶ್ನಿಸಿದರು ಪ್ರೊ. ಹಂಚಿಕಡ್ಡಿ.

''ನೀವು ಮಾಸ್ತಿಕಾ ಬೊಮ್ಮನಹಳ್ಳಿ ಕಿಂದರ್ ಜೋಗಿ ಬಗ್ಗೆ ಬೋಲಾ ಕ್ಯಾ? ಉನ್ಕ ಏ ಕವಿತಾ ಬಹುತ್ ಫೇಮಸ್. ನಮ್ಗೆ ಮಿಡ್ಲ್ ಸ್ಕೂಲ್ಮೆಯೇ ಪಢಾಥಾ. ಅವ್ರೇನ್ ಸಾರ್ ತಿಮ್ಮನಹಳ್ಳಿ ಕುಟ್ಟಪ್ಪನ ಮೀರ್ಸಿದವ್ರು. ಬಹುತ್ ಬಡಾ ಸಾರ್?'' ಪೀರ್ ಸಾಬು ಮಾಮೂಲಿಯಂತೆ ಕವಿಗಳನ್ನು ತಿರುಗಿಸಿದ್ದರು. 'ಕುವೆಂಪು' ಹೆಸರನ್ನ ಮನಸೋ ಇಚ್ಛೆ ತಿರುಚಿದ್ದಲ್ಲದೆ, ಜೋಗಿಯನ್ನ ಮಾಸ್ತಿಯವರಿಗೆ ದಾನಮಾಡಿದ್ದರು. ಸಾಹೇಬ್ರ ಉದಾರ ಗುಣ!

ಯಾರು ನಗಲಿಲ್ಲ, ವಾಸುದೇವ ಮಾತ್ರ ಮುಖವನ್ನ ತಿರುಚಿ, ಅಸಹನೆಯನ್ನ ಪ್ರದರ್ಶಿಸಿದರು. ಎ.ಎನ್.ಕೆ. ಮತ್ತು ಚಂದ್ರುರ ಕನ್ನಡ ಸಾಹಿತ್ಯ ಜ್ಞಾನ ಸಾಹೇಬರಿಗಿಂತ ಹೆಚ್ಚೇನಿರಲಿಲ್ಲ.

''ಈ ಮಧ್ಯೆ, ಶಾನುಭೋಗ ಶೀನಪ್ಪ ಸರ್ಕಾರದೊಡನೆ ಒಂದು ಪತ್ರ ವ್ಯವಹಾರದ ಸೇತುವೆಯನ್ನೇ ಕಟ್ಟುಬಿಟ್ಟ!'' – ಶಂಕರ ಸಿದ್ಧಾಂತಿಗಳು ಮುಂದುವರೆಸಿದರು. ಅರ್ಥವಾಗಲಿಲ್ಲ, ಬಿಡಿಸಿ ಹೇಳಿ ಸಾರ್? ರೇವಣಪ್ಪನವರ ಪ್ರಶ್ನೆ.

ತೇದಿ.... ಪತ್ರ 1. ಇಲಿಯೂರು ಗ್ರಾಮ, ಹೋಬಳಿ ಇತ್ಯಾದಿ. ಸನ್ಮಾನ್ಯ ಅಮಲ್ದಾರ್‌ರವರಿಗೆ, ಅನಂತಾನಂತ ವಂದನೆಗಳು. ಇದೀಗ ನಮ್ಮ ಗ್ರಾಮಕ್ಕೆ ಸುಮಾರು ದಿನಗಳಿಂದ ಹಲವು ಚಿರತೆಗಳು ರಾತ್ರಿ ಹೊತ್ತು ಹೊಂಚು ಹಾಕಿ ಬಂದು ಕುರಿ, ಮೇಕೆ, ಕರು, ಹಸುಳೆಗಳನ್ನು ತಿಂದು ಹಾಕುತ್ತಿವೆ. ಯಾರೂ ಏನೂ ಮಾಡಲಾಗದ ಸ್ಥಿತಿಯಲ್ಲಿದ್ದು ಭಯಭೀತರಾಗಿರುತ್ತಾರೆ. ಆದಷ್ಟು ಕೂಡಲೇ ತಡಮಾಡದೆ ಇವನ್ನು ನಿಗ್ರಹ ಮಾಡಿ, ಗ್ರಾಮ ಸುರಕ್ಷಿತವಾಗುವಂತೆ ಇಲ್ಲಿನ ಹಾಗೂ ಸುತ್ತಮುತ್ತಲ ಗ್ರಾಮಗಳ ಪರವಾಗಿ ಪ್ರಾರ್ಥಿಸುತ್ತೇವೆ. ಇಂತು, ನಿಮ್ಮ ಸೇವಕ... ತೇದಿ.... ಪತ್ರ 2. ತೇದಿ...ಗೆ ಇತ್ಯಾದಿ. ಸನ್ಮಾನ್ಯರೆ, ನಮ್ಮ ಹಿಂದಿನ ಪತ್ರಕ್ಕೆ ನಿಮ್ಮಿಂದ ಜವಾಬು ಬಂದಿಲ್ಲ ಮತ್ತು ಇದುವರೆಗೆ ಯಾವ ರೀತಿಯ ರಕ್ಷಣೆಯೂ ದೊರೆತಿಲ್ಲ, ಹಾಗಾಗಿ ಗ್ರಾಮಸ್ಥರು, ಮಕ್ಕಳಾದಿಯಾಗಿ ಭೀತಿಯಿಂದ ಮನೆಯಿಂದ ಹೊರಬರಲು ಆಗದೆ ಕಳವಳಗೊಂಡಿದ್ದಾರೆ. ಈ ಪತ್ರಕಂಡಾದರೂ ತಡಮಾಡದೆ ರಕ್ಷಣೆಯನ್ನು ಒದಗಿಸತಕ್ಕದ್ದೆಂದು... ಇತ್ಯಾದಿ. ಪತ್ರ 3–4 ಹಾಗೂ 5ನೇದಕ್ಕೂ ಉತ್ತರವಿಲ್ಲ. ಕೊನೆಗೆ ಮತ್ತೆ ಪಟೇಲನೇ ಪೋಲಿಸರಿಗೂ, ತಹಸೀಲ್ದಾರ ಕಛೇರಿಗೂ ಮುಖ್ತ ಮಾತಾಡಿ ಬಂದ ಮೇಲೆ ಜವಾಬು ಬಂತು. ರಕ್ಷಣಾ ಸಿಬ್ಬಂದಿಯಲ್ಲ! ಸರ್ಕಾರೀ ಉತ್ತರ: 1. ನಮ್ಮ ಉಲ್ಲೇಖ–ಇಲಿ–ಶೀನಪ್ಪ–ಸಂಖ್ಯೆ–420... ನಿಮ್ಮ... ದಿನಾಂಕದ ಪತ್ರದಿಂದ ನಿಮ್ಮ ಗ್ರಾಮದ ಸುತ್ತ ಚಿರತೆಗಳ ಹಾವಳಿಯಿರುವುದೆಂದು ಭಾವಿಸಲಾಗಿದೆ. ಆದರೆ, ಈ ವಿಚಾರವನ್ನ ನಮ್ಮ ವನರಕ್ಷಣಾ ಪ್ರಾಧಿಕಾರಕ್ಕೆ ತಿಳಿಸಲಾಗಿ, ಈ ಬಗ್ಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದಿರುವುದು ನಿಮ್ಮವರ ಅನುಮಾನ, ಭಯಕ್ಕೆ ಯಾವುದೇ ಆಧಾರವಿಲ್ಲವಾಗಿ ರಕ್ಷಣೆ ಒದಗಿಸಲು ಸಾಧ್ಯವಿಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ. ಸಹಿ. ಜನಗಳಿಗೆ ಕೋಪ, ಅಸಹಾಯಕತೆ ಮತ್ತಷ್ಟು ಖಾರವಾದ ಪತ್ರಕ್ಕೆ ಕಾರಣವಾಯಿತು. ಕೂಡಲೇ ಜವಾಬು ಕೂಡ ಬಂತು. ಪತ್ರ ನಂ. ಉ: ಇಲಿ ಶೀನಪ್ಪ ಸಂಖ್ಯೆ–443 ನಿಮ್ಮ ತೇದಿ...ಯ ಪತ್ರಕ್ಕೆ ಉತ್ತರವಾಗಿ ನಾವು ಹೇಳಬೇಕಾದುದೇನೆಂದರೆ, ಸೂಕ್ತ ಪುರಾವೆ ಅಥವಾ ಆಧಾರವಿಲ್ಲದೆ ಸರ್ಕಾರ ಯಾವ ಕಾರ್ಯಕ್ರಮವನ್ನೂ ಆಚರಣೆಗೆ ತರಲಾಗುವುದಿಲ್ಲವೆಂಬುದನ್ನು ಈ ಮೂಲಕ ತಿಳಿಸಬಯಸುತ್ತೇವೆ.... ಸಹಿ ತಹ್ಸೀಲ್ದಾರ. ನಮ್ಮ ಶಾನುಭೋಗ ಆ ಊರಿನಲ್ಲಿ ಬಹು ಗಟ್ಟಿಗನೆಂದೇ ಪ್ರಖ್ಯಾತಿಯಾಗಿದ್ದ. ಯಾರಿಗೂ ಜಗ್ಗದ ವ್ಯಕ್ತಿ. ಮತ್ತಷ್ಟು ಪತ್ರಗಳನ್ನು ಅವರಿವರುಗಳು ಅನುಭವಿಸಿದ ನಷ್ಟಗಳ ಉಲ್ಲೇಖದೊಂದಿಗೆ ರವಾನಿಸಿದ. ''ಆದರೆ ಸಾರ್, ಪತ್ರಗಳಲ್ಲಿ ಇಲಿ ಶೀನಪ್ಪ ಎಂದೇಕೆ ಬರೆಯಲು ಕಾರಣ?'' ಫಿಲ್ಟು ಪ್ರಶ್ನಿಸಿದರು. ''ನಮ್ಮ ಸರ್ಕಾರೀ ಕಛೇರಿಗಳು ಪತ್ರಗಳಲ್ಲಿ ಇಂದ–ಗೆ ಗುರುತಿಸುವ ಕಾರಣಕ್ಕಾಗಿ ಅದೆಷ್ಟು ನಿರ್ಲಿಪ್ತ ಹಾಗೂ ವಿವೇಕ ರಹಿತ ಮನೋಭಾವದವರು ಅನ್ನುವುದೂ ಇದರಿಂದ ತಿಳಿಯುತ್ತದಲ್ಲವೆ?'' ಸಿದ್ಧಾಂತಿಗಳು ಮುಂದುವರೆಸಿದರು. ''ಆಗಿನಿಂದ ಮುಂದಿನ ಕೆಲವು ತಲೆಮಾರುಗಳವರೆಗೆ

ಈ ಶೀನಪ್ಪ ಅಲ್ಲಿಯ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಲಿ ಶೀನಪ್ಪ ಎಂದೇ ಪ್ರಸಿದ್ಧಿಯಾಗಿದ್ದರು. ಅವರಿದ್ದ ಮನೆ ರಸ್ತೆ ಇಲಿ ಶೀನಪ್ಪ ರಸ್ತೆ ಅಂತಲೇ ಗುರುತಿಸುವುದಿತ್ತು!

ಇದೀಗ ಮುಂದುವರೆಸಿದರು ಸಿದ್ಧಾಂತಿಗಳು "ನಮ್ಮ ಶೀನಪ್ಪ ನಿಜವಾಗಿಯೂ ಕೃದ್ಧನಾಗಿದ್ದ. ನಷ್ಟಗೊಂಡ ಹಲವರೊಡನೆ ತಹ್ಸೀಲ್ದಾರ ಕಛೇರಿಗೇ ಪ್ರಯಾಣಿಸಿ ಅಲ್ಲಿಯ ಗ್ರಾಮ ಪಂಚಾಯತಿ ಸದಸ್ಯರ ಮುಂದೆ ಪ್ರತಿಯೊಬ್ಬರ ಅಹವಾಲನ್ನು ಬರೆಸಿ, ಇವನೂ ಪ್ರಮಾಣಿಸಿದ ಸಹಿಯೊಡನೆ ಕೊಟ್ಟು ಬಂದ. ಮತ್ತೊಂದು ಪತ್ರ ಇವರುಗಳು ಊರು ಸೇರುತ್ತಿದ್ದಂತೆ, ಪ್ರಥಮತ: ಮೇಲಿನ ಜಿಲ್ಲಾ ಆಡಳಿತ ಅಧಿಕಾರಿಯಿಂದ ಬಂತು – ನಂ. ಉ: ಜಿಲ್ಲಾ-ಅಮಲ್ದಾರ್-ಇಲಿಶೀನಪ್ಪ ನಂ-1345/ತಾ/-ಗೆ- ನಿಮ್ಮ ಗ್ರಾಮದವರ ಅಹವಾಲು ಕೆಳಗಿನ ಕಛೇರಿಯಿಂದ ಈ ಕಛೇರಿಗೆ ತಲುಪಿದ್ದು, ಇದೀಗ 'ಅತಿ ಮುಖ್ಯ' ವಿಷಯವಾಗಿ ನಿರ್ಧರಿಸಲಾಗಿದೆ ಹಾಗೂ ಸರ್ಕಾರದ ತುರ್ತು ಅವಗಾಹನೆಯಲ್ಲಿದೆ. ಸೂಕ್ತ ತೀರ್ಮಾನ ಕೈಕೊಳ್ಳುವವರೆಗೆ, ನಿಮ್ಮ ಸಮಸ್ಯೆಗಳನ್ನು ಎಂದಿನಂತೆ ಕೆಳಗಿನ ಕಛೇರಿಗಳಲ್ಲಿಯೇ ನೋಂದಾಯಿಸಬೇಕಾದದ್ದು -ಇಂತು-ಸಹಿ. ಅಲ್ಲಿಯ ಅಧಿಕಾರಿಗಳ ಈ ಬೇಜವಾಬ್ದಾರೀ ಪತ್ರ ವ್ಯವಹಾರದಿಂದ ಬೇಸತ್ತ ಊರವರು ಇದೀಗ ಹನ್ನೆರಡನೆಯ ಪತ್ರ ಬರೆಯಲು ಹೋಗುವ ಗೋಜಿಗೆ ತಡೆ ಹಾಕಿ, ವಿಧಿ ಮಾಡಿಸಿದಂತಾಗಲಿ ಎಂಬ ಅಭಿಪ್ರಾಯಕ್ಕೆ ಬಂದಿದ್ದರು. ಆದರೆ ನಮ್ಮ ಶೀನಪ್ಪ ಛಲಬಿಡದ ತ್ರಿವಿಕ್ರಮನಂತೆ, ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ ಇವರ ನೆರೆಯ ಊರಿನವರೇ ಆಗಿದ್ದರೆಂದು ತಿಳಿದು ಬಂದು ನೇರ ಈ ಅಧಿಕಾರಿಗೆ ಎಲ್ಲ ಪತ್ರ ವ್ಯವಹಾರಗಳ ಸಾರಾಂಶವನ್ನು ಬರೆದು ಮು.ಮು.ಮುಂ.ಗಳ ಅವಹಾಗನೆಗಾಗಿ ಕಳಿಸಿದ. ಆ ಪತ್ರ ಹೇಗೊ ಮು.ಮು.ಮಂ. ನೋಡುವಂತಾಗಿ, ಎರಡೇ ದಿನಗಳಲ್ಲಿ ಅಮಲ್ದಾರ ಕಛೇರಿ ಹಾಗೂ ಜಿಲ್ಲಾ ಆಡಳಿತ ಕಛೇರಿ ಅಧಿಕಾರಿಗಳು ಪೊಲೀಸ್ ಸಿಬ್ಬಂದಿಯೊಡನೆ ಈ ಊರಿಗೆ ಬಂದಿಳಿದಿದ್ದಲ್ಲದೆ ಪ್ರತ್ಯೇಕ, ಪತ್ಯೇಕವಾಗಿ ನೊಂದವರೆಲ್ಲರ ಮತ್ತು ಈ ಶೀನಪ್ಪ ಹಾಗೂ ಪಟೇಲನ ಸಾಕ್ಷ್ಯವನ್ನ ಪಡೆದು ಕಾರ್ಯಶೀಲರಾಗಿ ಕಡೆಗೂ, ಈ ಎಲ್ಲ ತೊಂದರೆಗಳ ಕಾರಣವಾದ ಮುದಿ ಚಿರತೆಯೆರಡನ್ನು ಹಿಡಿದು ಕೊನೆಗೂ ನೆಮ್ಮದಿಯನ್ನು ತಂದರು" ಎಂದು ಸಿದ್ಧಾಂತಿಗಳು ತಮ್ಮ ಕೈ ಗಡಿಯಾರ ನೋಡಿ, ಎದ್ದು ಹೊರಡುವ ಸೂಚನೆ ಪ್ರದರ್ಶಿಸುತ್ತಿದ್ದಂತೆ, ಒಬ್ಬೊಬ್ಬರೇ ತಮ್ಮ ಮೇಜು, ಗ್ಲಾಸುಗಳನ್ನು ಬಿಟ್ಟು ಹೊರಡಲನುವಾದರು. ಚಂದ್ರಮನು ಸಭೆಯಲ್ಲಿ ದಿವ್ಯವಾಗಿ ಹೊಳೆಯುತ್ತಿದ್ದನು!

---

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1. ರಣಭೂಮಿ 2. ಆರಂಬ 4. ಮಂದಹಾಸ 7. ವಿಮೋಚನೆ 8. ಗಹನ 10. ವಾತಾಯನ 11. ಧನ್ವಂತರಿ 13. ನಮೂನೆ 14. ಉಪಕಾರಿ

**ಮೇಲಿಂದ ಕೆಳಕ್ಕೆ**

1. ರದಿಮಂ 3. ಬಣ್ಣನೆ 5. ದಶಕ 6. ಸಹಗಮನ 7. ವಿಧಾನಸೌಧ 9. ಪರಾತ 10. ವಾಮನ 12. ರಿಪೇರಿ

# ''ದೇವ್ರೇ.....ಗತಿ!''

**- ಲತಾ ಉದಯ ಹೆಗಡೆ**

**ಹೇ** ದೇವ! ಪಿತಪಿತ ಅಂತಿರೋ ಈ ಮಣ್ಣಿನ ಕಚ್ಚಾ ರಸ್ತೇಲಿ ಹೇಗ್ ನಡೀಲಿ? ಅಳ್ಳೂದು ಸುರ್ದೂರ್ ನಡೆಯೋ ಪರಿಸ್ಥಿತಿ. ಸ್ವಲ್ಪ ಅಲಕ್ಷ್ಯ ಆದ್ರೂ ಬೀಳೋದ್ ಗ್ಯಾರಂಟಿ. ಯಾಕಾದ್ರೂ ಮಳೆ ಬರುತ್ತೋ ಏನೋ.... ಅಯ್ಯೋ! ಚಪ್ಪಲ್ ಬೇರೆ ಹೂತು ಹೋಯ್ತಲ್ಲ.. ಹೇಗ್ ತೆಗ್ಯೋದು... ಕಾಲಿಂದಲೇ ಶಕ್ತಿ ಪ್ರಯೋಗ ಮಾಡಿ ತೆಗ್ಯೋಣ ಅಂದ್ರೆ ಬಾರು ಕಿತ್ ಬರೋದು ಗ್ಯಾರಂಟಿ. ಕೈಯಿಂದ ತೆಗೆಯೋಣ ಅಂದ್ರೆ ಪಾಪದವು ಅವೆಲ್ಲಿ ಖಾಲಿ ಇವೆ... ಒಂದ್ ಕೈನಲ್ಲಿ ಸಾಮಾನ್ ಚೀಲ ಮತ್ತು ಛತ್ರಿ, ಇನ್ನೊಂದ್ ಕೈನಲ್ಲಿ ಸೀರೆ ನರಿಗೆ. ಮನೆ ಸೇರ್ಕೊಂಡ್ರೆ ಸಾಕಾಗಿದೆ... ಹೇ ದೇವ! ಮೇಲ್ ಕೂತು ಮಜಾ ನೋಡ್ತಿದ್ದೀಯಾ...? ಹೂಂ! ನೋಡ್‌ದೇ ಇನ್ನೇನ್ ತಾನೇ ಮಾಡ್ತೀಯ... ಅಸಹಾಯಕತೆಯಿಂದ ಗೊಣಗಿಕೊಂಡೆ. ನನ್ನ ನಡಿಗೆ ದೊಂಬರಾಟದವರಂತಿತ್ತು! ನೀವಂದುಕೊಳ್ಳಬಹುದು ಮಣ್ಣಿನ ಕಚ್ಚಾ ರಸ್ತೇಲಿ ಯಾಕ್ ಬರಬೇಕು, ಡಾಂಬರ್ ರಸ್ತೇಲಿ ಬಂದ್ರೆ ಆಗ್ತಿತ್ತು ಇಷ್ಟೆಲ್ಲಾ ಸೀನೇ ಇರ್ತಿರ್ಲಿಲ್ಲ ಅಂತ. ಈ ಎಕ್ಸ್‌ಟೆನ್ಶನ್ ಏರಿಯಾಗೆ ಡಾಂಬರ್ ರಸ್ತೆ ಇದ್ದಿದ್ರೆ ಬರೋಕೆ. 'ಈ ಹೈಟೆಕ್ ಯುಗದಲ್ಲಿ ಡಾಂಬರ್ ರಸ್ತೆ ಇಲ್ವೇ... ಅದೂ ನಗರದಲ್ಲಿ... ಇವಳ ಪ್ರಲಾಪದಲ್ಲಿ ಹುರುಳಿಲ್ಲ ಸುಮ್ನೆ ಟೈಮ್‌ವೇಸ್ಟು' ಹಂಗ್ ಅಂದ್ಕೊಂಡು ಅಸಹನೆಯಿಂದ ಹುಬ್ಬು ಗಂಟ್ ಹಾಕ್ಬೇಡಿ. ವಿಷಯದ ತಲೆ - ಬುಡ ಏನೇನೂ ಗೊತ್ತಿಲ್ಲದ ನಿಮ್ಮ ಅನಿಸಿಕೆ ನ್ಯಾಯವಾಗೇ ಇದೆ. ನನ್ನ ಕತೆ ಕೇಳಿದ ಮೇಲೆ... ಅಲ್ಲಲ್ಲಾ ಓದಿದ ಮೇಲೆ ಹಲ್ಲಿ ತರಹ ಲೊಚ್ಚ್ ಗುಡೋಕೆ ಶುರು ಹಚ್ಕೋತಿರಾ...

> **ದೇವರ ಗೆಟಪ್‌ನಲ್ಲಿ ದೇವರೇನಾದರೂ ಬಂದ್ರೆ ಮಾನವ ಗೆಟ್ ಔಟ್ ಅನ್ನದೇ ಇರ್‍ತಾನ್ಯೇ. ಆಗ ದೇವರ ಗತಿಯೂ, ದೇವರೇ ಗತಿ?**

ಮಧ್ಯಮ ವರ್ಗದ ನಾವು ಬಾಡಿಗೆ ಮನೆ ರಗಳೇಲಿ ರೋಸ್ ಹೋಗಿದ್ದು. ಜೊತೆಗೆ ನೀರಿನ ತಾಪತ್ರಯ. ಉಪಕಾರ ಮಾಡಿದ ಹಾಗೆ ಬರ್ತಿತ್ತು ಎಂದು ದಿನಕ್ಕೊಮ್ಮೆ ಹೊತ್ತಿಲ್ಲ-ಗೊತ್ತಿಲ್ಲ, ನಮ್ಮಗಳ ಮೇಲೆ ಕನಿಕರ ಉಕ್ಕಿದಾಗ ನಲ್ಲೀಲಿ ಹರಿಯೋ ದೊಡ್ಡ ಮನಸ್ಸು, ಸರಿ, ಸುಲಭದಲ್ಲಿ ನೀರು ತುಂಬಿಸಿಕೊಳ್ಳಲು ಆಗುತ್ಯೇ? ನಮ್ ವಾನರ್ತಿ... ಕ್ಷಮಿಸಿ ಓನರ್ತಿಗೇ ಮೊದಲ ಆದ್ಯತೆ ಗಜ ಗಾಂಭೀರ್ಯದಲ್ಲಿ ಸಣ್ಣ ಲೋಟದಿಂದ ಹಿಡಿದು ಹಂಡಗಳವರೆಗೂ ನಿಧಾನವಾಗಿ ತುಂಬಿಸಿ ''ಅಯ್ಯೋ, ನೀರು ಎಲ್ರಿಗೂ ಬೇಕಲ್ವೇ, ನಿಮ್ಮಗಳ ಸಲುವಾಗೇ ಸ್ವಲ್ಪನೇ ತುಂಬಿಸ್ಕೊಂಡ್ವು. ಹಿಡ್ಕೊಳೀಪ್ಪಾ ನೀರು ಧಾರಳವಾಗಿ'' ದೇಶಾವರಿ ನಗೇಲಿ ತೋರಿದ ಔದಾರ್ಯಕ್ಕೆ ನಿದ್ದೆ ಕೆಟ್ ಕೂತಿದ್ದ ನಾವು ಸುಸ್ತು! ಹಾಗಂತ ರೆಸ್ಟ್ ಮಾಡೋಕಾಗುತ್ಯೇ... ನಮ್ಗಳ್ ಮೇಲೆ ಅದೇನ್ ದ್ವೇಷಾನೋ, ನಾವ್ ಹಿಡೀವಾಗ್ಲೆ ನೀರು ಕೊನೇ ಉಸಿರು ಎಳೀತಿತ್ತು. ಇನ್ನು ಈ ನೀರಿನ ಕೊರತೆಗೆ ಹೆದರಿ ನೆಂಟರಿಷ್ಟರು ಬರೋದು

ಕಡಿಮೆಯಾಗಿತ್ತು. ಒಳ್ಳೇದೇ ಆಯ್ತು ಅಂತೀರಾ? 'ಅವರವರ ಭಾವಕ್ಕೆ ಅವರವರ ಭಕುತಿಗೆ' ಬಿಡಿ. ಹಾಗೊಂದ್ವೇಳೆ ನೆಂಟರು ಬಂದ್ರು ಅಂತ್ಲೇ ಇಟ್ಕೊಳ್ಳಿ ಮುಕ್ತವಾಗಿ ಮಾತು-ನಗು? ಊಹೂಂ! ಇದಕ್ಕೂ ಬೀಳ್ತಿತ್ತು ಕಡಿವಾಣ. ''ರೀ ಸುಂದ್ರಮ್ಮ, ಸ್ವಲ್ಪ ಮೆತ್ತಗ್ ಮಾತಾಡ್ರೀ, ಗೆಸ್ಟು ಬಂದಿದಾರೇನೋ. ಆದ್ರೆ ಏನ್ಮಾಡೋದು ನಮ್ ಪುಟ್ಟ ಕಾಲೇಜಿಂದ ಬಂದವ್ನೇ ಒಂದೇ ಸಮನೆ ತಲೆನೋವು ಅಂತ ನರಳ್ತಿದ್ದಾನೆ. ಗದ್ದಲ ಆದರೆ ಮುಂಡೇದರ ಸಂಕಟ ನೋಡೋಕ್ಕಾಗೋಲ್ಲ. ತಪ್ಪು ತಿಳ್ಕೋಬೇಡಿಪ್ಪ. ಹಾಗೇನೇ ಲೈಟು ಸ್ವಲ್ಪ ಬೇಗ ಆರಿಸ್ಬಿಡಿ. ಆ ಮೇಲಿರೋ ಕಿಂಡಿಯಿಂದ ಬೆಳಕು ತೂರಿ ಬಂದು ನಾವ್ ಮಲಗೋ ಕೋಣೆಗೆ ನುಗ್ಗಿ ಮುಖಕ್ಕೇ ರಾಚುತ್ತೆ ನಿದ್ದೇನೇ ಬರಲ್ಲ... ಪಾಪ! ನಿಮ್ಗ ತೊಂದರೆ ಆಯ್ತೇನೋ, ಗೆಸ್ಟು ಯಾವಾಗ್ಲಾದ್ರೊಮ್ಮೆ ಬರೋವ್ರು.... ಎಲ್ರೂ ಸಂತೋಷವಾಗಿ ಇರ್ತೀರಾ, ಹಾಗ್ ಮಾಡ್ಬೇಡಿ ಹೀಗ್ ಮಾಡ್ಬೇಡಿ ಅಂತ ಹೇಳೋಕ್ ಬಾಯೇ ಬರೋಲ್ಲ. ಆದ್ರೇನ್ ಮಾಡೋದು ಅನಿವಾರ್ಯ. ದಯವಿಟ್ಟು ಏನೂ ತಿಳ್ಕೋಬೇಡಿಪ್ಪಾ'' ಹೇಗಿದೆ ವರಸೆ? ಜೊತೆಗೆ ಸೆಕೆಂಡ್ ಷೋ ಪಿಕ್ಚರ್‌ಗೆ ಕರ್ಕೊಂಡು ಹೋಗುವಂತೆ ಬಿಟ್ಟಿ ಸಲಹೆ ಬೇರೆ. ದುಡ್ಡೇನು ಅವರದ್ದಲ್ವಲ್ಲ.

ಸಾಲ ಇಸ್ಕೊಳ್ಳೊಕ್ಕಂತೂ ಮಿತಿನೇ ಇರ್ಲಿಲ್ಲ. ''ರೀ ಸುಂದ್ರಮ್ಮ, ಸ್ವಲ್ಪ ಕಾಫಿ ಪುಡಿ ಬೇಕಿತ್ತಲ್ಲ ನಮ್ಮನೇಲಿ ಖರ್ಚಾಗ್ಬಿಟ್ಟಿದೆ. ಬೆಳಗ್ಗೆ ಬೆಳಗ್ಗೆ ಕಾಫಿ ಇಲ್ದಿದ್ರೆ ಆಗೋದೇ ಇಲ್ಲ. ನಿಮ್ಗೇ ಗೊತ್ತಲ್ಲ ಇಷ್ಟು ಬೇಗ ಯಾವ ಅಂಗಡಿನೂ ತೆರ್ದಿರೋಲ್ಲ ಅಂತ.'' ಅರೆರೆ! ಆಗ್ಲೇ ಡಬ್ಬಿನ ತಂದುಬಿಟ್ರಾ? (ಇನ್ನೇನ್ ಮಾಡ್ಲಿ ಬೇಗ ಸಾಗ ಹಾಕ್ಬೇಕಿತ್ತು) ಏನ್ ದೊಡ್ ಮನಸಪ್ಪ ನಿಮ್ದು. ಅಯ್ಯೋ... ನಂಗೇನ್ ಜಾಸ್ತಿಬೇಡ ಕಣ್ರೀ ಇದ್ರಲ್ಲಿ ಕೊಟ್ಟರೆ ಸಾಕು... ''ಮುಂದೆ ಹಿಡಿದ ಕಾಲ್ ಕೆಜಿ ಲೋಟದ ಸೈಜ್ ನೋಡೇ ಧಸಕ್ಕಂದ್ಬಿಡ್ತು ಮುಷ್ಟಿ ಗಾತ್ರದ ಎದೆ. ಹೀಗೇನೇ ಕಾಫಿಪುಡಿ, ಸಕ್ಕರೆ, ತೊಗರಿಬೇಳೆ, ಹಾಲು... ಇಸ್ಕೊಳ್ಳೋದು ಅವಿರತವಾಗಿತ್ತು.

''ತಂದ್ ಕೊಡ್ಲೆ ಕೊಟ್ ಬಿಡ್ತೀನಪ್ಪ, ಹಾಗೆಲ್ಲ ಇನ್ನೊಬ್ಬರ ಋಣದಲ್ಲಿ ನಾನ್ಯಾಕೆ ಬೀಳ್ಲಿ..'' ಆಹಾ! ಮಾತಂದ್ರೆ ಇದು ಕೇಳೋಕ್ಕಷ್ಟೇ ಚೆನ್ನ. ಇಸ್ಕೊಂಡಿದ್ದು ವಾಪಸ್ ಬಂದ್ರೆ ನಮ್ ಪುಣ್ಯ. ಹಾಗಾಂತ ವಾಪಸ್ಸು ಕೊಡ್ತಾನೇ ಇರ್ಲಿಲ್ಲ ಅಂತಲ್ಲ. ಹತ್ತು ಸಲ ಇಸ್ಕೊಂಡ್ರೆ ಒಂದ್ ಸಲ ಹಿಂದಿರುಗಿಸುವ ಧಾರಾಳತನ, ಆದ್ರೆ ವಾಪಸ್ ಬಂದ ಲೋಟದ ಸೈಜ್‌ಗೆ ಮಾತ್ರವೇ ಪುಟ್ಟ ಹೃದಯ ಕ್ಷಣಕಾಲ ಗುಂಡಿಗೆ ನಿಲ್ಲಿಸ್ತಿತ್ತು. ಹೆದರಿಕೊಂಡಿದ್ದಕ್ಕೆ ಸಮಾಧಾನ ಮಾಡೋಕೆ ಭೂತ ಕನ್ನಡಿ ಸಹಾಯಕ್ ಬರ್ತಿತ್ತು ಅಂತಿಟ್ಕೊಳ್ಳಿ.

ಒಂದ್ಸಲ ''ಸುಂದ್ರಮ್ಮ, ಅರ್ಜೆಂಟಾಗಿ ಊರಿಗೆ ಹೋಗ್ಬೇಕು. ಆದ್ರೆ ನಮ್ ಪುಟ್ಟಂದೇ ಯೋಚನೆ ಆಗ್ಬಿಟ್ಟಿದೆ. ಹೋಟೆಲಿಂದು ತಿಂದ್ರೆ ಅವನಿಗೆ ಮೈಗಾಗೋಲ್ಲ. ಒಬ್ನೇ ಮಗ ಅಂತಾ ಮುಚ್ಚಟ್ಟೆಯಾಗಿ ಬೆಳ್ಸಿದ್ದೀನಿ. ಕಾಲೇಜಿಗೂ ರಜೆಯಿಲ್ಲ...'' ಶುರುವಾಯ್ತು ಪೇಚಾಟ ಅಯ್ಯೋ ಪಾಪ! ಕಷ್ಟದಲ್ಲಿ ಒಬ್ಬರಿಗೊಬ್ಬರು ಆಗ್ಬೇಕು ಅಂದ್ಕೊಂಡು ''ಯಾಕ್ ಬೇಜಾರು ಮಾಡ್ಕೊತೀರ, ನಾವೆಲ್ಲಾ ಇಲ್ವೆ. ಬಿಟ್ಹೋಗಿ. ಅವಂಗೆ ಏನ್ ಬೇಕೋ ಅದೆಲ್ಲ ಮಾಡ್ ಕೊಡ್ತೀನಿ'' ವಾಕ್ಯ ಮುಗಿಯೋಕ್ ಮುಂಚೇನೇ ''ನಂಗೊತ್ತಿತ್ತು ನಿಮ್ದು ವಿಶಾಲವಾದ ಮನಸ್ಸು ಅಂತ. ಆದ್ರೆ ಈಗ ಅನುಭವಕ್ಕೆ ಬಂತು. ತುಂಬಾ ಥ್ಯಾಂಕ್ಸ್ ಕಣ್ರೀ!'' ಪರಂಗಿಯವರು ಬಿಟ್ಟು ಹೋದ ಭಾಷೇನ ಧಾರಾಳವಾಗಿ ಪ್ರಯೋಗಿಸಿದ್ರು. ಎರಡೇ ದಿನಕ್ಕೆ ಬಂದುಬಿಡ್ತೇನೆ

ಎಂದು ಹೋದವರು ನಾಲ್ಕನೇ ದಿನಕ್ಕೆ ದಯಮಾಡ್ಸಿದ್ದು. ಆದರೆ ಆ ನಾಲ್ಕು ದಿನ ನಾಲ್ಕು ಯುಗದಂತೆ ಅನ್ನಿಸಿದ್ದು ಮಾತ್ರ ನಮ್ಮಪ್ಪರಾಣೆ ನಿಜ. 'ಪುಟ್ಟ' ಅನ್ನೋ ಹೆಗ್ಗಣದ ಜವಾಬ್ದಾರಿ ಹೊತ್ಕೊಂಡು ಹೈರಾಣಾಗಿದ್ದೆ. ಮೈ ಬೆಳೆದರೂ ಬುದ್ದೀಲಿ ಮಾತ್ರ ಪುಟ್ಟಾನೇ. ನಾಚಿಗ್ಗೇಡಿ. ಬಾಯ್ಬಿಟ್ಟು ಕೇಳಿ ಮಾಡಿಸ್ಕೊಂಡು ತಿಂತಿತ್ತು ಮುಂಡೇದು... ಅದೂ ಕೆಜಿ ಗಟ್ಲೆ!

ಹೀಗೇ ಒಂದಲ್ಲ ಒಂದ್ ರೀತೀಲಿ ಅವರ ಮರ್ಜಿ ಕಾಯ್ತಾ ಅವರು ಹೇಳಿದ ಹಾಗೆ ಕೇಳ್ತಾ ಅದೇ ವೇದವಾಕ್ಯ ಎಂಬಂತೆ ಚಾಚೂ ತಪ್ಪದೇ ಶಿರಸಾ ಪಾಲಿಸ್ತಿದ್ದೆ. ಮಕ್ಕಳಿಗೆ ಸ್ಕೂಲು ಹತ್ತಿರ ಅನ್ನೋ ಒಂದೇ ಒಂದು ಕಾರಣಕ್ಕೆ ಅಷ್ಟೆಲ್ಲಾ ಏಗ್ ಬೇಕಾಗಿ ಬಂದದ್ದು. ಹಾಗ್ ಏಗಿದ್ರಿಂದಾನೇ 'ನಮ್ಮದೂ ಅಂತ ಒಂದ್ ಮನೆ ಆದ್ರೆ ಯಾರ ಹಂಗಿಲ್ಲದೇ ಸುಖವಾಗಿರಬಹುದು' ಅಂಬೋ ವಿಚಾರ ತಲೇಲಿ ಹೊಕ್ಕು ಗುಂಗಿ ಹುಳದಂತೆ ಕೆಲಸ ಪ್ರಾರಂಭಿಸಿತು. ಆವತ್ತು ಇವರ ಸವಾರಿ ಚಿತ್ತೈಸಿದ ಕೂಡಲೇ ಶುರು ಹಚ್ಕೊಂಡೆ ವರಾತಾನ. ''ಲೇ, ನಾನೇನ್ ಸುಮ್ನೆ ಇದ್ದೆ ಅಂದ್ಕೊಂಡ್ಯ? ನಿಂಗೇ ಗೊತ್ತಲ್ವೇನೆ ನಾ ಒಂದೆರಡ್ ಕಡೆ ಪ್ರಯತ್ನ ಮಾಡಿ ದುಡ್ಡು ಕಳಕೊಂಡಿದ್ದು. ನನ್ನ ಜಾತಕ ಜಾಲಾಡಿಸ್ದಾಗ ಗೊತ್ತಾದದ್ದು ನನಗೆ ಭೂಮಿ ಋಣ ಇಲ್ಲಾ ಅಂತ. ಅದಕ್ಕೇ ಅಲ್ವೇನೇ ದುಡ್ಡೂ ಹೋಯ್ತು ಭೂಮಿನೂ ಇಲ್ಲ ಅಂತಾದದ್ದು. ಇನ್ನು ನನ್ನೇನೂ ಕೇಳ್ಬೇಡ..'' ತನ್ನ ಕೆಲಸ ಮುಗೀತು ಅಂತ ತಣ್ಣಗೆ ಇದ್ಬಿಟ್ರು. ನಾನಾದ್ರೋ ಮನುಷ್ಯ ಪ್ರಯತ್ನದಲ್ಲಿ ನಂಬಿಕೆ ಇಟ್ಟವಳು. ಆಗೊಲ್ಲ ಅನ್ನೋದನ್ನ ಮಾಡಿ ತೋರಿಸೋ ಛಲದವಳು. 'ಚಂಡಿ' ಗೊತ್ತಲ್ಲ, ಹಠದಲ್ಲಿ ನಂಗೂ ಅವಳಿಗೂ ತುಂಬಾ ಕ್ಲೋಸ್ ರಿಲೇಶನ್ನು. ಸರಿ, ಜಾಗದ ಅನ್ವೇಷಣೆ ಭರದಿಂದ ಸಾಗಿತು. ಸ್ಕೂಲಿಗೆ ಬಸ್ ಸ್ಟಾಪಿಗೆ... ಹೀಗೇ ಎಲ್ಲಾ ವಿಧದಿಂದ್ಲೂ ಅನುಕೂಲವಾಗಿರುವಂತೆ ಹುಡುಕುತ್ತಿದ್ದೆ. ಕಡೆಗೂ ಜಾಗ ಸಿಕ್ಕೇಬಿಡ್ತು. ಡೆವಲಪ್ ಆಗದ ಜಾಗ, ತಗ್ಗು ಪ್ರದೇಶವಾದ್ರೂ ನಮ್ ಬಜೆಟ್ಟಿಗೆ ಹೊಂದಿದ್ರಿಂದ ಖರೀದಿಸಿದ್ದೂ ಆಯ್ತು, ಹೇಗೋ ತಕ್ಕಮಟ್ಟಿಗೆ ಮನೆ ಕಟ್ಟಿಸಿದ್ದೂ ಆಯ್ತು. ನಮ್ ವಾನರ್ತಿಯ ಮುಖಕ್ ರಾಚೋ ಹಾಗೆ ಸಿಲ್ಕ್ ಸೀರೆ ಉಟ್ಕೊಂಡು ಗೃಹಪ್ರವೇಶ ಮಾಡಿದ್ದೂ ಆಯ್ತು. ಸ್ವಲ್ಪಕಾಲ ಯಾರ ಹಂಗೂ ಇಲ್ಲದೇ ಹೊಸ ಸ್ವಂತ ಮನೇಲಿ ನಿರಾಳವಾಗಿದ್ದೆ. ಮಳೆಗಾಲ ಆರಂಭವಾಯ್ತು ನೋಡಿ, ಇಲ್ಲಿಂದಲೇ ನಮ್ಮ ಗೋಳಿನ ಪರ್ವದ ಎರಡನೇ ಇನ್ನಿಂಗ್ಸ್‌ನ ಆರಂಭ. ಮನೆ ಕಟ್ಟೋವಾಗ ಮಳೆಗಾಲದ ಅಬ್ಬರ ಇರದೇ ಅನಾವೃಷ್ಟಿ ಆದ ಕಾರಣ ಈಗ ಅನುಭವಿಸುತ್ತಿರೋ ಕಷ್ಟದ ಕಲ್ಪನೆ ಕೂಡ ಇರ್ಲಿಲ್ಲ. ಅಂಕುಡೊಂಕಾದ ಕಚ್ಚಾರಸ್ತೆಯೇ ಸಂಚಾರ ಮಾರ್ಗವಾಗಿತ್ತು. ಗಟಾರ ಅನ್ನೋದು ದುರ್ಬೀನು ಹಾಕ್ಕೊಂಡು ಹುಡುಕೋ ಪರಿಸ್ಥಿತಿ. ಮುಳ್ಳು ಕಂಟಿ ಧಂಡಿಯಾಗಿದ್ವು. ನಾಲ್ಕು ಕಾಲು, ಆರುಕಾಲು, ಕಾಲೇ ಇಲ್ಲದ ಪ್ರಾಣಿ – ಕೀಟಗಳಿಗೆಲ್ಲಾ ನಮ್ ಮನೆ ಅಂದ್ರೆ ಅದೇನ್ ಪ್ರೀತಿನೋ ಆವಾಗಾವಾಗ ಎಂಟ್ರಿ ಕೊಟ್ಟು ನಮ್ಮನ್ನೆಲ್ಲಾ ಹಾರಿ ಬೀಳ್ಸಿ ನಮ್ ಗುಂಡಿಗೆನ್ನೂ ಯದ್ವಾತದ್ವಾ ಹೊಡ್ಕೊಳೋ ಹಾಗ್ ಮಾಡ್ತಿದ್ದು.

ಇರಲಿ ಬಿಡಿ. ಇವೆಲ್ಲಾ ಏನೂ ಅಲ್ಲ ಇನ್ಮುಂದೆ ಹೇಳೋಕ್ ಹೊರಟಿರೋ ಕಷ್ಟದ ಮುಂದೆ. ಈಗ ವಿಷಯಕ್ ಬಂದೆ ನೋಡಿ. ಸ್ಕೂಲು, ಕಾಲೇಜು, ಆಫೀಸು, ಮಾರ್ಕೆಟ್ಟು ಅಂತ

ಓಡಾಡೋಕೆ ಅದೇ ಕಪ್ಪು ಮಣ್ಣಿನ ಬಳುಕು ಕಚ್ಚಾ ರಸ್ತೆಯೇ ಗತಿ. ಸಣ್ಣ ಮಳೆಗೂ ರಸ್ತೆಯೆಲ್ಲಾ ರಾಡಿಮಯ ಪಿಚಿಪಿಚಿ. ಒಂದ್ ಸಲ ಹೊರಗೆ ಹೋಗ್ಬಂದ್ರೆ ಚಪ್ಪಲ್ಲಿಗೆ ನಾಲ್ಕಿಂಚು ಮಣ್ಣು ಗ್ಯಾರಂಟಿ. ಹವಾಯಿ ಚಪ್ಪಲ್ಲೇನಾದ್ರೂ ಹಾಕ್ಕೊಂಡು ಹೋದ್ರೆ ಕಿತ್ತೇ ಬಂದಿರೋದು. ಇನ್ನು ದೊಡ್ಡ ಮಳೆಯಾದ್ರೆ ಎಲ್ಲಾ ಕಡೆಯಿಂದ ನೀರು ಹರಿದು ಬಂದು ತಗ್ಗು ಪ್ರದೇಶದಲ್ಲಿರೋ ನಮ್ಮ ಮನೆ ದ್ವೀಪವಾಗಿ ಮಾರ್ಪಾಡ್ತಿತ್ತು. ಜಿಗಿ ಮಣ್ಣಲ್ಲಿ ನೀರು ವಾರಗಟ್ಟಲೆ ಇಂಗುತ್ತಿರಲಿಲ್ಲ. ಆಗೆಲ್ಲಾ ಮೇಲೆ ತಿಳಿಸಿದಂತೆ ಸರ್ಕಸ್ ಮಾಡ್ಕೊಂಡು ಹೋಗುವ ದುರ್ಗತಿ. ಅಷ್ಟೆಲ್ಲಾ ಪಾಡು ಪಟ್ಕೊಂಡು ಮನೆ ಸೇರಿ ಕೆಲ್ಸ ಮುಗ್ಸಿ ಮೂರ್ಖರ ಪೆಟ್ಟಿಗೆ ನೋಡೋಕ್ ಕೂತರೆ ವಾಲ್ಯೂಮು ಎಷ್ಟೇ ದೊಡ್ಡದು ಮಾಡಿದ್ರೂ ಸರಿಯಾಗಿ ಕೇಳಿಸ್ತಿರಲಿಲ್ಲ. ಅದ್ಯಾಕೆ ಅಂತಿದ್ದೀರಾ? ನಿಂತ ಮಳೆ ನೀರ್‌ನಲ್ಲಿ ಆಪಾಟಿ ಕಪ್ಪೆಗಳು ಅದೆಲ್ಲಿಂದ ಬಂದು ಬಿಡಾರ ಹೂಡ್ತಿದ್ವೋ, ಕತ್ತಲಾಯ್ತು ಅಂದ್ರೆ ನೂರಾರು ಕಪ್ಪೆಗಳ ಜುಗಲ್ಬಂದಿ ಒಟ್ಟೊಟ್ಟಿಗೇ ಶುರು! ಧಾರಾವಾಹಿಗಳ ಡೈಲಾಗೇ ಕೇಳಿಸದಂತಾಗಿತ್ತು. ಇಡೀ ರಾತ್ರಿ ಅವುಗಳ ಎದ್ದೋಡಿ ರಾಗದ ಕಛೇರಿಗೆ ಕಣ್ತುಂಬಾ ನಿದ್ದೆ ಕನಸಾಗಿತ್ತು. ಹೋಗ್ಲಿ, ಆ ರಾಡಿ ನೀರಲ್ಲಾದರೂ ಸುಖವಾಗಿ ಇರ್ತಿದ್ವಾ... ಅದೂ ಇಲ್ಲ... ನಮ್ ಕಂಪೌಂಡ್ನಲ್ಲಿ ಸಣ್ಣ ಸಣ್ಣ ಕಪ್ಪೆಮರಿಗಳ ಹಿಂಡು ಸೇರ್ಕೊಂಡು ಮನೆ ಒಳಗೂ ಜಿಗಿಜಿಗಿದು ಬರೋದಷ್ಟೇ ಅಲ್ಲದೇ ಕಾಲ್ ಕಾಲಿಗೆ ಸಿಗ್ತಿದ್ವು. ಆಗೆಲ್ಲಾ ಓಡ್ಸಿ ಓಡ್ಸಿ ಸಾಕಾಗಿ ಪೊರಕೆ ಹಿಡಿದು ಓಬವ್ವಳ ಅಪರಾವತಾರವಾಗ್ತಿದ್ದೆ. ಅಯ್ಯೋ, ಹಾಗೆಲ್ಲಾ ಮುಖ ಕಿವುಚ ಬೇಡೀಪ್ಪ, ಅಪರಾಧ ಪ್ರಜ್ಞೆ ಕಾಡುತ್ತೆ. ಈ ಪರಿಸ್ಥಿತೀಲಿ ನೀವಿದ್ದಿದ್ರೆ ಗೊತ್ತಾಗಿರೋದು ನಮ್ ಕಷ್ಟ ಏನೂ ಅಂತ.

ಏನೇ ಸಹಿಸ್ಕೋಬಹುದು. ಆದ್ರೆ ಈ ಮಳೆಗಾಲದ ತೊಂದರೆ ಸಹಿಸ್ಕೊಳ್ಳೋದು ಕಷ್ಟ ಕಣ್ರೀ. ನಡೆಯೋದೇ ಕಷ್ಟ ಇನ್ನು ಸೈಕಲ್ಲು-ಲೂನಾದ್ ಗತಿ? ನೀರು ನಿಂತಿರೋ ಹಾದೀಲಿ ಹೊಂಡ ಎಲ್ಲಿದೆ ಅಂತ್ಲೇ ತಿಳೀತಿರ್ಲಿಲ್ಲ, ಹೆಜ್ಜೆ ಮೇಲ್ ಹೆಜ್ಜೆ ಇಟ್ಟು ನಡೀಬೇಕಿತ್ತು. ಗಡಿಬಿಡಿ ಮಾಡಿದ್ವೋ...

''ಹರಹರಾ ಶ್ರೀ ಚನ್ನ ಸೋಮೇಶ್ವರಾ!'' ರಸ್ತೆ ರಿಪೇರಿ ಬಗ್ಗೆ ನಮ್ ಕಾಲೋನಿಯ ಹಿತರಕ್ಷಕ ಸಂಘದವರನ್ನ ಕೇಳಿದ್ರೆ ''ಚೇರ್ಮನ್ ದುಡ್ಡು ತೊಗೊಂಡು ನಾಪತ್ತೆಯಾಗಿ ಚೋರ್ಮನ್ ಆಗಿರೋದ್ರಿಂದ ಎಲ್ಲೆಲ್ಲಿ ದುಡ್ಡು ಕಟ್ಬೇಕಿತ್ತೋ ಅಲ್ಲೆಲ್ಲಾ ಕಟ್ಟಿಲ್ವಂತೆ. ಈಗ ನಾವೇನ್ ಮಾಡೋಕ್ ಸಾಧ್ಯ?'' ಸಿದ್ದ ಉತ್ತರ ಸಿಗುತ್ತಿತ್ತು. ನಾವೇ ಒಂದಷ್ಟು ಜನ ಸೇರಿ ಕಾರ್ಪೊರೇಷನ್‌ಗೆ ಹೋಗಿ ಅಲವತ್ತುಕೊಂಡರೆ 'ತಗ್ಗುಪ್ರದೇಶದಲ್ಲೇಕೆ ಮನೆ ಕಟ್ಸಿದೀರಿ... ಏನೂ ಮಾಡೋಕ್ ಸಾಧ್ಯ ಇಲ್ಲಾ' ಉಡಾಫೆಯ ಉತ್ತರವೇ ಗತಿ ಹಂಗಾದ್ರೆ ಅಂತಹ ಜಾಗದಲ್ಲಿ ಸೈಟುಗಳನ್ನು ಮಾಡಿ ಮಾರೋಕೆ ಯಾಕ್ ಪರ್ಮಿಷನ್ನು ಕೊಡ್ಬೇಕಿತ್ತು? 'ಬಡವನ ಕೋಪ ದವಡೆಗೆ ಮೂಲ' ಗಾದೆಗೆ ಅನ್ವರ್ಥವಾಗಿತ್ತು ನಮ್ ಸ್ಥಿತಿ. ನಮ್ ಯಜಮಾನ್ರ ಹತ್ರ ಗೋಗರೆದ್ರೆ ''ನೀನ್ ತಾನೇ ಮುಂದ್ವರೆದು ಜಾಗ ನೋಡಿದ್ದು. ಈಗ ಅನುಭವಿಸು ನನ್ನೇನೂ ಕೇಳ್ಬೇಡ, ಸಧ್ಯ ಸಾಲ ತೀರಸಿದ್ರೆ ಸಾಕಾಗಿದೆ'' ತಾರಮ್ಮಯ್ಯ ಆಡ್ಸಿ ಬಿಟ್ರು. ಹಾಗಂತ ಚಂಡೀ ವಂಶಜಳಾದ ನಾನ್ ಬಿಡೋಕಾಗುತ್ಯೇ? ಅದೇನೋ ಸರಿ, ಆದರೆ 'ಸಂಕಟ ಬಂದಾಗ

ವೆಂಕಟರಮಣ' ಅನ್ನೋ ಹಾಗೆ ನಾವ್ ತೊಂದರೇಲಿ ಇದ್ದಾಗ 'ದೇವ್ರೇ ನೀನೇ ಗತಿ, ಕಾಪಾಡಪ್ಪ' ಅಂತ ಬೇಡ್ಕೊಂಡ್ರೆ ಅವನ್ಯಾಕೆ ಸಹಾಯಕ್ ಬರ್ತಾನೆ. ಕಠಿಣ ತಪಸ್ಸು, ವ್ರತ ಕೈಗೊಳ್ಳದೇ ಕರೆದ್ರೆ ಬರೋಕೆ ಅವನೇನು ನೆಂಟನೇ... ಆದರೆ ಕಠಿಣ ತಪ್ಪಸ್ಸು..? ಈ ಹೈಟೆಕ್ ಯುಗಕ್ಕೆ ಸರಿಹೊಂದದು. ಅಷ್ಟಕ್ಕೂ ಕಾಡಿಗೆ ಹೋಗಿ ತಪಸ್ಸು ಮಾಡೋಣ ಅಂದ್ರೆ ಎಲ್ಲಿದೆ ಕಾಡು, ಬರೀ ಕಾಂಕ್ರೀಟು. ಅಂದ್ ಮೇಲೆ ಮನೇಲಿ ತಣ್ಣಗೆ ವ್ರತ ಮಾಡೋದೇ ಸರಿ. ವ್ರತದ ಮೂಲಕ ದೇವ್ರನ್ನ ಒಲಿಸಿ ರಸ್ತೆ ಸಮಸ್ಯೆ ಬಗೆಹರಿಸ್ಕೊಳ್ಳೋ ಸ್ಕೆಚ್ ಹಾಕಿ ಕಾರ್ಯೋನ್ಮುಖಳಾದೆ.

ಒಂದು ಒಳ್ಳೇ ಮುಹೂರ್ತದಲ್ಲಿ ವ್ರತ ಪ್ರಾರಂಭಿಸಿಯೇ ಬಿಟ್ಟೆ. ದಿನಾ ನಸುಕಿನಲ್ಲಿ ಎದ್ದು ಪ್ರಾತರ್ವಿಧಿ ಮುಗಿಸಿ, ಹಳೇ ಕಾಲದ್ ಛತ್ರಿ ತೊಗೊಂಡು ಹೊರಗೆ ಹೋಗಿ ನಮ್ ಓಣಿ ಗಸ್ತು ತಿರುಗಿ ಒಂದಷ್ಟು ಹೂವು ಸಂಪಾದಿಸ್ತಿದ್ದೆ. ಅದ್ಹೇಗಪ್ಪಾ ಅಂತ ಪೆದ್‌ಪೆದ್ದಾಗಿ ಪಿಳಿಪಿಳಿ ಕಣ್ಣು ಬಿಟ್ಕೊಂಡು ಮುದ್ದಾಗಿ ಫೋಸ್ ಕೊಡ್ಬೇಡಿ. ಈ ವಿಷಯದಲ್ಲಿ ನೀವೂ ಒಂದಲ್ಲ ಒಂದ್ ರೀತೀಲಿ ಅನುಭವಸ್ಥರೇ (ಹೂ ಕಳ್ಳತನ ಮಾಡಿ ಅಥವಾ ಮಾಡಿಸ್ಕೊಂಡು). ಮನೇಗ್ ಬಂದು ತಲೆಸ್ನಾನ ಮಾಡಿ ಮಡಿಸೀರೆ ಉಟ್ಕೊಂಡು ಆ ದಯಾಮಯನನ್ನ ಓಲೈಸೋ ಸ್ತೋತ್ರಗಳನ್ನೆಲ್ಲಾ ಓದ್ಕೊಂಡು ಅರಿಶಿನ–ಕುಂಕುಮ–ಚಂದನ ಲೇಪಿಸಿ, ಬಿಟ್ಟಿ ಸಿಕ್ಕ ಹೂವಿನ ರಾಶೀಲಿ ಮುಳುಗಿಸಿ ದಿನಕ್ಕೊಂದು ನೈವೇದ್ಯಾನೂ ಇಡ್ತಿದ್ದೆ (ಬೇಡ್ವೆ ಮತ್ತೆ). ನನ್ನ ಈ ನಿತ್ಯದ ದಿನಚರಿ ಸಾಂಗವಾಗಿ ಸಾಗಿತ್ತು. ದಿನಾಲೂ ಬೆಳಬೆಳಗ್ಗೆ ಗಂಟೆಗಟ್ಟಲೆ ಪೂಜೆ ಶುರುವಿಟ್ಟುಕೊಂಡ್ರೆ ಮನೇ ಮಂದಿಗೆಲ್ಲಾ ಏನ್ ಗತಿ ಅಂತಿದ್ದೀರಾ? ಇದ್ಯಲ್ಲಾ ಹೊಟ್ಟೆ ಮೇಲೆ ತಣ್ಣೀರು ಪಟ್ಟಿ! ಅವ್ರೂ ಕಷ್ಟ ಪಡ್ಬೇಕಪ್ಪ.

ಎಂದಿನಂತೆ ಅಂದೂ ಕೂಡ ಬೇಗ ಎದ್ದು ಪೂಜೆ ಮುಗಿಸಿ ಇನ್ನೇನು ದೇವರಿಗೆ ಅಡ್ಡ ಬೀಳ್ಬೇಕು, ಹೊರಗೆ ಕ್ಷೀಣ ಧ್ವನಿಯಲ್ಲಿ ಯಾರೋ ನರಳುತ್ತಾ ಕರೆಯುತ್ತಿದ್ದಂತಹ ಸದ್ದು. ಧಾವಿಸಿದೆ – ಕೃಶ ಕಾಯದ ಪಂಚೆ ಎಲ್ಲಾ ಕೆಸರಾಗಿರೋ ಬಡಪಾಯಿ! ಕಾಲಲ್ಲಿ ಕಿತ್ತು ಹೋಗಿರೋ ಹವಾಯಿ ಚಪ್ಪಲಿ!! ಕಾಲೂ ಕೆಸರಾಗಿತ್ತು. ಮುಂದೆ ಸಾಗಹಾಕೋಣ ಅಂತ ಗದರಲು ಇನ್ನೇನ್ ಬಾಯಿ ತೆರೀಬೇಕು.... ಆತ ಅವಸರದಲ್ಲಿ ''ನಿನಗೇನ್ ಬೇಕೋ ಕೇಳಿಕೋ ತಾಯೀ'' ಅನ್ನಬೇಕೇ! ಥಟ್ಟನೆ ಮೈಯಲ್ಲಿ ಮಿಂಚಿನ ಸಂಚಾರ!! ಪರವಶಳಾಗಿ ಧೊಪ್ಪನೆ ಅಡ್ಡಬಿದ್ದೆ.

''ವಿಚಿತ್ರ ಬೇಡಿಕೆ ತಾಯಿ ನಿಂದು, ನನ್ನ ಈ ಅವತಾರದಲ್ಲೇ ಅದೂ ಅದೇ ರಸ್ತೇಲಿ ನಡೆದುಕೊಂಡು ಬಂದೆ, ದರ್ಶನ ಕೊಡು ಅಂತ ಯಾಕ್ ಬೇಡ್ಕೋತಿದ್ದೆ? ಈ ತರಹ ಯಾವ ಭಕ್ತನೂ ಕೇಳಿರಲಿಲ್ಲ...'' ಕ್ಷೀಣನಾಗಿ ಕೇಳಿದ ಆ ದಯಾಮಯಿ. ಆತನಿರೋ ಗೆಟಪ್‌ಗೆ ಆ ಧ್ವನಿ ಸರಿಯಾಗಿ ಹೊಂದಿತ್ತು. ನಗು ಬಂದರೂ ತಡ್ಕೊಂಡೆ. ಕಿಲಾಡಿ ದೇವರು! ಎಲ್ಲಾ ಗೊತ್ತಿದ್ರೂ ನನ್ ಬಾಯಲ್ಲೇ ಕೇಳೋ ಆಸೆ. ''ಹೇ ದೇವ! ನನ್ನ ವ್ರತಕ್ಕೆ ಮೆಚ್ಚಿ ಪ್ರತ್ಯಕ್ಷ ಆಗೋ ಸಮಯ ಬಂದಾಗ ಗಾಳೀಲಿ ತೇಲ್ಕೊಂಡು ಒಂದೇ ಸಲಕ್ಕೆ ಮುಂದೆ ಬಂದು ಪ್ರತ್ಯಕ್ಷ ಆಗ್ಬಿಟ್ರೆ ನಾವ್ ಅನುಭವಿಸಿರೋ ಕಷ್ಟ ನಿನಗೆ ಹೇಗೆ ಗೊತ್ತಾಗಿರೋದು? ಅದಕ್ಕೇ ಹಾಗ್

ಬೇಡ್ಕೊಂಡಿದ್ದು. ಈಗಲಾದರೂ ನನ್ನ ಕಷ್ಟ ಏನೂಂತ ತಿಳೀತಲ್ಲ, ಕ್ಷಮಿಸು ದೇವ! ಒಂದ್ಸಲ ನಡ್ಕೊಂಡು ಬಂದಿದಕ್ಕೇ ಈ ಪಾಟಿ ಏದುಸಿರು ಬಿಡ್ತಿದ್ಯಲ್ಲಾ, ದಿನಕ್ಕೆ ಹಲವಾರು ಬಾರಿ ಓಡಾಡೋ ನಮ್ ಗತಿ!? ಕರುಣೆ ತೋರ್ಸಿ ಆ ದಾರಿಗೊಂದು ಗತಿಕಾಣಿಸಿ ನಮ್ಮನ್ನು ಅನುಗ್ರಹಿಸು ತಂದೆ'' ಸೊಂಟ ಬಗ್ಗಿಸಿ ಕೈ ಮುಗಿದು ಕಣ್ಣಲೆಲ್ಲಾ ನೀರು ತುಂಬ್ಕೊಂಡು ದೀನಳಾಗಿ ನಿಂತೆ (ಹಳೇ ಪೌರಾಣಿಕ ನಾಟಕಗಳಲ್ಲಿ ಓವರ್ ಆಕ್ಟಿಂಗ್ ಮಾಡೋ ಹಾಗೆ) ಅದನ್ನೆಲ್ಲಾ ಗಮನಿಸುವ ಸ್ಥಿತೀಲಿ ಇರಲಿಲ್ಲ ಭಗವಂತ. ಕಣ್ಣು ಕೋರೈಸುವ ತನ್ನ ಮೂಲ ರೂಪಧಾರಣೆ ಮಾಡಿ ನಿಟ್ಟುಸಿರು ಬಿಡ್ತಾ ''ಅಲ್ಲಾ ತಾಯಿ, ನೀನೇನೋ ಕಷ್ಟ ಆದಾಗ್ಗೆಲ್ಲಾ ನನ್ನ ಕರೀತಿದ್ದೆ'' (ನಾನು ಬರ್ತಿದ್ನೋ ಇಲ್ವೋ, ಆ ಮಾತು ಬೇರೆ) ಆದರೆ ನಾನು ಕಷ್ಟಪಟ್ಟುಕೊಂಡು ನಡೀತಿದ್ದಾಗ ಯಾರ ಮೊರೆ ಹೋಗಲಿ ಅನ್ನೋದೇ ಪಾಡಾಗಿತ್ತು. ಅದ್ರಲ್ಲೂ ಹವಾಯಿ ಚಪ್ಪಲ್ಲು ಹಾಕ್ಕೊಂಡು ಆ ಅಂಟು ಮಣ್ಣಿನ ರಸ್ತೇಲಿ ನಾನ್ ಪಟ್ಟ ಪಾಡು...! ಈ ದುರವಸ್ಥೆ ಯಾವ ಶತ್ರುವಿಗೂ ಬೇಡ ತಾಯಿ! ನೀನು ಕೇಳಿದ್ದಕ್ಕೆಲ್ಲಾ'' 'ತಥಾಸ್ತು'.

ದೇವಲೋಕಕ್ಕೇ ಹೋಗಿ ರೆಸ್ಟ್ ತಗೊಳ್ಳೋ ಗಡಿಬಿಡಿಯಲ್ಲಿ ನೈವೇದ್ಯದ ಕಡೆಗೆ ತಿರುಗಿ ಸಹ ನೋಡದೆ ಪುರುಸೊತ್ತಿಲ್ಲದ ಹಾಗೆ ಮಾಯ ಆಗ್ಬಿಡೋದೇ ಭಗವಂತ! ಗೊಂದಲದಲ್ಲಿ ಹೊರಗೆ ಧಾವಿಸಿದೆ. ದಿಲ್ಲಿಯ ರಾಷ್ಟ್ರಪತಿ ಭವನದ ಮುಂದಿರುವ ರಸ್ತೆಯಂತೆ ನಮ್ ರಾಡಿ ರೋಡ್ ಬದಲಾಗಿ ನೀಟಾಗಿ ಸಪಾಟಾಗಿ ಕಂಗೊಳಿಸುತ್ತಿತ್ತು! ನಮ್ ಬವಣೆ ನಿವಾರಣೆಯಾಗಿದ್ದಕ್ಕೆ ಸಂತಸ ತಡೀಲಾರ್ದೆ ಜಿಗಿದು ಬಿಟ್ಟೆ.. 'ಧೊಪ್ಪ್'!

ಅಯ್ಯೋ...! ಅಂಡು ನೋಯ್ತಿದ್ಯಲ್ಲಪ್ಪ ಕಣ್ಬಿಟ್ಟು ನಿಧಾನವಾಗಿ ಗ್ರಹಿಸಿದಾಗ ತಿಳಿಯಿತು ನಾನು ಮಂಚದಿಂದ ಕೆಳಗೆ ಬಿದ್ದಿರೋದು ಸೊಂಟ ವಿಪರೀತ ನೋಯ್ತಿತ್ತು. ಹಾಗಾದ್ರೆ ವ್ರತ... ದೇವರು ಪ್ರತ್ಯಕ್ಷ... ಅದೆಲ್ಲಾ ಕನಸೇ? ಕಣ್ಣುಜ್ಜಿಕೊಳ್ತಾ ಪೆದ್ದುಪೆದ್ದಾಗಿ ಕಣ್ಣು ಪಿಳುಕಿಸಿದೆ. ಮಂಚದ ಮೇಲೆ ಗುಡ್ಡದಂತೆ ಬಿದ್ದು ಕೊಂಡಿದ್ದ ನಮ್ಮೆಜಮಾನ್ರು ಕಿಚಾಯಿಸಿದ್ರು. ''ಅಯ್ಯೋ ಸುಂದ್ರು, ಬಿದ್ಬಿಟ್ಯಲ್ಲೇ... ಸೊಂಟದ ಮೂಳೆಗಳೆಲ್ಲಾ ಅಲ್ಲಲ್ಲೇ ಇದ್ಯೇನೇ!? ಅದ್ಯಾಕ್ ಹಾಗ್ ನೆಗದ್ಯೇ....! ನಿನಗೇನ್ ಬಂತೆ ಧಾಡಿ... ಬರತಾ ಬರತಾ...'' ರಾಗ ಎಳೀತಾ ಉರಿಯೋ ಗಾಯದ ಮೇಲೆ ಉಪ್ಪು ಸುರಿಯೋ ಹಂಗೆ ವ್ಯಂಗ್ಯ ವಾಡಿದ್ರು. ಆದರೆ ಪತಿ ದೇವರ ಮೇಲೆ ಈ ಸಲ ಸಿಟ್ಟೇ ಬರ್ಲಿಲ್ಲ. ಯಾಕ್ಹೇಳಿ? ದೇವ್ರನ್ನ ಹೇಗ್ ಒಲಿಸಿಕೊಳ್ಳಬಹುದು. ಯಾವ ಗೆಟಪ್ನಲ್ಲಿ ಕರೆಸಿದ್ರೆ ಹೆಚ್ಚು ಫಲಕಾರಿ ಅನ್ನೋ ಚಿದಂಬರ ರಹಸ್ಯ ಬಯಲಾಯ್ತಲ್ಲ. ಇಂತಹ ಸುವರ್ಣಾವಕಾಶ ಬಿಡ್ತೀನಾ? ಸೊಂಟ ನೀವುತ್ತಾ ಲಗುಬಗೆಯಲ್ಲಿ ಎದ್ದೆ. ''ಪಂಚಾಂಗ ಎಲ್ಲಿದೇರೀ...?'' ನನ್ನ ಅವಸರ ನನಗೆ.

ಅರೆರೇ! ನೀವ್ಯಾಕ್ ಅವಸರ ಮಾಡ್ತಿದ್ದೀರಾ? ಓಹೋ! ಮೂಹೂರ್ತ ನೋಡೋಕ್ಕೇನು? ಸರಿ ಬಿಡಿ. ನಿಮ್ಮಗಳ ಕಷ್ಟಾನೂ ಪರಿಹರಿಸಿಕೊಳ್ಳಿ. ನನ್ ಮನೋಭಿಷ್ಟೆ ಈಡೇರಲಿ ಅಂತ ಹಾರೈಸಿ. ನಿಮ್ಗೂ ಕೂಡ ''ಆಲ್ ದಿ ಬೆಸ್ಟ್.''

– ದಂನಆ

- ನೀವು ನಿಮ್ಮ ಸಂಸದನನ್ನು ಆಯ್ಕೆ ಮಾಡಬಹುದು. ಆದರೆ ಅವನನ್ನು ಸಂಸತ್ತಿನ ಚರ್ಚೆಯಲ್ಲಿ ಭಾಗವಹಿಸುವಂತೆ ಮಾಡುವುದು ಸಾಧ್ಯವಿಲ್ಲ.
- ನನ್ನ ಬದುಕಿನ ಮಾರ್ಗ ತುಂಬಾ ಸುಲಭ. ಬೆಳಿಗ್ಗೆ ಏಳುತ್ತೇನೆ. ರಾತ್ರಿ ಮಲಗುತ್ತೇನೆ. ಮಧ್ಯದ ಅವಧಿಯಲ್ಲಿ ನನ್ನಿಂದ ಆಗಬಹುದಾದ ಅತ್ಯುತ್ತಮ ಕೆಲಸವನ್ನು ಮಾಡುತ್ತೇನೆ.
- ನಿನ್ನೆ ನಮಗೆ ಮರಳಿ ದಕ್ಕದು. ಆದರೆ ನಾಳೆ ನಮ್ಮದು – ಗೆಲ್ಲಲು ಅಥವಾ ಸೋಲಲು.
- ನಿಂಬೆ ಹಣ್ಣು ಸಿಕ್ಕಿದರೆ ಪಾನಕ ಮಾಡಿ. ಬ್ಲಾಕ್ ನೈಟ್ ಸಿಕ್ಕಿದರೆ ಪಾರ್ಟಿ ಮಾಡಿ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನೀವು ಪೆದ್ದು ಪೆದ್ದಾಗಿ ನೋಡುತ್ತಾ ನಿಂತರೆ ಎಲ್ಲ ಹುಡುಗಿಯರೂ ದೀಪಿಕಾ ಪಡುಕೋಣೆ ಅಥವಾ ಐಶ್ವರ್ಯ ರೈನಂತೆ ಕಾಣತೊಡಗುತ್ತಾರೆ.
- ನಾನು ಹುಡುಗನಾಗಿದ್ದಾಗ ನನಗೆ ಮನೆಯಲ್ಲಿದ್ದ ಆಹಾರದ ಆಯ್ಕೆ ಎರಡೇ ಎರಡು – ತಿನ್ನು ಅಥವಾ ಬಿಡು.
- ನಾವೆಲ್ಲಾ ಇತರರಿಗೆ ಸಹಾಯ ಮಾಡಲು ಹುಟ್ಟಿದ್ದರೆ ಆ ಇತರರು ಏನು ಮಾಡುತ್ತಾರೆ?
- ಬದುಕು ಎಷ್ಟು ಕಷ್ಟಕರ ಎಂದರೆ ಅದು ಕೊನೆಗೆ ನಮ್ಮನ್ನು ಸಾಯಿಸೇ ಬಿಡುತ್ತದೆ.
- ನನ್ನ ಕೃತಕ ಗಿಡಗಳು ನಿನ್ನೆ ಒಣಗಿ ಹೋದವು. ಏಕೆಂದರೆ ಅವುಗಳಿಗೆ ನೀರು ಹಾಕುವ ನಟನೆ ನಾನು ಮಾಡಲಿಲ್ಲ.
- ನಾನು ಬೇರೆಯವನಾಗಿಲ್ಲ ಎಂಬುದೇ ನನ್ನ ಕೊರಗು.
- ನಾನು ಹೇಳಿರುವ ಅನೇಕ ಮಾತುಗಳು ನಾನು ಹೇಳಿಯೇ ಇಲ್ಲ.
- ನಾನು ಈ ಪ್ರಶಸ್ತಿಗೆ ಅರ್ಹನಲ್ಲ. ಹಾಗೆಯೇ ನನಗೆ ಡಯಾಬಿಟಿಸ್ ಇದೆ. ಅದಕ್ಕೂ ನಾನು ಅರ್ಹನಲ್ಲ.

ಬ್ರೇಕಿಂಗ್ ನ್ಯೂಸ್

# ಶುದ್ಧ ಅಸುದ್ದಿ

- ಎಚ್ಚೆನ್ಎ

## ಅವರಿಗೆ ಮಾತ್ರ

**ಚೀ**ನಾದ ಒಂದು ನಗರದಲ್ಲಿ ಮಹಿಳೆಯರಿಗಾಗಿಯೇ ಒಂದು ವಿಶೇಷ ಪಾರ್ಕಿಂಗ್ ಜಾಗ ವ್ಯವಸ್ಥೆ ಮಾಡಲಾಗಿದೆ. ಇದರ ವಿಶೇಷ ಏನಪ್ಪಾ ಅಂದ್ರ ಇದು ಪುರುಷರ ಕಾರ್‌ಗಳಿಗೆ ಸಿಗುವ ಜಾಗಕ್ಕಿಂತ ಹೆಚ್ಚು ತುಸುದೊಡ್ಡದು. ಕಾರಣ? ನೀವು ಅಂದುಕೊಂಡಂತೆ ದಢೂತಿ ಮಹಿಳೆಯರಿಗೆ ಅನುಕೂಲವಾಗಲಿ ಎಂದುದಲ್ಲ. ಮಾತನಾಡುತ್ತಲೋ ಅಥವಾ ಗಂಡನ ಮೇಲೆ ಮುನಿಸಿಕೊಂಡು ಬೇರೆ ಯಾವುದೋ ಯೋಚನೆಯಲ್ಲಿ ಮಗ್ನರಾಗಿದ್ದು ದಿಢೀರೆಂದು ಬಾಗಿಲು ತೆಗೆದಾಗ ಅದು ಪಕ್ಕದ ಕಾರಿಗೆ ಬಡಿಯದಿರಲಿ ಎಂಬ ಮುಂದಾಲೋಚನೆಯಿಂದ ಈ ವ್ಯವಸ್ಥೆ ಎಂದು ವಿವರಣೆ ನೀಡಲಾಗಿದೆ. ಅಂದರೆ ಗಂಡಸರು ಹೀಗೆ ಮಾಡರು ಎಂದು ಅರ್ಥವೆ?

★★★

## ಬಂಗಾರದ ಪುಡಾರಿ

**ರಾ**ಜಕಾರಣಿಗಳ ಬಳಿ ಬಂಗಾರ ಇರುವುದು ಸುದ್ದಿಯೇ ಅಲ್ಲ, ಇಲ್ಲದಿದ್ದರೇ ಸುದ್ದಿ. ಅಂತಹ ರಾಜಕಾರಣಿಗಳು ನಶಿಸಿರುವ ಸಂತತಿ ಬಿಡಿ. ಆದರೆ ಈ ರಾಜಕಾರಣಿಯ ಬಳಿ ಬಂಗಾರದ ಜತೆಗೆ ಬಂಗಾರದ ಅಂಗಿಯೂ ಇದೆ. ನಾಲ್ಕು ಕಿಲೊ ತೂಕದ, ಅಚ್ಚ ಬಂಗಾರದ ಈ ಅಂಗಿಯ ಬೆಲೆ ಬರೋಬ್ಬರಿ 1.30 ಕೋಟಿರೂಪಾಯಿ. 8ನೇ ತರಗತಿಗೇ ಸ್ಕೂಲು ಬಿಟ್ಟರೂ ಸಿದ್ಧ ಉಡುಪು ಉದ್ಯಮದಲ್ಲಿ ಉತ್ತಮದರ್ಜೆಯಲ್ಲಿ ಪಾಸ್ ಆಗಿರುವ ಮಹಾರಾಷ್ಟ್ರದ ಪಂಕಜ್ ಪರಾಕ್‌ಗೆ ಮೊದಲಿನಿಂದಲೂ ಚಿನ್ನದ ಮೇಲೆ ಮೋಹವಂತೆ. ಎಷ್ಟೆಂದರೆ ಈತನನ್ನ ಮದುವೆಯಲ್ಲಿ ತನ್ನ ಮೈಮೇಲೆ ಹೆಂಡತಿಗಿಂತಲೂ ಹೆಚ್ಚು ಚಿನ್ನ ಹೇರಿಕೊಂಡು ಅನೇಕ ಮಹಿಳೆಯರಲ್ಲಿ ಅಸೂಯೆ ಮೂಡಿಸಿದ್ದ ವ್ಯಕ್ತಿ. ಈತನ ಬಂಗಾರದ ಅಂಗಿ ಹೊಲೆಯಲು 20 ಅಕ್ಕಸಾಲಿಗರಿಗೆ 2 ತಿಂಗಳು ಬೇಕಾಯಿತು. ಈತ ಇನ್ನೂ ಮರಿರಾಜಕಾರಣಿ. ನಾಳೆ ಸಂಸತ್ ಸದಸ್ಯನಾದರೆ ಬಂಗಾರದ ಸೂಟ್ ಹೊಲೆಸಲೂಬಹುದು. ಅಂದಹಾಗೆ ಹಾಗೆಯೇ ಹೆಂಡತಿಗೊಂದು ಬಂಗಾರದ ಸೀರೆ ತಯಾರಾಗುತಿರ್ತಬಹುದೆ? ಕಾದು ನೋಡಿ.

★★★

## ಮೂಷಿಕ ಕತೆ

**ಇ**ದು ಬೊಮ್ಮನಹಳ್ಳಿ ಅಲ್ಲ, ಕಿಂದರಜೋಗಿಯೂ ಇಲ್ಲ. ಆದರೆ ಇಲಿಗಳ ಕಾಟ. ಆಶ್ಚರ್ಯದಲಿ ಇಲಿಗಳ ಮೂತ್ರದ ಕಾಟ. ಇದು ಫಿಲಿಪೈನ್ಸ್ ನಗರವೊಂದರ ಕತೆ. ಇಲಿ ಮೂತ್ರದಿಂದ ರೋಗವೊಂದು ಹರಡಿದ್ದು ಅದನ್ನು ನಿಯಂತ್ರಿಸಲು ಇಲಿಗಳ ಮೇಲೆ ಯುದ್ಧ ಘೋಷಿಸಿರುವ ಅಲ್ಲಿನ ಮೇಯರ್ ಇಲಿ

ತನ್ನಿ ಹಣ ಪಡೆಯಿರಿ ಎಂದು ಪ್ರಕಟಿಸಿದ್ದಾರೆ. ದೊಡ್ಡ ಇಲಿಗೆ ದೊಡ್ಡ ಬೆಲೆ ಸಣ್ಣದಕ್ಕೆ ಅದರ ಅರ್ಧ ಬೆಲೆ. ಎರಡು ಲಕ್ಷ ಜನರಿರುವ ಈ ನಗರದಲ್ಲಿ ಇಲಿ ಸಾಯಿಸಿ ದುಡ್ಡು ಪಡೆಯಲು ಜನ ಅಷ್ಟೇನು ಉತ್ಸುಕರಾಗಿಲ್ಲ ಆದರೆ ಈ ಯೋಜನೆಯ ಪ್ರಚಾರದಿಂದಾಗಿ ಜನರಲ್ಲಿ ರೋಗದ ಬಗ್ಗೆ ತಿಳುವಳಿಕೆ ಮೂಡುತ್ತದೆ ಎಂಬುದು ಅವರ ಭಾವನೆ ನಮ್ಮಲ್ಲಾಗಿದ್ದರೆ ಈ ವೇಳೆಗೆ ಕುಮಾರಸ್ವಾಮಿ ಅವರ ಬಳಿ ಈ ಹಗರಣದ ಬಗ್ಗೆ ದಾಖಲೆಗಳಿದ್ದು ಅದನ್ನು ಸೂಕ್ತ ಸಮಯದಲ್ಲಿ ಬಿಡುಗಡೆ ಮಾಡುವುದಾಗಿ ಅವರು ಪದೇ ಪದೇ ಹೇಳುತ್ತಿದ್ದರು.

★★★

## ನಕಲಿ ಅಸಲಿ

**ಭಾ**ರತದಲ್ಲಿ ಜನಗಳ ಆಯಸ್ಸು ಹೆಚ್ಚುತ್ತಿದೆ ನಿಜ. ಆದರೆ ಇಷ್ಟು ಹೆಚ್ಚುವುದೆಂದರೆ? ಮಧ್ಯಪ್ರದೇಶದಲ್ಲಿ 100, 200 ವರ್ಷ ಬದುಕಿರುವ ಜನರಿದ್ದಾರೆ. ಅಥವಾ ಹಾಗೆಂದು ಘೋಷಿಸಿಕೊಂಡಿದ್ದರೆ. ಅಂತಹವರು ಸೈಕಲ್ ಅಥವಾ ಹೊಲಿಗೆ ಯಂತ್ರ ಪಡೆದುಕೊಂಡಿದ್ದಾರೆ. ನಿಖರವಾಗಿ ಹೇಳುವುದಾದರೆ ಅಂತಹವರ ಹೆಸರಿನಲ್ಲಿ ಅನೇಕರು ಸರ್ಕಾರಿ ಯೋಜನೆಯನ್ನು ದುರುಪಯೋಗ ಮಾಡಿಕೊಂಡು ಕಾಸು ಮಾಡಿಕೊಂಡಿದ್ದಾರೆ. ಈ ಯೋಜನೆಯಡಿ 18-35 ವರ್ಷದ ಮಹಿಳೆಯರಿಗೆ ಸೈಕಲ್ ಮತ್ತು 35-60 ವರ್ಷದ ಮಹಿಳೆಯರಿಗೆ ಹೊಲಿಗೆ ಯಂತ್ರ ಸಿಗುತ್ತಿದ್ದು ಈಗಾಗಲೇ ಒಂದು ಲಕ್ಷ ಮಂದಿ ಮಹಿಳೆಯರು ಇದರ ಫಲಾನುಭವಿಗಳಾಗಿದ್ದಾರೆ. ಅನುಭವಿಗಳ ನೇಕರು ನಕಲಿ ಇದ್ದರೂ ಅವರಿಗೆ ದಕ್ಕಿರುವ ಫಲ ಮಾತ್ರ ಅಸಲಿ. ಏಕೆಂದರೆ ನಕಲಿ ಸೈಕಲ್, ನಕಲಿ ಹೊಲಿಗೆ ಯಂತ್ರ ಇರಲು ಸಾಧ್ಯವೆ?

★★★

## ವಿಐಪಿಗಳ ಅದೃಷ್ಟ

**ಮೊ**ನ್ನೆ ಅಂದರೆ ಇತ್ತೀಚೆಗೆ ನಮ್ಮ ದೀದಿ ಅಂದರೆ ಮಮತಾ ಬ್ಯಾನರ್ಜಿ ಸಿಂಗಪುರಕ್ಕೆ ಹೋಗಿ ಬಂದರು. ಜೀವನ್ ಮೆ ಏಕ್ ಬಾರ್ ಆನಾ (ಜಾನಾ?) ಸಿಂಗಪುರ ಎನ್ನುವುದನ್ನು ಖಾತರಿ ಮಾಡಲು ಅಲ್ಲ, ಸರ್ಕಾರಿ ಕೆಲಸದ ಮೇಲೆ, ವಾಣಿಜ್ಯ ನಿಯೋಗದ ಜತೆ. ಅಂದರೆ ಜತೆಯಲ್ಲಿ ಅಧಿಕಾರಿಗಳು, ಉದ್ಯಮಿಗಳು ಎಲ್ಲ ಇದ್ದರೂ ತಾನೆ? ಖಂಡಿತ. ಆದರೆ ಸುದ್ದಿ ಅದಲ್ಲ. ಸುದ್ದಿ ಏನಪ್ಪಾ ಅಂದ್ರ ದೀದಿ ಜತೆಯಲ್ಲಿ ಇಬ್ಬರು ವಿಐಪಿಗಳಿದ್ದರು. ವಿಐಪಿ? ವೆರಿ ಆರ್ಡಿನರಿ ಪರ್ಸನ್. ಯಾರೀ ವಿಐಪಿಗಳು ಎಂದರೆ ಒಬ್ಬ ಪೊಲೀಸ್ ಪೇದೆ ಇನ್ನೊಬ್ಬ ಜವಾನ ಅಥವಾ ಕ್ಲಾಸ್ 4 ನೌಕರ. ಇವರಿಗೇನು ಕೆಲಸ ಎಂದು ಕೇಳಿದಿರಾ? ಪೊ ಪೇ ದೀದಿಯ ಮೊಬೈಲ್ ಹಿಡಿಯುವ ಕೆಲಸ ಮತ್ತು ಜವಾನ ಅಥವಾ ಕ್ಲಾಸ್ 4 ನೌಕರನ ಕೆಲಸ ಎಂದರೆ ದೀದಿಗೆ ಬೇಕಾದ ಫೈಲ್‌ಗಳನ್ನು ಹಿಡಿಯುವುದು. ವಿದೇಶ ಯಾತ್ರೆ ಸಂಭವ ಎಂದು ಇವರಿಬ್ಬರ ನಿತ್ಯ ಭವಿಷ್ಯದಲ್ಲಿ ಬರೆದಿದ್ದರೂ ಹೀಗೆ ಮುಖ್ಯ ಮಂತ್ರಿಗಳ ಜತೆ ಹೋಗುವುದೆಂದರೆ...ವ್ಹಾ ವ್ಹಾ..